ಹೀಗಿರುವುದರಿಂದ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ವಿಷಯಗಳನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುವುದಾದರೆ, ಅದು ಸದಸ್ಯರಿಗಿರುವ ಕೆಲವು ಅವಕಾಶಗಳನ್ನು ಮೊಟಕುಗೊಳಿಸಿದಂತಾಗುತ್ತದೆ.

ಅಧ್ಯಕ್ಷರು.—ಸದಸ್ಯರು ಕೊಟ್ಟ ವಿಚಾರ ಸರ್ಕಾರಕ್ಕೆ ಹೋಗಿ ಅಲ್ಲಿಂದ ಉತ್ತರ ಬರುವವರೆಗಾದರೂ ಅವಕಾಶ ಕೊಡಬೇಕು.

ಶ್ರೀ ಎಚ್ ಡಿ. ದೇವೇಗೌಡ.—ವಸಂತರಾವ್ ಪಾಟೀಲರ ಪ್ರಕರಣ ಬಯಲಿಗೆ ಬಂದ ಮೇಲೆ, ಇಂತಹ ಹಲವಾರು ಪ್ರಕರಣಗಳು ನಮ್ಮ ಗಮನಕ್ಕೆ ಬರುತ್ತಿವೆ. ಆ ಬಗ್ಗೆ ತಮ್ಮ ಮೂಲಕ ನಾವೊಂದು ಸೂಚನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ. Unless the consent is given by the, Hon'ble Speaker, the matter cannot be taken up ತಾವು ಅಪ್ಪಣೆ ಕೊಡಬೇಕಾದರೆ ಅದಕ್ಕೆ ನಾವು ಚರ್ಚೆ ಮಾಡಬೇಕಾಗುತ್ತದೆ; ನಮ್ಮ ಅಭಿಪ್ರಾಯವನ್ನು ತಮಗೆ ತಿಳಿಸಬೇಕಾಗುತ್ತದೆ.

Budget Estimates for 1977-78—Demand for grants

Demand Nos. 20 and 22 [Debate Continued]

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆ ಬೇಡಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನಾಡಬಯಸುತ್ತೇನೆ. 1973-74 ರಲ್ಲಿ ವಿದ್ಯಾ ಇಲಾಖೆಯಲ್ಲಿ ಅರವತ್ತೇಳು ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, 1976-77 ರಲ್ಲಿ ನೂರ ಹತ್ತು ಕೋಟಿ ರೂಪಾಯಿಗಳು ವ್ಯಯವಾಗಿದೆ. ಈ ಅವಧಿಯಲ್ಲಿ ಸುಮಾರು ನಲವತ್ತೂರು ಕೋಟಿ ರೂಪಾಯಿಗಳು ವಿದ್ಯಾ ಇಲಾಖೆಗೆ ಹೆಚ್ಚು ಖರ್ಚಾಗಿದೆ ಎನ್ನುವುದು ವ್ಯಕ್ತವಾಗುತ್ತದೆ. ವಿದ್ಯಾಭ್ಯಾಸ ಇಲಾಖೆಗೆ ಒದಗಿಸಿರುವ ಹಣದಲ್ಲಿ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಶೇಕಡ ಎಪ್ಪತ್ತೊಂಭತ್ತು ಭಾಗದಷ್ಟು ಖರ್ಚಾಗಿದ್ದು, ಉಳಿದಿದದ್ದು ವಿಶ್ವವಿದ್ಯಾನಿಲಯಗಳಿಗೆ, ಸಂಕೇತಕ ಶಿಕ್ಷಣ ಮತ್ತು ವಿಶೇಷ ವಿದ್ಯಾಭ್ಯಾಸದ ಕ್ಷೇತ್ರಗಳಿಗಾಗಿ ಖರ್ಚಾಗಿದೆ ಎನ್ನುವುದು ವರದಿಯಿಂದ ಗೊತ್ತಾಗುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿರುವುದು ಸ್ವಾಗತಾರ್ಹವಾದ ವಿಚಾರ. ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚಾಗಿದ್ದರೂ ಸ್ವಾತಂತ್ರ್ಯ ಬಂದಮೇಲೆ ಇವತ್ತಿನವರೆಗೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟರೂ, ನಿರಕ್ಷರಕುಕ್ಷಿಗಳ ಸಂಖ್ಯೆ ಮಾತ್ರ ವರ್ಷೇ ವರ್ಷ ಹೆಚ್ಚಾಗುತ್ತಿರುವುದು ಬಹಳ ಕಳವಳವನ್ನುಂಟು ಮಾಡುವ ವಿಚಾರವಾಗಿದೆ. ಗ್ರಾಮಾಂತರ ಪ್ರದೇಶಗಳ ಕಡೆ ಶಿಕ್ಷಣದ ಅಭಿವೃದ್ಧಿಗೆ ಸರ್ಕಾರ ಎಷ್ಟು ಪ್ರಯತ್ನ ಪಟ್ಟರೂ ಅಲ್ಲಿರುವ ನಿರಕ್ಷರರ ಸಂಖ್ಯೆ ಕಡಿಮೆಯಾಗದೆ ಹೆಚ್ಚುತ್ತಾ ಇರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇದು ಬಹಳ ಕಳವಳಕಾರಿಯಾದುದು. ಇದರಿಂದ ವಿದ್ಯಾಭ್ಯಾಸ ಇಲಾಖೆಗೆ ಇನ್ನೂ ಹೆಚ್ಚು ಹಣದ ಅವಶ್ಯಕತೆಯಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಅದು ಮಾತ್ರವಲ್ಲ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಅವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಒಂದು ಯೋಜನೆಯನ್ನು ಸರ್ಕಾರದವರು ಕೈಗೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಪ್ರಾಥಮಿಕ ಕ್ಷೇತ್ರದಲ್ಲಿ 1975-76 ರಲ್ಲಿ 33,441 ಶಾಲೆಗಳೂ, 1976-77 ರಲ್ಲಿ 33,137 ಶಾಲೆಗಳೂ ಇವೆ ಎಂದು ವರದಿಯಿಂದ ಗೊತ್ತಾಗುತ್ತದೆ. ಈ ಅಂಕಿ-ಸಂಖ್ಯೆಯನ್ನು ಗಮನಿಸಿದರೆ, ಒಂದು ವರ್ಷದಲ್ಲಿ 304 ಶಾಲೆಗಳು ಕಡಿಮೆಯಾಗಿರುವುದು ಕಂಡುಬರುತ್ತದೆ. ಈ ಸಂಖ್ಯೆ ತಪ್ಪೇ ಅಥವಾ ವಾಸ್ತವ್ಯವೆ? ವಾಸ್ತವ್ಯವಾಗಿದ್ದರೆ ಬಹಳ ಶೋಚನೀಯ ಸ್ಥಿತಿ ಎಂದು ಹೇಳುತ್ತೇನೆ. ಸಾಮಾನ್ಯವಾಗಿ ಶಾಲೆಗಳು ವರ್ಷೇ ವರ್ಷೇ ಹೆಚ್ಚುವುದರ ಬದಲು ಕಡಮೆಯಾಗುತ್ತಿರುವುದು ಏತಕ್ಕೆ ಎಂದು ಮಾನ್ಯ ಮಂತ್ರಿಗಳು ವಿವರಿಸಬೇಕು. 1975-76 ರಲ್ಲಿ 42.68 ಲಕ್ಷ ವಿದ್ಯಾರ್ಥಿಗಳಿದ್ದರೆ, 1976-77 ರಲ್ಲಿ 45.1 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಅಂದರೆ ಒಂದು ವರ್ಷದಲ್ಲಿ 2.47 ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ, ಶಾಲೆಗಳ ಸಂಖ್ಯೆ ಕಡಿಮೆಯಾಗಿದೆ. ಈಗ ವಿದ್ಯಾರ್ಥಿಗಳ ಅಭಾವದಿಂದ ಶಾಲೆಗಳನ್ನು ಮುಚ್ಚಬೇಕಾದ ಸಂದರ್ಭವಿಲ್ಲದಿರುವುದರಿಂದ, ಬೇರೆ

ಯಾವುದೋ ಕಾರಣಗಳಿಂದಾಗಿ ಈ ಶಾಲೆಗಳನ್ನು ಮುಚ್ಚಲಾಗಿದೆ ಅಥವಾ ಇವು ನಡೆಯುತ್ತಿಲ್ಲ ಎಂದು ನಾವು ಭಾವಿಸಬೇಕಾಗುತ್ತದೆ ಹೀಗೆ ಶಾಲೆಗಳ ಸಂಖ್ಯೆ ಕಡಮೆಯಾಗುವುದರ ಪರಿಣಾಮವಾಗಿ, ಈಗಿರುವ ಶಾಲೆಗಳಲ್ಲಿ ಒತ್ತಡ ಜಾಸ್ತಿಯಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಾವು ಕೊಡುತ್ತಿರುವ ಅಂಕಿ-ಅಂಶ ಯಾವ ವರ್ಷದ್ದು ?

ಶ್ರೀ ಬಿ. ವಿ. ಕಕ್ಕಿಲಾಯ.—1976-77 ಮತ್ತು 1977-78ನೇ ಸಾಲಿಗೆ ಸಂಬಂಧಿಸಿದು .

ಶ್ರೀ ಮಲ್ಲಿಕಾರ್ಜುನ ಖರ್ಗೆ.—1976-77ರಲ್ಲಿ 31,597 ಸರ್ಕಾರಿ ಶಾಲೆಗಳೂ, 1,540 ಖಾಸಗಿ ಶಾಲೆಗಳೂ ಮತ್ತು 1977-78 ರಲ್ಲಿ, 31,800 ಸರ್ಕಾರಿ ಶಾಲೆಗಳೂ 1,600 ಖಾಸಗಿ ಶಾಲೆಗಳು ಇರುವುದು.

ಶ್ರೀ ಬಿ. ವಿ. ಕಕ್ಕಿಲಾಯ.—ಆದರೆ, ಇಲ್ಲಿ 33.441 ಎಂದು ಇದೆ; ದಯವಿಟ್ಟು ಇದನ್ನು ತಿದ್ದುಪಡಿ ಮಾಡಿಕೊಳ್ಳಿ. ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ಶಾಲೆಗಳ ಅವಶ್ಯಕತೆ ಹೆಚ್ಚು ಇದೆ. ವಿದ್ಯಾರ್ಥಿಗಳ ಏರುತ್ತಿರುವ ಸಂಖ್ಯೆಯ ಪ್ರಮಾಣದಲ್ಲಿ ಶಾಲೆಗಳ ಸಂಖ್ಯೆ ಏರುತ್ತಿಲ್ಲ. ಅದರ ಜೊತೆಗೆ ವಿದ್ಯಾರ್ಥಿಗಳ ಏರುತ್ತಿರುವ ಸಂಖ್ಯೆಯ ಪ್ರಮಾಣದಲ್ಲಿ ಅಧ್ಯಾಪಕರ ಸಂಖ್ಯೆಯೂ ಹೆಚ್ಚುತ್ತಿಲ್ಲ. ಸುಮಾರು ನಲವತ್ತು ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನಿರಬೇಕೆಂಬುದು ಸರ್ಕಾರದ ಅಭಿಪ್ರಾಯ. ಕಳೆದ ವರ್ಷದಲ್ಲಿ ಒಂದು ಸಾವಿರ ಅಧ್ಯಾಪಕರುಗಳ ಹುದ್ದೆಯನ್ನು ಸೃಷ್ಟಿಮಾಡಿ, ಶಾಲೆಗಳಿಗೆ ಅವರನ್ನು ನೇಮಕ ಮಾಡುವುದಕ್ಕೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದರು. ಇವರಲ್ಲಿ ಎಷ್ಟು ಜನರನ್ನು ಈಗಾಗಲೇ ನೇಮಕ ಮಾಡಿದ್ದಾರೆನ್ನುವ ವಿಚಾರ ನಮಗೆ ಇಲ್ಲಿ ಕಂಡುಬರುತ್ತಿಲ್ಲ. ಹಿಂದೆ ಇದ್ದ ಅಧ್ಯಾಪಕರ ಸಂಖ್ಯೆಗೆ ಈ ಸಾವಿರ ಅಧ್ಯಾಪಕರ ಸಂಖ್ಯೆಯನ್ನು ಕೂಡಿಸಿದರೂ ಸಹ, ವಿದ್ಯಾರ್ಥಿಗಳ ಪ್ರಮಾಣಕ್ಕನುಗುಣವಾಗಿ ನೋಡಿದರೆ ಅವರ ಸಂಖ್ಯೆ ಕಡಿಮೆಯೇ ಇದೆ. ನಲವತ್ತು ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನಿರಬೇಕಾದದ್ದು, ಇಂದು 44-45 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನಿದ್ದಾನೆ ಇದು ಸಾಮಾನ್ಯಾಂಶ. ಆದರೆ ವಾಸ್ತವಿಕವಾಗಿ ಕೆಲವುಕಡೆಗಳಲ್ಲಿ ಅವಶ್ಯಕತೆಯಷ್ಟು ಅಧ್ಯಾಪಕರು ಇರಬಹುದು ! ಕೆಲವುಕಡೆಗಳಲ್ಲಿ ಅಗತ್ಯಕ್ಕಿಂತ ಅರ್ಧಕ್ಕೂ ಕೂಡ ಅಧ್ಯಾಪಕರುಗಳು ಇಲ್ಲ. ಈ ವಿಚಾರದಲ್ಲಿ ಮಿತ್ರರಾದ ಸಯನರ್‌ರವರು ಕೂಡ ಹೇಳಿದ್ದಾರೆ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವನ್ನೇ ಹೇಳುತ್ತೇನೆ. ನಮ್ಮ ಕಡೆ ಎಲ್ಲಾ ಹಳ್ಳಿಗಳಲ್ಲಿಯೂ ಶಾಲೆಗಳು ಇದ್ದು; ಬಹಳಮಂದಿ ವಿದ್ಯಾಭ್ಯಾಸವನ್ನು ಕೂಡ ಮಾಡುತ್ತಿದ್ದಾರೆ. ಆದರೆ, ಅಧ್ಯಾಪಕರ ಸಂಖ್ಯೆ ಯಾವ ಶಾಲೆಯಲ್ಲಿಯೂ ಕೂಡ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಇಲ್ಲ ಎನ್ನುವುದು ಬಹಳ ಸ್ಪಷ್ಟ. ಅಷ್ಟೇ ಅಲ್ಲ ಕೆಲವುಕಡೆಗಳಲ್ಲಿ ಅಧ್ಯಾಪಕರು ವರ್ಗವಾಗಿದ್ದಾಗ; ರಜೆಯ ಮೇಲಿದ್ದಾಗ ಅಂಥ ಸಂದರ್ಭಗಳಲ್ಲಿ ತಿಂಗಳಾನುಗಟ್ಟಲೆಯಾದರೂ ಕೂಡ ತಾತ್ಕಾಲಿಕವಾಗಿಯು ಉಪಾಧ್ಯಾಯರನ್ನು ಕೊಡುವುದಿಲ್ಲ; ಇದರಿಂದ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೆ ? ಇನ್ನು ಖಾಸಗಿಯಾಗಿ ನಡೆಸತಕ್ಕ ಪ್ರಾಥಮಿಕ ಶಾಲೆಗಳಿಗೆ ಅಧ್ಯಾಪಕರನ್ನು ಬೇಕಾದರೆ ಕೊಡುತ್ತೀರಿ, ಅವರಿಗೆ ಕೊಡಬೇಕಾದ ಸಂಬಳ ಪೂರ್ತಿಯಾಗಿ ಸರ್ಕಾರವೇ ಕೊಡುತ್ತದೆ. ಸರ್ಕಾರ ಖಾಸಗೀಯವರಿಗೆ ಅಧ್ಯಾಪಕರನ್ನು ಕೊಟ್ಟು ಸರ್ಕಾರಿ ಶಾಲೆಗಳಿಗೆ ವರ್ಷಾನುಗಟ್ಟಲೇ ಆದರೂ ಕೊಡದೇ ಇರುವುದಕ್ಕೆ ಕಾರಣ ಏನು ? ಇದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರ ಪೋಸ್ಟುಗಳನ್ನು ಕ್ರಿಯೇಟ್ ಮಾಡಿ ಸರ್ಕಾರಿ ಶಾಲೆಗಳಿಗೆ ಅಧ್ಯಾಪಕರನ್ನು ಒದಗಿಸುವ ವಿಚಾರದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತೇನೆ. ಖಾಸಗಿಯವರು ಚೆನ್ನಾಗಿ ಶಾಲೆಗಳನ್ನು ನಡೆಸಬೇಕೆಂಬ ಭಾವನೆಯಿಂದಲೇ ? ಸರ್ಕಾರಿ ಶಾಲೆಗಳು ಚೆನ್ನಾಗಿ ನಡೆಯಬಾರದೆಂಬ ಭಾವನೆಯೇ ? ಏಕೆಂದರೆ, ಹಿಂದೆ ಆ ರೀತಿ ಭಾವನೆಯಿತ್ತು. ನನ್ನ ಅಭಿಪ್ರಾಯದಲ್ಲಿ ಸರ್ಕಾರಿ ಶಾಲೆಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದಲ್ಲದೆ ಶಾಲೆಗಳಿಗೆ ಬೇಕಾದ ಪೀಠೋಪಕರಣಗಳು ಮತ್ತು ಲೈಬ್ರರಿ ಕೊರತೆ ಯಾವತ್ತೂ ಬರಬಾರದು. ಸರ್ಕಾರಿ ಶಾಲೆಗಳು ಆದರ್ಶಶಾಲೆಗಳಾಗಿ ನಡೆಯಬೇಕು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಾಸಗಿಯವರು ನಡೆಸುವುದಕ್ಕೆ ಅವಕಾಶವಿಲ್ಲದಂತೆ ಮಾಡಬೇಕಾದುದು ಸೂಕ್ತ. ಏಕೆಂದರೆ, ಇವರು ವಿದ್ಯಾಭ್ಯಾಸ ಕ್ಷೇತ್ರವನ್ನು ವ್ಯಾಪಾರೀ ಕ್ಷೇತ್ರವನ್ನಾಗಿ ಮಾಡುತ್ತಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಲ್ಲಿ ಆಕರ್ಷಣೆ ಇಲ್ಲದೇ ಇದ್ದರೂ ಕೂಡ, ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಪ್ರೌಢ ಶಾಲೆಗಳಲ್ಲಿ ಅವ್ಯವಹಾರಗಳು ನಡೆಯುತ್ತಲೇ ಇವೆ; ನಾನು ಮತ್ತೆ ಮತ್ತೆ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಬೆಂಗಳೂರು ನಗರದಲ್ಲಿಯೇ ಅಲ್ಲ; ಹಳ್ಳಿಪ್ರದೇಶಗಳಲ್ಲಿಯೂ ಕೂಡ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ರಾಷ್ಟ್ರೀಕರಣ ಮಾಡಿ, ಸರ್ಕಾರ ಅವುಗಳನ್ನು ವಹಿಸಿಕೊಂಡು ನಡೆಸುವಂತೆ ತೀರ್ಮಾನವನ್ನು ತೆಗೆದುಕೊಳ್ಳಬೇಕು; ಇನ್ನು ಉಳಿಕೆ ವಿಚಾರಗಳ ಬಗ್ಗೆ ಆಮೇಲೆ ಯೋಚನೆ ಮಾಡಿ; ವಿದ್ಯಾಭ್ಯಾಸದ ದೃಷ್ಟಿಯಿಂದ ಈ ವಿಚಾರವನ್ನು ಪರಿಗಣನೆಮಾಡಿ, ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತೇನೆ. ಏಕೆಂದರೆ; ಈ ಕ್ಷೇತ್ರದಲ್ಲಿ ಹೆಚ್ಚಿನ ಮಟ್ಟದಲ್ಲಿ ಹಣವನ್ನು ಖರ್ಚುಮಾಡಿದ್ದೀರಿ; ಇದರಲ್ಲಿ ಏನು ಯೋಚನೆ ಮಾಡಬೇಕಾದ ಪ್ರಮೇಯ ಇಲ್ಲ; ಸರ್ಕಾರ ಈ ಶಾಲೆಗಳನ್ನು ತೆಗೆದುಕೊಂಡು ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಏಕ ಉಪಾಧ್ಯಾಯರ ಶಾಲೆಗಳು ಎಲ್ಲಾ ಕಡೆಗಳಲ್ಲೂ ಇವೆ. ಈ ಶಾಲೆಗಳನ್ನು ನೋಡಿದರೆ ನಮಗೆ ಬೇಸರವಾಗುತ್ತದೆ. ಇಲ್ಲಿ ಶಾಲೆಗೆ ಬರತಕ್ಕ ಮಕ್ಕಳು ಏನು ಕಲಿಯುತ್ತಾರೋ ಗೊತ್ತಿಲ್ಲ. ಒಬ್ಬ ಅಧ್ಯಾಪಕ ನಾಲ್ಕು ಶಾಲೆಗಳಿಗೆ ಹೇಗೆ ಪಾಠ ಹೇಳುತ್ತಾನೋ ಗೊತ್ತಿಲ್ಲ. ಈ ಶಾಲೆಗಳಿಗೆ ಅವಶ್ಯಕವಾದಷ್ಟು ಅಧ್ಯಾಪಕರನ್ನು ಕೊಟ್ಟು, ಇವುಗಳ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಏಕ ಉಪಾಧ್ಯಾಯರ ಶಾಲೆಗಳಲ್ಲಿ ಕೆಲವು ಕಡೆ ಉಪಾಧ್ಯಾಯರೇ ಇರುವುದಿಲ್ಲ ಹೆಸರಿಗೆ ಮಾತ್ರ ಶಾಲೆ ಇರುತ್ತದೆ; ಅಲ್ಲಿ ಹೇಳುವವರು ಮತ್ತು ಕೇಳುವವರು ಯಾರು ಇರುವುದಿಲ್ಲ. ನನ್ನ ಕ್ಷೇತ್ರದಲ್ಲಿಯೇ ಒಂದು ಕಡೆ ಉಪಾಧ್ಯಾಯರು ಇಲ್ಲ; ಅಲ್ಲಿ ಮಕ್ಕಳೂ ಇಲ್ಲ; ಯಾರು ಅಲ್ಲಿಗೆ ಹೋಗುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಹೆಸರು ಕೊಟ್ಟರೆ ಒಳ್ಳೆಯದು.

ಶ್ರೀ ಬಿ ವಿ ಕಕ್ಕಿಲಾಯ.—ಹೆಸರು ಕೊಡುತ್ತೇನೆ; ಬಂಟ್ವಾಳ ತಾಲ್ಲೂಕಿನಲ್ಲಿದೆ. ಏಕ ಉಪಾಧ್ಯಾಯರ ಶಾಲೆಗಳ ಕ್ರಮವನ್ನೇ ಬದಲಾವಣೆ ಮಾಡುವುದು ಒಳ್ಳೆಯದು. ಇನ್ನು ಸ್ವಲ್ಪ ಹೆಚ್ಚಿಗೆ ಅಧ್ಯಾಪಕರನ್ನು ನೇಮಕ ಮಾಡಿ ಪ್ರಾಥಮಿಕ ಶಾಲೆಗಳ ರೀತಿ ನಡೆಸಿದರೆ ಅನುಕೂಲವಾಗುತ್ತದೆ. ಇನ್ನು ಒಂದು ಸಾವಿರ ಅಧ್ಯಾಪಕರ ಹುದ್ದೆಗಳನ್ನು ಹೊಸದಾಗಿ ಮಾಡಿದ್ದೀರಿ; ಈಗ ಇರುವ ವಿದ್ಯಾರ್ಥಿಗಳ ಸಂಖ್ಯೆಗೆ ಇದು ಸಾಕಾಗುವುದಿಲ್ಲ; ಇದು ಬಹಳ ಕಡಮೆಯಾಗುತ್ತದೆ. ನನ್ನ ಲೆಕ್ಕದ ಪ್ರಕಾರ ಇನ್ನೂ 1,5 0 ರಷ್ಟು ಅಧ್ಯಾಪಕರು ಬೇಕಾಗುತ್ತದೆ; ಇದು 1:40ರ ರ್ಯಾಷಿಯೋ ಪ್ರಕಾರ ಇಷ್ಟು ಬೇಕಾಗುತ್ತದೆ. ಹೆಚ್ಚುಕಡಿಮೆ ಇಷ್ಟೇ ಜನ ತರಪೇತಿ ಪಡೆದ ಅಭ್ಯರ್ಥಿಗಳು ರಾಜ್ಯದಲ್ಲಿದ್ದಾರೆ. ಆದುದರಿಂದ ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಅವಶ್ಯಕವಾದಷ್ಟು ಹುದ್ದೆಗಳನ್ನು ಮಾಡಿ; ಅಧ್ಯಾಪಕರನ್ನು ನೇಮಿಸಿ ಆ ಮೂಲಕ ನಿರುದ್ಯೋಗ ತೊಲಗಿಸಿದಂತಾಗುವುದಲ್ಲದೆ, ಸರ್ಕಾರ ಶಾಲೆಗಳಿಗೆ ಸಾಕಷ್ಟು ಅಧ್ಯಾಪಕರನ್ನು ಕೊಡುವುದಕ್ಕೆ ಪ್ರಯತ್ನಪಡುತ್ತಾರೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರಿ ಹಾಗೂ ಖಾಸಗಿ ಪ್ರೌಢ ಶಾಲೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಪ್ರೌಢಶಾಲೆಗಳನ್ನು ಸರ್ಕಾರದವರೇ ನಡೆಸುವುದು ಸೂಕ್ತ. ಖಾಸಗಿಯವರು ಪ್ರೌಢಶಾಲೆಗಳನ್ನು ನಡೆಸುವುದು ಸೂಕ್ತವೂ ಅಲ್ಲ ಇವತ್ತು ಖಾಸಗೀಯವರಿಗೆ ಸರ್ಕಾರ ಶಾಲೆಗಳನ್ನು ಕೊಡುವಾಗ 50 ಸಾವಿರ ರೂಪಾಯಿ ಕೇಳುತ್ತೀರಿ. 5 ವರ್ಷಗಳವರೆಗೆ ಯಾವುದೇ ರೀತಿಯ ಗ್ರಾಂಟ್ ಕೊಡುವುದಿಲ್ಲ. ಆದರೂ 5 ವರ್ಷಗಳಾದ ಮೇಲಾದರೂ ಲಾಭ ಮಾಡುವ ಉದ್ದೇಶದಿಂದ ಇವತ್ತು ಸರ್ಕಾರದ ಖಜಾನೆಗೆ 50 ಸಾವಿರ ರೂಪಾಯಿಗಳ ಠೇವಣಿ ಇಡಲಿಕ್ಕೂ ಪ್ರಯತ್ನಮಾಡುತ್ತಾರೆ. ಇದಕ್ಕೆ ಪ್ರೋತ್ಸಾಹ ಕೊಡಬಾರದು ಎನ್ನುವುದೇ ನನ್ನ ಅಭಿಪ್ರಾಯ ನನ್ನ ಅಭಿಪ್ರಾಯದಲ್ಲಿ ಸರ್ಕಾರದಿಂದಲೇ ಶಾಲೆಗಳನ್ನು ನಡೆಸುವುದು ಸೂಕ್ತ ಇವತ್ತು ಒಂದು ಪ್ರೌಢಶಾಲೆಯನ್ನು ತೆರೆಯಬೇಕಾದರೆ 50 ಸಾವಿರ ರೂಪಾಯಿಗಳ ಠೇವಣಿ ಇಡಬೇಕೆಂಬ ನಿಯಮ ಮಾಡಿದ್ದೀರಿ. ಒಂದು ಊರಿನವರು ಆ ಊರಿನಲ್ಲಿ ಒಂದು ಹೈಸ್ಕೂಲು ಮಾಡಿಕೊಳ್ಳುವಾಗ ತಮ್ಮಿಂದ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಹಣವನ್ನು ಸಂಗ್ರಹಣೆ ಮಾಡಿ ಸರ್ಕಾರಕ್ಕೆ ಕೊಡುವುದು ಒಳ್ಳೆಯದು. ಆ ಮೂಲಕ ಸರ್ಕಾರ ಸಾರ್ವಜನಿಕರ ಸಹಕಾರ ಪಡೆಯುವುದು ಸೂಕ್ತವಾದುದು; ಆ ಬಗ್ಗೆ ನನ್ನ ಅಭ್ಯಂತರ ಏನೂ ಇಲ್ಲ. ಆದರೆ ಸರ್ಕಾರ ಹಾಕಿರುವಂತೆ ಕಟ್ಟಳೆ ಮಾತ್ರ ಬಹಳ ಜಾಸ್ತಿಯಾಗುತ್ತದೆ. 50 ಸಾವಿರ ರೂಪಾಯಿಗಳನ್ನು ಸಂಗ್ರಹಣೆ ಮಾಡಿ ಕೊಡುವುದು ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಆ ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ಅಲ್ಲಿನ ಶಾಸಕರ ಹಾಗೂ ಇತರ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇರತಕ್ಕ ಜನರೊಂದಿಗೆ ವಿಚಾರವಿನಿಮಯ ಮಾಡಿ ಕಡಿಮೆ ಮಾಡಬೇಕು. ಇದನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಿಗಧಿಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಪಟ್ಟಣಗಳಲ್ಲಿ ಹಣ ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಿದ್ದು; ಆರ್ಥಿಕ

ಪರಿಸ್ಥಿತಿಯಲ್ಲಿ ಚೆನ್ನಾಗಿರುವ ಕಡೆ ವಸೂಲು ಮಾಡಿದರೂ ಪರವಾಗಿಲ್ಲ. ಹತ್ತಾರು ಮೈಲಿಗಳಲ್ಲಿ ಶಾಲೆಗಳು ಇಲ್ಲದೇ ಇರುವ ಕಡೆ ಈ ನಿಯಮವನ್ನು ಸಡಿಲ ಮಾಡುವುದು ಒಳ್ಳೆಯದೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಸಂಪೂರ್ಣವಾಗಿ ನನ್ನ ಬೆಂಬಲಕೊಡುತ್ತೇನೆ. ಪ್ರಾಥಮಿಕ ಶಾಲೆಗಳಲ್ಲಿ ಪುಸ್ತಕ ಭಂಡಾರ ತೆರೆಯುವುದರಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು. ಇವತ್ತು 4500 ಪುಸ್ತಕ ಭಂಡಾರಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದೀರಿ. ಪೀಠೋಪಕರಣಗಳನ್ನು ಒದಗಿಸುವುದರಲ್ಲಿಯೂ ಗಮನಕೊಡಬೇಕು. ಖಾಸಗಿ ಮ್ಯಾನೇಜ್‌ಮೆಂಟಿನವರು ಉಪಾಧ್ಯಾಯರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿರತಕ್ಕ ಸಂದರ್ಭಗಳಲ್ಲಿ; ಹುಬ್ಬಳ್ಳಿ ಬಾಲರಡ್ಡಿ ವಿಚಾರಗೊತ್ತಿದೆ; ಅದೇರೀತಿ ಕಟ್‌ಪಾಡಿ ಶಂಕರ ನಾರಾಯಣ್ ಎನ್ನುವವರು ಮತ್ತು ಪುಂಜೆ ಮುಖ್ಯೋಪಾಧ್ಯಾಯರನ್ನು ಅಲ್ಲಿನ ಮ್ಯಾನೇಜ್‌ಮೆಂಟ್‌ನವರು ಸಸ್ಪೆಂಡ್ ಮಾಡಿ ಇಟ್ಟಿದ್ದಾರೆ. ಬಹಳಕಾಲದಿಂದ ಅವರಿಗೆ ಮೆಂಟೆನೆನ್ಸ್ ಕೊಟ್ಟಿಲ್ಲ ವಿಚಾರಣೆ ನಡೆಸಿಲ್ಲ. ವಿದ್ಯಾ ಇಲಾಖೆಯಿಂದ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಆದೇಶ ಕೊಟ್ಟಿದ್ದರೂ ಇನ್ನು ಕೂಡ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರ ಅಧಿಕಾರ ತೆಗೆದುಕೊಳ್ಳಬೇಕು. ಈ ಅಧ್ಯಾಪಕರ ಬಗ್ಗೆ ಅನ್ಯಾಯವಾಗಿದೆ, ಎಂದು ತಮ್ಮ ಗಮನಕ್ಕೆ ಬಂದಿದ್ದು ಅವರನ್ನು ವಾಪಸ್ಸು ಬೇಕು ಎಂದು ಹೇಳಿತೆಗೆದುಕೊಳ್ಳದ್ದೀರಾ. ಅದರಂತೆ ಅವರನ್ನು ವಾಪಸ್ಸು ತೆಗೆದುಕೊಳ್ಳುವಂತೆ ಮಾಡ ಇನ್ನೊಂದು ವಿಷಯ ಹೇಳಬೇಕು ಎಂದರೆ ಅಧ್ಯಾಪಕರಲ್ಲದ ನೌಕರರಿಗೂ ಕೂಡ ಈ ಒಂದು ವಿದ್ಯಾ ಇಲಾ ಖೆಯಲ್ಲಿ ರಕ್ಷಣೆ ಸಿಕ್ಕಬೇಕು. ಇನ್ನು ತಾವು ಮಾಡಿರತಕ್ಕಂಥ ಮೌಲ್ಯಮಾಪನ ಕೇಂದ್ರದ ಬಗ್ಗೆ ಹೇಳ ಬೇಕು ಎಂದರೆ ಇವೊತ್ತು ಮಂಗಳೂರಿನಿಂದ ಬೆಂಗಳೂರಿಗೆ ಹೋಗುತ್ತಾರೆ. ಅಲ್ಲಿಗೆ ಹೋದಂಥ ಉಪಾ ಬೇಕು ಎಂದು ಕೇಳಿಕೊಳ್ಳತ್ತೇನೆ ಧ್ಯಾಯರಿಗೆ ಉಳಿದುಕೊಳ್ಳಲಿಕ್ಕೆ ಅನುಕೂಲ ಇರುವುದಿಲ್ಲ ಕುಡಿಯು ವುದಕ್ಕೆ ನೀರಿನ ಅನುಕೂಲ ಇರುವುದಿಲ್ಲ, ಇದರಿಂದಾಗಿ ಅನಾರೋಗ್ಯಕ್ಕೆ ತುತ್ತಾಗ ಬೇಕಾದಂಥ ಸಂದರ್ಭ ಗಳುಬಂದಿದ್ದು ನನಗೆ ತಿಳಿದುಬಂದಿದೆ. ಇವೊತ್ತು ಮಹಿಳಾ ಉಪಾಧ್ಯಾಯರು ಮೌಲ್ಯಮಾಪನ ಕೇಂದ್ರ ಗಳಿಗೆ ಹೋದಾಗ ಅವರಿಗೆ ಸರಿಯಾದಂಥ ವ್ಯವಸ್ಥೆ ಒದಗಿಸದೇ ಇರುವುದು ಚೆನ್ನಾಗಿ ಕಾಣುವುದಿಲ್ಲ. ಆದುದರಿಂದ ಸರಿಯಾದಂಥ ವ್ಯವಸ್ಥೆಯನ್ನು ಮೌಲ್ಯಮಾಪನ ಕೇಂದ್ರಗಳಲ್ಲಿ ಒದಗಿಸುವುದಕ್ಕೆ ವಿದ್ಯಾ ಇಲಾಖೆಯ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಬೇಕು, ಈ ಬಗ್ಗೆ ಕ್ರಮ ಮುಂದುವರೆ ಸಲುಮಾನ್ಯ ವಿದ್ಯಾಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು, ಎಂದು ಹೇಳಿ ಇಷ್ಟುಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 P.M.

† ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ವಿದ್ಯಾ ಇಲಾಖೆ ಮೇಲೆ ಬಂದಿರತಕ್ಕ ಬೇಡಿಕೆಗೆ ನಾನು ಬೆಂಬಲಿಸಿ ಕೆಲವು ವಿಚಾರ ಹೇಳಬೇಕೆಂದು ಇಷ್ಟಪಡು ತ್ತೇನೆ. ಕಳೆದ ಐದು ವರ್ಷದಿಂದ ವಿದ್ಯಾ ಇಲಾಖೆಯಲ್ಲಿ ಆಗಿರತಕ್ಕ ಪ್ರಗತಿಯನ್ನು ತುಲನೆ ಮಾಡಿ ನೋಡುವುದಾದರೆ, ಹಿಂದೆ ಯಾವ ಕಾಲದಲ್ಲೂ ಆಗದೇ ಇದ್ದಷ್ಟು ಪ್ರಗತಿಯಾಗಿದೆ, ಆದುದರಿಂದ ಆ ಬಗ್ಗೆ ಮೆಚ್ಚುಗೆ ಮಾತನ್ನು ವ್ಯಕ್ತಪಡಿಸಬೇಕಾಗಿದೆ. ಇವೊತ್ತು ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಶಾಲಾ ಕಾಲೇಜುಗಳ ಬಗ್ಗೆಯಾಗಲಿ, ಅಥವಾ ಹಾಸ್ಟಲುಗಳ ಬಗ್ಗೆಯಾಗಲಿ, ಹೇಳಬೇಕು ಎಂದರೆ ಸಾಕಷ್ಟು ಬಹುತೇಕ ಸಂಖ್ಯೆಯಲ್ಲಿ ಬೆಳೆದು ನಿಂತಿದೆ. ಇದು ನಮ್ಮ ಸರ್ಕಾರಕ್ಕೆ ತರತಕ್ಕ ಕೀರ್ತಿ ಎಂದು ಅಂದು ಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇನ್ನು ಕೆಲವು ವಿಚಾರಗಳನ್ನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ವಯಸ್ಕರ ಶಿಕ್ಷಣ ಸಮಿತಿಯ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ನಿಗಾ ಸಾಲದು ಎಂದು ನನ್ನ ಅಭಿಪ್ರಾಯ. ಈ ದೇಶದಲ್ಲಿ ಎಂಭತ್ತು ಪರ್‌ಸೆಂಟ್ ನಿರಕ್ಷರಸ್ಥರು ಇರುವಂತ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ವಯಸ್ಕರ ಶಿಕ್ಷಣ ಸಮಿತಿ ಸಾಕಷ್ಟು ಕೆಲಸ ಮಾಡಬೇಕಾ ಗುತ್ತದೆ. ನಾವು ಎಲ್ಲ ಜನರನ್ನು ಅಕ್ಷರಸ್ಥರನ್ನಾಗಿ ಮಾಡದೇ ಹೋದರೆ ನಮ್ಮ ಪ್ರಜಾಪ್ರಭುತ್ವಕ್ಕೆ ಬೆಲೆ ಕೊಟ್ಟಂತೆ ಆಗುವುದಿಲ್ಲ. ತಾವು ಈ ಶಿಕ್ಷಣಕ್ಕೆ ಕೊಟ್ಟಿರತಕ್ಕಂಥ ಹಣ ಎಷ್ಟು ಎಂದು ನೋಡುವು ದಾದರೆ ಕೇವಲ ೧೦ ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದೀರಿ. ಇವೊತ್ತು ಕೇವಲ ೧೦ ಲಕ್ಷ ರೂಪಾಯಿ ಹಣದಿಂದ ಇಡೀ ಕರ್ನಾಟಕದ ವಯಸ್ಕರಿಗೆ ಶಿಕ್ಷಣ ಕೊಡಲಿಕ್ಕೆ ಸಾಧ್ಯ ಇದೆಯೋ ಎಂದು ಯೋಚನೆ

ಮಾಡಬೇಕಾಗುತ್ತದೆ. ಇದರ ಬಗ್ಗೆ ನನ್ನ ಸಲಹೆ ಏನು ಎಂದರೆ, ಇದನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಬೇಕು, ಮತ್ತೆ ತಾವು ಕೊಡತಕ್ಕ ಬೆಂಬಲ ಏನು ಇದೆ ಅದು ಇನ್ನಷ್ಟು ಹೆಚ್ಚಬೇಕು ಎಂದು ನನ್ನ ಮನವಿ. ವಯಸ್ಕರ ಶಿಕ್ಷಣ ಸಮಿತಿ ಬೆಳೆದಷ್ಟು ಸಮಾಜದಲ್ಲಿ ಸಾಕಷ್ಟು ವಿದ್ಯಾ ಪ್ರಚಾರವಾಗುತ್ತದೆ. ಆದರೆ ಇತ್ತೀಚಿನ ದಿವಸಗಳಲ್ಲಿ ಏನಾಗಿದೆ ಎಂದರೆ ವಯಸ್ಕರು ವರ್ಷದಲ್ಲಿ ಯಾವುದೋ ಒಂದು ದಿವಸ ಸಮಾರಂಭ ಇಟ್ಟುಕೊಂಡು ಒಬ್ಬ ಶಾಸಕನನ್ನು ಹಿಡಿದುಕೊಂಡು ಹೋಗಿ ಹಳ್ಳಿಯಲ್ಲಿ ಭಾಷಣ ಬಿಗಿಸುವುದು ಮಾಡುತ್ತಾರೆ, ಅವರು ಅದಕ್ಕಿಂತ ಹೆಚ್ಚು ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಹೋಗಿ ಭಾಷಣ ಮಾಡುವಾಗ ವಿದ್ಯಾರ್ಜನೆ ಮಾಡಬೇಕು ಎಂದು ಹೇಳಿಬರುತ್ತೇವೆ. ಅನಂತರ ಅವರಿಗೆ ವಿದ್ಯೆ ಹೇಳಿಕೊಡುವವರು ಯಾರು ಇರುವುದಿಲ್ಲ. ಆದ್ದರಿಂದ ಇವೊತ್ತು ಪ್ರತಿಯೊಂದು ಹಳ್ಳಿಗಳಲ್ಲೂ ಕೂಡ ವಯಸ್ಕರಿಗೆ ಶಿಕ್ಷಣ ಕೊಡತಕ್ಕ ಒಂದು ತಂಡ ನಿರ್ಮಾಣವಾಗಬೇಕು. ದೇಶದಲ್ಲಿ ವಯಸ್ಕರಿಗೆ ಶಿಕ್ಷಣ ಕೊಡತಕ್ಕಂಥ ತಂಡ ನಿರ್ಮಾಣವಾಗದೇ ಹೋದರೆ ನಾವು ಇಷ್ಟು ಖರ್ಚು ಮಾಡಿದ್ದು ವ್ಯರ್ಥವಾಗುತ್ತದೆ. ಇನ್ನು ಖಾಸಗಿ ವಿದ್ಯಾ ಸಂಸ್ಥೆಗಳ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ಇವರ ಬಗ್ಗೆ ನಾನು ಒಂದು ಸಲಹೆ ಸೂಚಿಸಬೇಕು ಎಂದರೆ, ಖಾಸಗಿ ವಿದ್ಯಾಸಂಸ್ಥೆಗಳಿಗೆ ತಾವು ಕೊಡತಕ್ಕ ಗ್ರಾಂಟ್ ನಿಲ್ಲಿಸಿ, ಅಥವಾ ಖಾಸಗಿ ವಿದ್ಯಾಸಂಸ್ಥೆಗಳು ಯಾವುದೇ ರೀತಿಯಲ್ಲೂ ಸಹಾಯ ಧನವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಬಾರದು ಎನ್ನುವ ಒಂದು ಆದೇಶ ಕೊಡಿ. ಇವೊತ್ತು ಸರ್ಕಾರದಿಂದಲೂ ಸಹಾಯ ಪಡೆದುಕೊಂಡು, ಮತ್ತೆ ವಿದ್ಯಾರ್ಥಿಗಳಿಂದಲೂ ಕೂಡ ಈ ಸುಂಕವನ್ನು ವಸೂಲು ಮಾಡುವುದಾದರೆ ಇದು ಬಹಳ ಅನ್ಯಾಯ. ಆದುದರಿಂದ ಈ ಖಾಸಗಿ ಸಂಸ್ಥೆಗಳ ಮೇಲೆ ಸದಾ ಜಾಗ್ರತೆ ವಹಿಸಬೇಕು ಎಂದು ಹೇಳುತ್ತೇನೆ. ಇವೊತ್ತು ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಸುಂಕವನ್ನು ವಸೂಲು ಮಾಡುವುದು ಬಿಡುವುದಿಲ್ಲ ಎಂದು ಹೇಳಿದರೆ ಅದರ ಬಗ್ಗೆ ಏನು ಹೇಳಬೇಕು. ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಇದೆ, ಕಾನ್‌ಸ್ಟಿಟ್ಯೂಷನ್‌ನಲ್ಲಿ ಅವರಿಗೆ ಕೊಟ್ಟಿರತಕ್ಕಂತಹ ಸವಲತ್ತುಗಳನ್ನು ಖಾಸಗಿ ಸಂಸ್ಥೆಗಳವರು ತಿರಸ್ಕರಿಸುತ್ತಾರೆ ಎಂದರೆ ಹೇಗೆ. ಇವೊತ್ತು ಖಾಸಗಿ ಸಂಸ್ಥೆಗಳವರಿಗೆ ಸರ್ಕಾರದಿಂದಲೂ ಕೂಡ ಸಹಾಯಧನ ಕೊಟ್ಟು ಏನು ಇದು ಎಂದು ನೋಡಬೇಕಾಗುತ್ತದೆ. ಇವೊತ್ತು ಖಾಸಗಿ ಸಂಸ್ಥೆಗಳಲ್ಲಿ ಯಾವ ರೀತಿ ನಡೆಯುತ್ತಿದೆ ಎಂದರೆ ೧೨೦ ರೂಪಾಯಿ ಸಂಬಳ ಕೊಡುವಂತ ಉಪಾಧ್ಯಾಯರ ಹತ್ತಿರ ಸುಳ್ಳು ರುಜು ಹಾಕಿಸಿಕೊಂಡು ಅವರಿಗೆ ೫೦ ರೂಪಾಯಿ ಕೊಡುತ್ತಾರೆ. ಅವರು ಆ ರೀತಿ ರುಜು ಹಾಕುವುದಕ್ಕೆ ಒಪ್ಪಿಕೊಳ್ಳದೆ ಹೋದರೆ ಅವರು ನಾಳೆಯೇ ಮನೆ ಕಡೆಗೆ ಹೋಗಬೇಕಾಗುತ್ತದೆ. ಆದುದರಿಂದ ಸರ್ಕಾರ ಪ್ರತಿಯೊಂದು ಖಾಸಗಿ ಸಂಸ್ಥೆಗಳ ಬಗ್ಗೆ ನಿಗಾ ಇಡಬೇಕು ಎಂದು ಹೇಳುತ್ತೇನೆ. ಇವೊತ್ತು ಚೆನ್ನಾಗಿ ಕೆಲವು ಮಾಡತಕ್ಕಂಥ ಖಾಸಗಿ ಸಂಸ್ಥೆಗಳು ಸಹ ಇವೆ. ಬೆಂಗಳೂರು ನ್ಯಾಷನಲ್ ಕಾಲೇಜು ತೆಗೆದುಕೊಂಡರೆ ಅಲ್ಲಿ ಒಳ್ಳೆಯ ಕೀರ್ತಿ ಬರುವಂತ ಕೆಲಸವನ್ನು ಮಾಡಿ ತೋರಿಸುವ ವಿಚಾರ ಇದೆ. ಈ ತರಹದ ಕಾಲೇಜಿನ ನೆರಳಿನಲ್ಲಿ ಮಳೆಗಾಲದಲ್ಲಿ ಅಣಬೆ ಬೆಳೆದಂತೆ ಈ ಖಾಸಗಿ ಸಂಸ್ಥೆಗಳು ಬೆಳೆಯುತ್ತಿವೆ. ಇವು ಕೇವಲ ಉದ್ಯಮಕ್ಕೆ ಮಾಡಿಕೊಂಡಂತಹ ಸಂಸ್ಥೆಯೋ ಏನೋ ಎಂದು ಕಾಣುತ್ತದೆ.

ಸ್ವಾಮಿ, ಶಿವಮೊಗ್ಗ ತಾಲ್ಲೂಕು ಹೊಸ ನಗರ ಕ್ಷೇತ್ರ ನನ್ನ ಕ್ಷೇತ್ರವಾಗಿದೆ ಅಲ್ಲಿ ಒಬ್ಬ ಎ.ಇ.ಓ ನೇಮಕ ಮಾಡಿದ್ದೀರಿ. ಇವರ ಮೇಲೆ ವಿಚಾರಣೆ ಮಾಡಿ ನೇರವಾದ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಎಂದು, ನನಗೆ ಬಂದಂಥ ಅರ್ಜಿಗಳನ್ನು ಪರಿಶೀಲಿಸಿ, ಎಷ್ಟೋ ಕಾಗದಗಳನ್ನು ತಮಗೆ ಹಿಂದೆ ಇದ್ದಂಥ ಮಂತ್ರಿಗಳಿಗೂ, ತಮಗೂ ಕಾಗದ ಬರೆದದ್ದು ಆಯಿತು. ಆದರೆ ಆ ಕಾಗದಗಳಿಗೆ ಉತ್ತರ ಬೆಂಗಳೂರು ಬಿಟ್ಟು ಶಿವಮೊಗ್ಗಕ್ಕೆ ಬರುವುದಿಲ್ಲ ಎಂದರೆ ಹೇಗೆ? ಇದರಿಂದ ಇವೊತ್ತು ಅಲ್ಲಿ ಏನಾಗಿದೆ ಎಂದರೆ ನನ್ನನ್ನು ಯಾವ ಸರ್ಕಾರ ಏನು ಮಾಡುವದಕ್ಕೆ ಆಗುವುದಿಲ್ಲ ಎಂದು ಹೇಳಿಕೊಂಡು ತಿರುಗಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತಾಗಿದೆ. ಅಲ್ಲಿ ಗವರ್ನ್‌ಮೆಂಟ್ ಹೈಸ್ಕೂಲ್ ಎಂದು ಇದೆ, ಆ ಹೆಡ್‌ಮಾಸ್ಟರಿಗೆ ಒಂದು ಬಂಗಲೆ ಕೊಟ್ಟಿದ್ದಾರೆ. ಆ ಬಂಗಲೆಯಲ್ಲಿ ಅರ್ಧ ಬೇಕು ಎಂದು ಬಿಡಿಸಿಕೊಂಡು ಅಲ್ಲೇ ವಾಸವಾಗಿದ್ದಾರೆ, ಈತನಿಗೆ ಮದುವೆ ಆಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಅಲ್ಲಿಗೆ ಹೆಣ್ಣು ಮಕ್ಕಳನ್ನು ಕರೆಸಿಕೊಂಡು ಇಲ್ಲದ ಸಲ್ಲದ ವ್ಯವಹಾರ ಮಾಡಿಕೊಂಡು ಅಲ್ಲೇ ಇರುವುದು ಕಂಡುಬಂದಿದೆ. ಅದನ್ನು ಎಲ್ಲಾ ಇಲ್ಲಿ ಹೇಳುವುದು ಚೆನ್ನಾಗಿ ಕಾಣುವುದಿಲ್ಲ. ಇವೊತ್ತು ಉಪಾಧ್ಯಾಯ ವೃತ್ತಿ ಮಾಡಿಕೊಂಡಿರತಕ್ಕ ಹೆಣ್ಣು ಮಕ್ಕಳಿಗೆ ಕೊಡತಕ್ಕ ಹಿಂಸೆ ಅಷ್ಟಿಷ್ಟಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಯಾರು ಅವರು

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಕ್ಷತ್ರಿಯ ಎಂದು ಅವರ ಹೆಸರು, ಅವರು ಬಹಳ ಹಮ್ಮೀರರಾಗಿದ್ದಾರೆ. ಅವರು ಹೆಣ್ಣು ಮಕ್ಕಳನ್ನು ಮನೆಗೆ ಕರೆಸಿಕೊಂಡು ಹಿಂಸೆ ಕೊಡುವುದು ಅಷ್ಟಿಷ್ಟಲ್ಲ. ಈ ರೀತಿ ಇರುವುದರಿಂದ ಅವರು ನಮ್ಮಲ್ಲಿ ಬಂದು ಇವರಿಂದ ನಮಗೆ ವಿಮೋಚನೆ ಇಲ್ಲವೇ ಎಂದು ವಿನಂತಿ ಮಾಡಿ ಕೇಳಿಕೊಳ್ಳುತ್ತಾರೆ. ಆದುದರಿಂದ ಆ ಬಗ್ಗೆ ನಾನು ಕಾಗದದ ಮೇಲೆ ಕಾಗದ ಬರೆದಿದ್ದೇನೆ. ಆದರ ಬಗ್ಗೆ ಯಾವುದೇ ಒಂದು ಉತ್ತರ ಇಲ್ಲ. ಈಗ ಜನ ಏನು ಮಾತನಾಡುತ್ತಾರೆ ಎಂದರೆ, ಬೆಂಗಳೂರಿನಲ್ಲಿರತಕ್ಕ ವಿದ್ಯಾ ಇಲಾಖೆಯ ದೊಡ್ಡ ಅಧಿಕಾರಿಗಳು ಇವರು ಶಾಮೀಲಾಗಿದ್ದಾರೆ, ಬೆಂಗಳೂರಿನಿಂದ ವಿದ್ಯಾ ಇಲಾಖೆಯ ದೊಡ್ಡ ಅಧಿಕಾರಿಗಳು ಬಂದಾಗ ಅವರ ಮನೆಯಲ್ಲಿಯೇ ಇಳಿದುಕೊಳ್ಳುತ್ತಾರೆ ಎಂದು ಹಾಡು ಹಗಲಿನಲ್ಲೇ ಮಾತನಾಡತಕ್ಕ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ನಾವು ಎಷ್ಟು ಕಾಲ ಸಹಿಸಲಿಕ್ಕೆ ಸಾಧ್ಯ ? ಆದುದರಿಂದ ತಾವು ಈತನ ಬಗ್ಗೆ ವಿಚಾರಣೆ ನಡೆಸಿ ಆದಷ್ಟು ಬೇಗ ಈತನನ್ನು ಶಿವಮೊಗ್ಗದಿಂದ ಬಿಡಿಸಬೇಕು. ಇವೊತ್ತು ಪ್ರತಿಯೊಬ್ಬ ಉಪಾಧ್ಯಾಯರಿಗೂ ಏಜೆಂಟಾಗಿ ಇಂತಹ ಒಂದು ಅವ್ಯವಸ್ಥೆ ನಡೆದಿರುವಾಗ, ಆ ಬಗ್ಗೆ ಸಂಬಂಧಪಟ್ಟ ಕ್ಷೇತ್ರದ ಶಾಸಕನಾದ ನನಗೆ, ಬರತಕ್ಕ ದೂರುಗಳನ್ನು ನಾನು ಎಷ್ಟು ಕಾಲ ಸಹಿಸಿಕೊಂಡು ಇಟ್ಟುಕೊಳ್ಳುವುದಕ್ಕಾಗುತ್ತದೆ. ಆದುದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೆ, ಇನ್ನು ಲೈಬ್ರರಿ ವಿಭಾಗದಲ್ಲಿದ್ದಂತಹ ಚನ್ನಗಂಗಪ್ಪ ಎನ್ನುವವರು, ಯಾರು, ಏನು ಎಂಬುದು ನನಗೆ ಗೊತ್ತಿಲ್ಲ. ಇವರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲೂ ಅಗ್ರ ಲೇಖನ ಬರುತ್ತಿದ್ದುವು, ಅದರಲ್ಲಿ ಹಿಂದೆ ಆಡಿಟ್ ಆದಾಗ ಎರಡೂವರೆ ಲಕ್ಷ ರೂಪಾಯಿ ಅವ್ಯವಹಾರ ನಡೆದಿದೆ ಎನ್ನುವ ವರದಿಯನ್ನು ದಿನೇ ದಿನೇ ನೋಡುತ್ತಿದ್ದೆವು.

ಅಧ್ಯಕ್ಷರು.—ಶ್ರೀ ಚನ್ನಗಂಗಪ್ಪ ಎಂಬುವವರು ವಿಧಾನ ಮಂಡಲದ ಕಾರ್ಯಾಲಯದಲ್ಲೇ ಅಧಿಕಾರಿಗಳಾಗಿದ್ದಾರೆ. ಇವರ ಮೇಲೆ ಬಂದಿರತಕ್ಕ ಆಪಾದನೆಗಳನ್ನು ವಿಚಾರಣೆ ಮಾಡಬೇಕು ಎಂದು ಹಿಂದೆ ಇದ್ದಂಥ ಎಜುಕೇಷನ್ ಕಮಿಷನರ್ ಅವರಿಗೆ ಕಳುಹಿಸಿದ್ದಾಗಿದೆ. ಅವರು ನಿಮ್ಮ ಅಧಿಕಾರಿಗಳನ್ನು ನೀವೇ ವಿಚಾರಣೆ ಮಾಡಿ ಎಂಬುದಾಗಿ ತಿಳಿಸಿದ ಮೇರೆಗೆ ನಾವು ಸ್ಪೆಷಲ್ ಆಫೀಸರ್ ಹಾಕಿ ವಿಚಾರಣೆ ಮಾಡಬೇಕು ಎಂದು ಅದಕ್ಕೆ ಬೇಕಾಗತಕ್ಕ ಒರಿಜಿನಲ್ ಪ್ರತಿಗಳನ್ನು ಕಳುಹಿಸಿ ಎಂದು ಲೈಬ್ರರಿಯ ಮುಖ್ಯ ಅಧಿಕಾರಿಗಳಿಗೆ ಕಳುಹಿಸಿದ್ದಾಗಿದೆ. ಆ ಬಗ್ಗೆ ಒಂದು ಕಾಗದವು ಬಂದಿಲ್ಲ. ಅದರ ಬಗ್ಗೆ ನಾನು ಈಗ ಹೇಳಬಾರದು, ಇದಕ್ಕೆ ಯಾರು ಜವಾಬ್ದಾರರು ಎಂದು ಸದಸ್ಯರೇ ನಿಶ್ಚಯ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಅದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ.

ಇನ್ನು ಸರ್ಕಾರದವರು ತಾಲ್ಲೂಕು ಬೋರ್ಡ್‌ಗಳನ್ನು ನಡೆಸುತ್ತಿದ್ದ ಹೈಸ್ಕೂಲ್‌ಗಳನ್ನು ತಾವೇ ವಹಿಸಿಕೊಂಡಿದ್ದಾರೆ. ಇವುಗಳ ಪರಿಸ್ಥಿತಿ ಏನಾಗಿದೆ ಎಂದರೆ ಹಿಂದೆ ಈ ಹೈಸ್ಕೂಲ್‌ಗಳು ತಾಲ್ಲೂಕ್ ಬೋರ್ಡ್‌ನಲ್ಲಿದ್ದಾಗ ವಂತಿಗೆಯಿಂದಲೋ ಅಥವಾ ಇನ್ನಾವುದೋ ರೀತಿಯಿಂದ ನಡೆಸಲ್ಪಡುತ್ತಿದ್ದುವು, ಆದರೆ ಅವುಗಳನ್ನು ಸರ್ಕಾರದವರು ವಹಿಸಿಕೊಂಡ ಮೇಲೆ ಅವರ ಗೋಳು ಹೇಳಲಿಕ್ಕೆ ತೀರದು. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ರಿಪ್ಪನ್ ಪೇಟೆ, ಇನ್ನೂ ಕೆಲವು ಕಡೆಗಳಲ್ಲಿರುವ ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧೦ ಪಾಲು ಹೆಚ್ಚಾಗಿದೆ. ಆದರೆ ಆ ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳು ಕೂಡಲಿಕ್ಕೆ ಕೊಠಡಿಗಳಿಲ್ಲ. ಮರಗಳ ಕೆಳಗೆ ಕೂತುಕೊಂಡು ವಿದ್ಯಾಭ್ಯಾಸ ಮಾಡಬೇಕಾಗಿದೆ. ಇವತ್ತು ನಮ್ಮ ಮಲೆನಾಡಿನಲ್ಲಿ ಜೂನ್ ೧೫ನೇ ತಾರೀಖು ಮಳೆ ಪ್ರಾರಂಭವಾದರೆ ಅಕ್ಟೋಬರ್ ತಿಂಗಳವರೆಗೂ ಒಂದೇ ಸಮನೆ ಮಳೆ ಬರುತ್ತಲೇ ಇರುತ್ತದೆ. ಆ ಹುಡುಗರಿಗೆ ಕುಳಿತುಕೊಳ್ಳಲು ಸ್ಥಳವಿಲ್ಲದಿರುವುದರಿಂದ ನಾನು ಹೇಳುವುದನ್ನು ತಪ್ಪಾಗಿ ತಿಳಿದುಕೊಳ್ಳದೆ ಕೊನೇಪಕ್ಷ ಅವರಿಗೆ ಶೆಡ್ಡುಗಳನ್ನಾದರೂ ಕಟ್ಟಿಸಿಕೊಡಲು ವ್ಯವಸ್ಥೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರಿಕ್ರೂಟ್‌ಮೆಂಟ್ ಕಮಿಟಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ರಿಕ್ರೂಟ್‌ಮೆಂಟ್ ಕಮಿಟಿ ಎಂದು ಎಲ್ಲ ಜಿಲ್ಲೆಗಳಲ್ಲೂ ಮಾಡಿದ್ದೀರಿ. ಅಂಥ ಒಂದು ರಿಕ್ರೂಟ್‌ಮೆಂಟ್ ಕಮಿಟಿ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲೂ ಕೂಡ ಸುಮಾರು ೧–೧½

ತಿಂಗಳು ಕೂತುಕೊಂಡು ಕೆಲಸಮಾಡಿತು. ಆದರೆ ಅವರು ಮಾಡಿದ್ದಾದರೂ ಏನು ಎಂದು ನೋಡಿದರೆ ಮೊದಲನೆಯದಾಗಿ ಉಪಾಧ್ಯಾಯರನ್ನು ನೇಮಕ ಮಾಡುವಾಗ ಶಿವಮೊಗ್ಗ ಜಿಲ್ಲೆಯವರೆಗೆ ಯಾವ ಪ್ರಿಫರೆನ್ಸ್‌ನ್ನೂ ಕೊಡಲಿಲ್ಲ........

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡು ಸರ್ಕಾರದವರು ರಿಕ್ರೂಟ್‌ಮೆಂಟ್ ಕಮಿಟಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ನಾವು ಯಾವ ನಾನ್ ಆಫಿಷಿಯಲ್ ಮೆಂಬರ್ಸ್‌ನ್ನೂ ಹಾಕಿ ರಿಕ್ರೂಟ್‌ಮೆಂಟ್ ಕಮಿಟಿ ಎಂದು ಮಾಡಿಲ್ಲ. ಕಾನೂನು ಪ್ರಕಾರ ಅಲ್ಲಿ ಆಫೀಸರ್ಸ್ ಮಾತ್ರ ಇದ್ದಾರೆ ಅಷ್ಟೆ

ಶ್ರೀ ಎಸ್. ಎಂ. ಶೀರಾಳ್ಳಿ ಚಂದ್ರಶೇಖರ್.—ನಾನು ಆ ಪ್ರಶ್ನೆಯನ್ನು ಎತ್ತಲಿಲ್ಲ. ನನ್ನ ಪ್ರಶ್ನೆ ಏನೆಂದರೆ ಶಿವಮೊಗ್ಗಾದಲ್ಲಿ ಕೂತ ರಿಕ್ರೂಟ್‌ಮೆಂಟ್ ಕಮಿಟಿ ಯವರು ಎಷ್ಟು ಜನ ಎಸ್. ಎಸ್. ಎಲ್. ಸಿ ಆದವರಿಗೆ, ಎಷ್ಟು ಜನ ಟಿ. ಸಿ. ಹೆಚ್. ಮಾಡಿಕೊಂಡವರಿಗೆ ಕೆಲಸಕೊಟ್ಟಿದ್ದಾರೆ ಎಂದು. ಶಿವಮೊಗ್ಗಾದಲ್ಲಿರುವ ರಿಕ್ರೂಟ್‌ಮೆಂಟ್ ಕಮಿಟಿಯವರು ಬೆಂಗಳೂರು, ಮೈಸೂರಿನಲ್ಲಿರುವವರಿಗೆ ಪ್ರಿಫರೆನ್ಸ್ ಕೊಡುವುದಾದರೆ ಆ ಕಮಿಟಿ ಶಿವಮೊಗ್ಗಾದಲ್ಲಿ ಏತಕ್ಕೆ ಇರಬೇಕು? ಆ ಕಮಿಟಿಯಲ್ಲಿ ಯಾರಾದರೂ ಖಾಸಗಿ ವ್ಯಕ್ತಿ ಇದ್ದರೆ ಅವರು ಆ ಜಿಲ್ಲೆಯ ಹಿತವನ್ನು ಕಾಪಾಡಿಕೊಂಡು ಬರುತ್ತಾರೆ. ಆದರೆ ಇದು ಅಧಿಕಾರಿಗಳಿಂದ ಕೂಡಿರುವ ಕಮಿಟಿಯಾದ್ದರಿಂದ ಅವರಿಗೆ ಆ ಜಿಲ್ಲೆಯ ಮೇಲೆ ಅಷ್ಟು ಅಭಿಮಾನ ಇರುವುದಿಲ್ಲ. ತಮ್ಮ ರಿಕ್ರೂಟ್‌ಮೆಂಟ್ ಕಮಿಟಿಯವರು ಮಾಡಿರುವ ಪಟ್ಟಿಯನ್ನು ತೆಗೆಸಿನೋಡಿದರೆ ಅದರಲ್ಲಿ ನಮ್ಮ ಶಿವಮೊಗ್ಗಾದವರು ಕೇವಲ ೧೦-೨೦ ಮಂದಿ ಅಭ್ಯರ್ಥಿಗಳು ಇರಬಹುದು. ಈ ರೀತಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೀವು ಕೆಲಸಕ್ಕೆ ಸೇರಿಕೊಳ್ಳಿ ಎಂದು ಹೇಳಿ ಆದೇಶ ಕೊಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ. ಇವತ್ತು ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇಲ್ಲ. ಇವತ್ತು ಏನಾಗಿದೆ ಎಂದರೆ ಒಂದು ಕಡೆ ವಿದ್ಯಾವಂತ ನಿರುದ್ಯೋಗಿಗಳು ಸ್ವಾಮಿ, ನಮಗೆ ಎಲ್ಲಾದರೂ ಒಂದು ಕೆಲಸ ಕೊಟ್ಟು ನೀವು ಕೊಟ್ಟೊಷ್ಟು ಸಂಬಳ ಕೊಡಿ ಕೆಲಸಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆಂದು ಕೇಳುತ್ತಿದ್ದಾರೆ, ಇನ್ನೊಂದು ಕಡೆ ಶಾಲೆಗಳಲ್ಲಿ ಉಪಾಧ್ಯಾಯರಿಲ್ಲವೆಂದು ಬೀಗಮುದ್ರೆ ಹಾಕಿದ್ದೀರಿ. ಇದು ಎಂಥ ಒಂದು ವಿಪರ್ಯಾಸ ಎಂಬುದನ್ನು ತಾವೆ ಯೋಚನೆ ಮಾಡಿ. ನಿರುದ್ಯೋಗಿ ವಿದ್ಯಾವಂತರನ್ನು ಹಳ್ಳಿಗಳಲ್ಲಿರುವ ಶಾಲೆಗಳಿಗೆ ನೇಮಿಸಿ ನೀವು ಕೊಟ್ಟಷ್ಟು ಸಂಬಳ ಕೊಡಿ. ನೂರಕ್ಕೆ ನೂರು ರೂಪಾಯಿಗಳನ್ನೂ ಕೊಡಬೇಡಿ ನೂರಕ್ಕೆ ಐವತ್ತು ರೂಪಾಯಿಗಳನ್ನು ಕೊಡಿ ಅವರು ಸಂತೋಷದಿಂದ ಕೆಲಸಮಾಡುತ್ತಾರೆ, ಇದರಿಂದ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸವೂ ಸಿಕ್ಕುತ್ತದೆ ಮತ್ತು ವಿದ್ಯಾವಂತರಿಗೆ ಕೆಲಸವೂ ಸಿಕ್ಕಿದಂತಾಗುತ್ತದೆ. ಈ ರೀತಿ ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನೂ ತಾವು ಉದುರಿಸಬಹುದು ಇವತ್ತು ಇನ್ನೊಂದು ಕಾನೂನು ಹೊಸದಾಗಿ ಬಂದಿದೆ ಎಂದು ಹೇಳಿದ್ದೇನೆ. ಅದೇನೆಂದರೆ ಇನ್ನುಮುಂದೆ ಶಾಲೆಗಳನ್ನು ಬೆಳಿಗ್ಗೆ ೮ ಗಂಟೆಗೇ ಪ್ರಾರಂಭ ಮಾಡಬೇಕು ಎಂದು, ಸ್ವಾಮಿ, ಈ ರೀತಿ ಶಾಲೆಗಳನ್ನು ಬೆಳಿಗ್ಗೆ ಮಾಡುವುದಾದರೆ ನಮ್ಮ ಮಲೆನಾಡಿನ ಮಕ್ಕಳು ಬೆಳಿಗ್ಗೆ ಎದ್ದು ತಮ್ಮ ಮನೆಯಲ್ಲಿ ಎಲ್ಲ ಕೆಲಸಗಳನ್ನೂ ಮುಗಿಸಿಕೊಂಡು ನಂತರ ಸುಮಾರು ೩ ಮೈಲಿ ದೂರ ಶಾಲೆಗಳಿಗೆ ನಡೆದುಕೊಂಡು ಹೋಗಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ-ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳು ಸದನದಲ್ಲಿದ್ದಿದ್ದರೆ ಒಂದು ಮಾತು ಕೇಳುತ್ತಿದ್ದೆ. ಏನೆಂದರೆ ನಮ್ಮ ಕಡೆ ಹಳ್ಳಗಳು ಈಗ ತುಂಬಿ ಹರಿಯುತ್ತಿರುತ್ತವೆ ಶಾಲೆಗೆ ಹೋಗುವ ಹುಡುಗರು ಈ ಹೊಳೆಗಳನ್ನು ದಾಟಿಕೊಂಡು ಹೋಗಬೇಕಾದರೆ ತಮ್ಮ ಜೀವವನ್ನು ಘಟ್ಟಿಯಾಗಿ ಹಿಡಿದುಕೊಂಡು ಹೋಗಬೇಕಾಗುತ್ತದೆ. ಇಂಥ ಒಂದು ಪರಿಸ್ಥಿತಿ ನಮ್ಮ ಕಡೆ ಇದೆ ಆದುದರಿಂದ ಈ ಶಾಲೆಗಳನ್ನು ಬೆಳಿಗ್ಗೆ ೧೧ ಗಂಟೆಗೇ ತೆರೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಹಾಗೆ ಮಾಡದಿದ್ದರೆ ಯಾವ ಹುಡುಗರೂ ಶಾಲೆಗಳಿಗೆ

ಹೋಗುವುದಕ್ಕಾಗುವುದಿಲ್ಲ. ಇನ್ನೊಂದು ವಿಷಯ ಹೇಳುವುದಾದರೆ ಉಪಾಧ್ಯಾಯರುಗಳಿಗೆ ತಾವು ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು ಇಲ್ಲದೆ ಹೋದರೆ ವಸತಿ ಸಿಕ್ಕದಿರುವ ಉಪಾಧ್ಯಾಯರುಗಳು ಯಾವುದಾದರೂ ಒಂದು ಚಾವಡಿಯಲ್ಲೋ ಅಥವಾ ಯಾರದ್ದಾದರೂ ಮನೆಯಲ್ಲೋ ಮಲಗಿಕೊಳ್ಳುವುದಾದರೆ ಅವನು ತಾನು ತಿನ್ನುವ ಅನ್ನದ ಋಣವನ್ನು ತೀರಿಸಲಿಕ್ಕಾಗಿ ಮಲಗಲು ಜಾಗ ಕೊಡುವವನ ಮನೆಯ ಕೆಲಸಮಾಡುವುದು, ಅವನ ಮಕ್ಕಳಿಗೆ ಪಾಠ ಹೇಳಿಕೊಡುವುದು, ಇಲ್ಲದೇ ಹೋದರೆ ಅವನ ಮನೆಯ ಕಾರಕೂನನಾಗಿ ಕೆಲಸ ಮಾಡುವುದು ಮಾಡಬೇಕಾಗುತ್ತದೆ. ಇದೇ ಪದ್ಧತಿ ಅವನಲ್ಲಿ ಮುಂದುವರಿದರೆ ಆಮೇಲೆ ಅವನಿಗೆ ಶಾಲೆಯ ಹುಡುಗರಿಗೆ ಪಾಠ ಹೇಳಿಕೊಡುವ ಕಡೆ ಆಸಕ್ತಿ ಕಡಿಮೆಯಾಗಿ ಕೊನೆಗೆ ಅವನು ಶಾಲೆಗೆ ಹೋಗುವುದನ್ನೂ ಬಿಟ್ಟುಬಿಡುತ್ತಾನೆ.

ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಇವತ್ತು ಉಪಾಧ್ಯಾಯರನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ವರ್ಗ ಮಾಡಬಾರದೆಂದು ಮಾಡಿರುವುದಾಗಿ ಕೇಳಿದ್ದೇನೆ. ಇದರಿಂದ ಏನಾಗುತ್ತದೆ ಎಂದರೆ ಒಂದೇ ಜಾಗದಲ್ಲಿ ೧೦-೨೦ ವರ್ಷಗಳಿಂದ ಬೇರೂರಿ ಕೊತಿರುವ ಉಪಾಧ್ಯಾಯರು ಶಾಲೆಗಳಲ್ಲಿ ಪಾಠ ಹೇಳಿಕೊಡುವುದನ್ನು ಬಿಟ್ಟು ಬಡ್ಡಿ ವ್ಯವಹಾರ, ಗಂಡ ಹೆಂಡಿರ ಜಗಳ ಬಿಡಿಸುವುದು, ಯಾವುದಾದರು ಚುನಾವಣೆಗಳು ಬಂದರೆ ಪಾರ್ಟಿ ಪಕ್ಷಗಳ ಪರವಾಗಿ ಪ್ರಚಾರ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ ಉದಾಹರಣೆಗೆ ಹೇಳುವುದಾದರೆ ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂಥಿಂಥ ಉಪಾಧ್ಯಾಯರುಗಳು ಚುನಾವಣೆಯ ಪ್ರಚಾರದಲ್ಲಿ ಸಕ್ರಿಯ ಪಾತ್ರ ವಹಿಸಿದಾರೆಂದು ಬರೆದು ತಿಳಿಸಿದ್ದೇನೆ. ಅಂಥವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೋಣಂದೂರು ಲಿಂಗಪ್ಪ.—ಕಾಂಗ್ರೆಸ್ ಪಕ್ಷದ ಕಡೆ ಕೆಲಸ ಮಾಡಿದವರ ಬಗ್ಗೆ ನಾವೂ ಕೂಡ ಒಂದು ಪಟ್ಟಿ ಮಾಡಿಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಕಾಂಗ್ರೆಸ್ ಪಕ್ಷದ ಬಗ್ಗೆ ಆಗಲಿ ಅಥವಾ ಜನತಾ ಪಕ್ಷ ಬಗ್ಗೆ ಆಗಲಿ ಹೇಳಲಿಲ್ಲ. ಇವತ್ತು ಉಪಾಧ್ಯಾಯರುಗಳು ಮಕ್ಕಳಿಗೆ ಪಾಠ ಹೇಳಿಕೊಡುವುದನ್ನು ಬಿಟ್ಟು ರಾಜಕೀಯಕ್ಕೆ ಇಳಿಯುತ್ತಿದ್ದಾರೆ ಎಂಬುದು ನನ್ನ ಆಕ್ಷೇಪ ಅಷ್ಟೆ.

ಮಾನ್ಯ ಅಧ್ಯಕ್ಷಿಣಿಯವರೆ, ನಾನು ಇನ್ನೂ ಬಹಳ ಮಾತನಾಡವುದು ಇತ್ತು, ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರರೆಡ್ಡಿ (ಚಾಮರಾಜಪೇಟೆ).— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ದಿವಸ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡಬೇಕೆಂದು ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಶಿಕ್ಷಣ ಇಲಾಖೆ ಬಹಳ ಮುಖ್ಯವಾದುದು. ನನ್ನ ಕ್ಷೇತ್ರದಲ್ಲಿರತಕ್ಕ ಕೆಲವು ಸರ್ಕಾರಿ ಶಾಲೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನನ್ನ ಕ್ಷೇತ್ರದ ಪಾದರಾಯನ ಪುರದಲ್ಲಿ ಗೌರ್ನಮೆಂಟ್ ಮಾಡ್ರನ್ ಸ್ಕೂಲ್ ಎಂದು ಇದೆ, ಅಲ್ಲಿ ಸುಮಾರು ೮೩೫ ಮಕ್ಕಳು ವಿದ್ಯಾಭ್ಯಾಸ ಮಾಡುತ್ತೀವೆ. ಆ ಶಾಲೆಯ ಅಳತೆ ೯-೨೦ ಅಡಿ. ಇನ್ನು ಪಾದರಾಯನಪುರದಲ್ಲಿ ಒಂದು ಸ್ಕೂಲ್ ಇದೆ. ಅಲ್ಲಿ ೮೩೫ ಜನ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಶಾಲೆಯಲ್ಲಿ ಸರಿಯಾದ ಸ್ಥಳಾವಕಾಶವಿರುವುದಿಲ್ಲ. ಎಂಟು ಹತ್ತು ಅಡಿ ಅಗಲವುಳ್ಳ ಕೊಠಡಿಯಲ್ಲಿ ೫೫ ಜನ ಮಕ್ಕಳಿಂದ ೭೦ ಜನ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾಗಿರುತ್ತದೆ. ಅಷ್ಟೇ ಅಲ್ಲದೆ ಒಂದೇ ಕೊಠಡಿಯಲ್ಲಿ ಎರಡು ತರಗತಿಗಳು ನಡೆಸಬೇಕಾಗಿರುತ್ತದೆ. ಶಾಲೆಯು ಇರತಕ್ಕ ಸ್ಥಳವನ್ನು ನೋಡಿದರೆ ದನದ ದೊಡ್ಡಿಯ ರೀತಿಯಲ್ಲಿ ಇರುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಅಧ್ಯಕ್ಷರ ಮುಖೇನ ಕೆಲವು ಸಾಕ್ಷಚಿತ್ರಗಳನ್ನು ಬೇಕಾದರೆ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅಷ್ಟೇ ಅಲ್ಲ ಇಂಥ ಒಂದು ಶಾಲೆಗೆ ಒಂದು ಲ್ಯಾವೆಟರಿಯ ವ್ಯವಸ್ಥೆ ಇಲ್ಲ. ಶಾಲೆಯ ಹತ್ತಿರ ಹೋದರೆ ಮುಖ ಇಡುವುದಕ್ಕಾಗುವುದಿಲ್ಲ. ಒಂದು ರೀತಿಯಾದ ದುರ್ವಾಸನೆ ಸುತ್ತಲೂ ಆವರಿಸಿರುತ್ತದೆ. ಆದ್ದರಿಂದ ಇದರ ವ್ಯವಸ್ಥೆಯನ್ನು ಕ್ರಮಗೊಳಿಸ ಬೇಕೆಂದು ಕೇಳಿಕೊಳುತ್ತೇನೆ.

ಮತ್ತೊಂದು ಶಾಲೆ ಸೀನಿಯರ್ ಪ್ರೈಮರಿ ಶಾಲೆಯೊಂದು ಬಾಪೂಜಿ ನಗರದಲ್ಲಿ ಇರುತ್ತದೆ. ಸ್ಕೂಲಿನ ಅಳತೆ ಸುಮಾರು ೩೦ ಅಡಿ ಉದ್ದ ४೦ ಅಡಿ ಅಗಲವಿರುತ್ತದೆ. ಅಲ್ಲಿ ಸುಮಾರು ೭४೦ ಜನ ವಿದ್ಯಾರ್ಥಿಗಳು ಓದುತ್ತಿರುತ್ತಾರೆ ಈ ಒಂದು ಶಾಲೆಯ ಪರಿಸ್ಥಿತಿಯನ್ನು ಹೇಳಿದರೆ ಅಲ್ಲಿರತಕ್ಕಂಥ ಒಂದೊಂದು ಕೊಠಡಿಯೂ ಎಂಟು ಅಡಿ ಉದ್ದ ಎಂಟು ಅಡಿ ಅಗಲವಿದ್ದು ೮೦ ಜನ ಮಕ್ಕಳು ಒಬ್ಬರ ಮೇಲೆ ಒಬ್ಬರು ಕುಳಿತುಕೊಂಡು ವ್ಯಾಸಂಗ ಮಾಡುವಂಥ ಪರಿಸ್ಥಿತಿಯಲ್ಲಿರುತ್ತದೆ. ಮಳೆಬಂದರೆ ಶಾಲೆಯ ಒಳಗಡೆಯೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಹೊರಗೂ ನಿಲ್ಲುವುದಕ್ಕೆ ಆಗುವುದಿಲ್ಲ. ಈ ರೀತಿ ಇರುವುದರ ಬಗ್ಗೆ ಅಲ್ಲಿನ ಉಪಾಧ್ಯಾಯರು ವಿದ್ಯಾ ಇಲಾಖೆಗೆ ಬರೆದಿರುತ್ತಾರೆ, ನಾನು ಸಹಾ ವಿದ್ಯಾ ಮಂತ್ರಿಗಳಿಗೆ ಇದರ ಬಗ್ಗೆ ತಿಳಿಸಿದಾಗ ಮಂತ್ರಿಗಳು ಅದು ಕಾರ್ಪೊರೇಷನ್‌ಗೆ ಸೇರಿರುತ್ತದೆ. ಅದರ ವ್ಯವಸ್ಥೆಯನ್ನು ಅದರ ಮೇಲ್ವಿಚಾರಣೆಯನ್ನು ಕಾರ್ಪೊರೇಷನ್‌ನವರೇ ನೋಡಿಕೊಳ್ಳಬೇಕೆಂದು ತಿಳಿಸಿದರು.

ಇದರಿಂದ ಏನು ಹೇಳಬೇಕಾಗಿದೆ ಎಂದರೆ ಗಂಡ ಹೆಂಡತಿಯ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಲೆಕ್ಕಾಚಾರವಾಗಿರುತ್ತದೆ. ಸರ್ಕಾರೀ ಶಾಲೆಗಳೇ ಈ ರೀತಿಯಾದ ಅವ್ಯವಸ್ಥೆಯಿಂದ ಕೂಡಿರುವುದನ್ನು ನೋಡಿದರೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ.

ಇನ್ನು ಮಾರೇನಹಳ್ಳಿಯಲ್ಲಿ ಒಂದು ಶಾಲೆ ಇದೆ. ಅದು ಕೇವಲ ೧೫ ಅಡಿ ಅಗಲ ೨೫ ಅಡಿ ಉದ್ದವುಳ್ಳದ್ದಾಗಿರುತ್ತದೆ. ಅಲ್ಲಿರತಕ್ಕಂಥ ಒಂದೇ ಒಂದು ಕೊಠಡಿಯಲ್ಲಿ ನಾಲ್ಕು ತರಗತಿಗಳನ್ನು ನಡೆಸುತ್ತಿದ್ದಾರೆ. ಒಬ್ಬ ಉಪಾಧ್ಯಾಯ ಪಾಠವನ್ನು ಮಾಡುತ್ತಿದ್ದರೆ ಮತ್ತೊಬ್ಬ ಉಪಾಧ್ಯಾಯ ಬೋರ್ಡಿನಲ್ಲಿ ಬರೆಯಬೇಕು. ಯಾವ ಮಕ್ಕಳು ಏನು ಮಾಡಬೇಕೆನ್ನುವುದು ಅರ್ಥವಾಗದೆ ಸುಮ್ಮನೇ ಕುಳಿತುಕೊಂಡಿರುತ್ತಾರೆ. ಕಲ್ಯಾಣನಗರವೆಂದು ಹೇಳಿಕೊಳ್ಳುವಂಥ ಬೆಂಗಳೂರು ನಗರದಲ್ಲಿಯೇ ನಡೆಯುತ್ತಿರುವ ವಿದ್ಯಾ ಶಾಲೆಗಳ ಪರಿಸ್ಥಿತಿಯನ್ನು ನೋಡಿದರೆ ಇದೊಂದು ಅವಮಾನಕರವಾದ ವಿಷಯವೆಂದು ಹೇಳಿದರೆ ತಪ್ಪಾಗಲಾಗರದು.

ಶ್ರೀ ಕೋಣನೂರು ಲಿಂಗಪ್ಪ.— ಬೆಂಗಳೂರು ನಗರದಲ್ಲಿರುವ ಶಾಲೆಗಳ ಸ್ಥಿತಿ ಹೀಗಿರಬೇಕಾದರೆ ಹಳ್ಳಿಗಳಲ್ಲಿರುವ ಶಾಲೆಗಳು ಎಷ್ಟರಮಟ್ಟಿಗೆ ಇರಾತ್ತವೆಂಬುದನ್ನು ಅರ್ಥಮಾಡಿಕೊಳ್ಳಬಹುದು.

ಶ್ರೀ ಕೆ. ಪ್ರಭಾಕರ ರೆಡ್ಡಿ — ಈವತ್ತಿನ ದಿವಸ ಸರ್ಕಾರದವರು ಹೇಳುತ್ತಿದ್ದಾರೆ. ಶಾಲೆಗಳ ಕಟ್ಟಡದ ರಿಪೇರಿಗಾಗಿ ವರ್ಷಕ್ಕೆ ೨,೪೦೦ ರೂಪಾಯಿಗಳಷ್ಟು ಖರ್ಚುಮಾಡುತ್ತಿದ್ದೇವೆಂದು. ಆದರೆ ನಿಜವಾಗಿಯೂ ನೋಡುವುದಾದರೆ ಈ ಒಂದು ಬಾಬಿಗೆ ೨೪೦ ರೂಪಾಯಿಗಳನ್ನೂ ಕೂಡ ಖರ್ಚುಮಾಡುತ್ತಿಲ್ಲ. ಹರಿಜನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ಕೊಡುತ್ತಿದ್ದೇವೆ, ಹರಿಜನ ವಿದ್ಯಾರ್ಥಿ ನಿಲಯಗಳನ್ನು ಬೇಕಾದಷ್ಟು ತೆರೆದಿದ್ದೇವೆ. ಹರಿಜನರ ಉದ್ಧಾರವನ್ನು ಮಾಡುತ್ತಿದ್ದೇವೆಂದು ಹೇಳಿಕೊಳ್ಳತಕ್ಕಂಥ ಈ ಸರ್ಕಾರ, ಮಳವಳ್ಳಿಯ ಒಂದು ಶಾಲೆಯ ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಕುಳಿತಿದ್ದಾರೆ ಮಳವಳ್ಳಿಯಲ್ಲಿ ಸರ್ಕಾರದವರು ಹರಿಜನ ವಿದ್ಯಾರ್ಥಿ ನಿಲಯಕ್ಕಾಗಿ ಕೊಟ್ಟಿದ್ದಂಥ ಜಾಗದಲ್ಲಿ ಅಲ್ಲಿಯ ಮುನಸೀಪಲ್ ಪ್ರೆಸಿಡೆಂಟರು ಆ ಜಾಗವನ್ನು ಆಕ್ರಮಿಸಿಕೊಂಡು ಮನೆಯನ್ನು ಕಟ್ಟಿಕೊಂಡಿರುತ್ತಾರೆ ಅವರ ಬಗ್ಗೆ ಹರಿಜನ ವಿದ್ಯಾರ್ಥಿಗಳು ಸರ್ಕಾರದ ಗಮನವನ್ನು ಸೆಳೆಯುವುದಕ್ಕೋಸ್ಕರವಾಗಿ ಕಾಗದ ಪತ್ರಗಳನ್ನೆಲ್ಲ ಬರೆದಿರುತ್ತಾರೆ. ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳದ ಕಾರಣ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಹರಿಜನ ಉದ್ಧಾರ ಮಾಡುತ್ತಿದ್ದೇವೆಂದು ಹೇಳಿಕೊಳ್ಳತಕ್ಕಂಥ ನೀವು ನಿಮ್ಮ ಪಕ್ಷದ ಮುನಸೀಪಲ್ ಪ್ರೆಸಿಡೆಂಟ್‌ರವರು ಆಕ್ರಮವಾಗಿ ನಿಲಯಕ್ಕಾಗಿ ಕೊಟ್ಟಿರತಕ್ಕಂಥ ಜಾಗವನ್ನು ವಶಪಡಿಸಿಕೊಂಡಿರುವುದಕ್ಕೆ ತಮ್ಮ ನಿಲುವು ಏನು ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಈವತ್ತಿನ ದಿವಸ ಇಂಗ್ಲೀಷ್ ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಇದು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದರೆ ಒಂದು ರೀತಿಯಾದ ಬಿಸಿನೆಸ್, ಒಂದು ದೊಡ್ಡ ಕಂಟ್ರಾಕ್ಟ್ ಏನು ಮಾಡುತ್ತಾರೆ, ಆ ಒಂದು ರೀತಿಯಲ್ಲಿ ನಡೆಯುತ್ತಿದೆ. ಇದರ ಬಗ್ಗೆ ತನಿಖೆ ಮಾಡಬೇಕು. ಎಷ್ಟೋ ಜನ ಗುಡಿಸಲುಗಳನ್ನು ಕಟ್ಟಿಕೊಂಡು ನಡೆಸುತ್ತಿದ್ದಂಥ ಸಂಸ್ಥೆಗಳು ಈವತ್ತಿನ ದಿವಸ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟಿಕೊಂಡು ನಡೆಸುತ್ತಿದ್ದಾರೆ ವಿದ್ಯಾಸಂಸ್ಥೆಗಳಿಗೆಂದು ಲೀಸ್ ಮುಖಾಂತರ ಸೈಟ್ಸ್‌ಗಳನ್ನು ತೆಗೆದುಕೊಂಡಿರುವವರು ಆ ಸೈಟ್‌ಗಳಲ್ಲಿ ವಿದ್ಯಾಸಂಸ್ಥೆಗಳನ್ನು ಕಟ್ಟಿರುತ್ತಾರೆಯೇ ಎಂದು ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯೆಯನ್ನು ಕಲಿಯಬೇಕು, ಇದು ಬಹಳ ಸಂತೋಷದ ವಿಚಾರ. ಆದರೆ ಈ ಒಂದು ಕ್ಷೇತ್ರದಲ್ಲಿ ಏನಾಗುತ್ತದೆ ಎಂಬುದನ್ನು ನೋಡುವುದದಾದರೆ ನರ್ಸರಿ ಶಾಲೆಗಳೆಂದು ತೆರೆದಿರುತ್ತಾರೆ, ಅಲ್ಲಿ ಅವರು ಒಂದು ಮಗುವಿಗೆ ೧೦೦ ರಿಂದ ೨೦೦ ರೂಪಾಯಿಗಳ ವರೆಗೂ ಡೊನೇಷನ್ ತೆಗೆದುಕೊಳ್ಳುತ್ತಾರೆ. ಒಂದು ಮಗುವನ್ನು ಸ್ಕೂಲಿಗೆ ಸೇರಿಸಬೇಕಾದರೆ ಡೊನೇಷನ್, ಫೀಸ್, ಸಮವಸ್ತ್ರ ಇವೆಲ್ಲವನ್ನು ಲೆಕ್ಕ ಹಾಕಿದರೆ ಸುಮಾರು ೫೦೦, ರೂಪಾಯಿನಿಂದ ೬೦೦ ರೂಪಾಯಿಗಳ ವರೆಗೂ ಆಗುತ್ತದೆ. ಅಷ್ಟೊಂದು ವೆಚ್ಚವನ್ನು ಸಾಮಾನ್ಯ ಜನರು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಈ ಒಂದು ತೊಂದರೆ ಇರುವುದರಿಂದ ಸರ್ಕಾರಿ ಶಾಲೆಗಳಿಗಾದರೂ ಬಡ ತಂದೆತಾಯಿಗಳು ಮಕ್ಕಳನ್ನು ಸೇರಿಸುವ ಪ್ರಯತ್ನ ಮಾಡಿದರೆ ಆ ಶಾಲೆಗಳ ಪರಿಸ್ಥಿತಿಯನ್ನು ನೋಡಿದರೆ ಎಲ್ಲಿ ಗೋಡೆಗಳು ಮಕ್ಕಳ ಮೇಲೆ ಬಿದ್ದು ಅಪಾಯ ಸಂಭವಿಸುತ್ತದೆಯೋ ಎಂದು ಹೆದರುತ್ತಾರೆ. ಹೀಗಿರುವುದರಿಂದ ವಿಧಿಯಿಲ್ಲದೆ ಖಾಸಗಿ ಶಾಲೆಗಳಿಗೆ ಸೇರಿಸುವ ಪ್ರಯತ್ನ ಮಾಡುತ್ತಾರೆ. ಖಾಸಗಿ ಶಾಲೆಯಲ್ಲಿಯೂ ಡೊನೇಷನ್ ಮತ್ತು ಹೆಚ್ಚಿನ ಫೀಸ್‌ನ್ನು ವಸೂಲು ಮಾಡುತ್ತಿರುತ್ತಾರೆ. ಅವರ ಲೆಕ್ಕಾಚಾರವೆಲ್ಲ ರಾಮನ ಲೆಕ್ಕ ಕೃಷ್ಣನ ಲೆಕ್ಕವಿರು

ತ್ತಿದೆ ಸರ್ಕಾರದವರು ತನಿಖೆ ಬಂದಾಗ ರಾಮನ ಲೆಕ್ಕವನ್ನು ತೋರಿಸುತ್ತಾರೆ. ಆದ್ದರಿಂದ ಖಾಸಗಿ ಶಾಲೆಯವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ತನಿಖೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇಂಗ್ಲೀಷ್ ನಡೆಸತಕ್ಕಂಥ ನರ್ಸರಿ ಶಾಲೆಗಳಲ್ಲಿ ಬಹಳವಾಗಿ ಫೀಸನ್ನು ವಸೂಲು ಮಾಡುತ್ತಿರುತ್ತಾರೆ. ಅವರಿಗೆ ರೆಕಗ್ನೈಸೇಶನ್ ಕೊಡುವಾಗ ಒಂದು ಖರಾರನ್ನು ಹಾಕಬೇಕು. ಒಂದು ಮಗುವಿಗೆ ೩೦–೪೦ ರೂಪಾಯಿಗಳಿಗಿಂತ ಮೀರಿರಬಾರದು. ನಾವು ಕಾಲೇಜಿನಲ್ಲಿ ಓದುವಾಗ ೬೦–೮೦ ರೂಪಾಯಿಗಳಲ್ಲಿ ವ್ಯಾಸಂಗ ಮುಗಿಯುತ್ತಿತ್ತು. ಇದಕ್ಕೆ ಮೀರಿದರೆ ತನಿಖೆಯನ್ನು ನಡೆಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ದೇಶದಲ್ಲಿ ಈ ವಿದ್ಯೆಯನ್ನು ಕಲಿಸತಕ್ಕಂಥ ಕೆಲಸ ಬಹಳ ಮುಖ್ಯವಾದದ್ದು. ಇವತ್ತು ಹಳ್ಳಿಗಳಲ್ಲಿ ಎಲ್ಲೆಲ್ಲಿ ನೋಡಿದರೂ ನೂರಕ್ಕೆ ೭೦ರಷ್ಟು ಅನಕ್ಷರಸ್ಥ ಜನರು ಇದ್ದಾರೆ. ಅವರಿಗೆಲ್ಲಾ ವಿದ್ಯೆ ಕಲಿಸಬೇಕಾಗಿದೆ. ಇವತ್ತಿನ ದಿವಸ ಸಂಜಯಗಾಂಧಿಯವರ ಫ್ಯಾಮಿಲಿ ಪ್ಲಾನಿಂಗ್ ಕಾರ್ಯಕ್ರಮಕ್ಕಾಗಿ...

3-00 P.M.

ಅಧ್ಯಕ್ಷರು — ಅದು ಇದರಲ್ಲಿ ಬರುವುದಿಲ್ಲ, ಈ ಡಿಮ್ಯಾಂಡ್ ಮೇಲೆ ಮಾತನಾಡಬೇಕು.

ಶ್ರೀ ಕೆ. ಪ್ರಭಾಕರ ರೆಡ್ಡಿ. — ಸಂಜಯಗಾಂಧಿಯವರ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಯೋ ಅಷ್ಟೇ ಹಣವನ್ನು ಈ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿದ್ದರೆ ಎಷ್ಟೋ ಜನ ಇವತ್ತು ವಿದ್ಯೆಯನ್ನು ಕಲಿಯುತ್ತಿದ್ದರೆಂದು ಹೇಳುತ್ತಿದ್ದೇನೆ. ಅದನ್ನು ಬಿಟ್ಟು ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಹಣವನ್ನು ಖರ್ಚು ಮಾಡುವುದಕ್ಕೆ ಹೊರಟಿದ್ದರು. ಅದೇನೇ ಆದರೂ ಈ ಹಳ್ಳಿಗಳಲ್ಲಿರುವ ಅನಕ್ಷರತೆಯನ್ನು ತೊಡೆದು ಹಾಕುವುದಕ್ಕೆ ತಾವು ಹೆಚ್ಚಿನ ಗಮನವನ್ನು ಕೊಡಬೇಕು ಎಂದು ಹೇಳುವುದಕ್ಕೆ ಬಯಸುತ್ತೇನೆ. ಎಲ್ಲಿಯವರೆಗೆ ಹಳ್ಳಿಯ ಜನರು ವಿದ್ಯಾವಂತರಾಗುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಅವರು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಬರೇ ಸೈನ್ ಮಾಡುವುದಕ್ಕೆ ಬಂದರೆ ಅವರು ಓದಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ಗಣಿತ ಮೊದಲಾಗಿ ಎಲ್ಲಾ ವಿಷಯಗಳೂ ಬರಬೇಕು. ಈ ಬಗ್ಗೆ ವಯಸ್ಕರ ಶಿಕ್ಷಣ ಸಮಿತಿಯವರು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅವರಿಗೆ ನೀವು ೪೦ ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಕೊಟ್ಟಿಲ್ಲ. ಯಾವುಯಾವುದೋ ಬೋರ್ಡ್‌ಗಳನ್ನು ಮಾಡಿ ಅವಕ್ಕೆ ಹಣವನ್ನು ನೀಡುತ್ತಿದ್ದೀರಿ. ಆದ್ದರಿಂದ ಇಂತಹ ಒಂದು ಉತ್ತಮವಾದ ಕೆಲಸಕ್ಕೆ ಹೆಚ್ಚಿನ ಹಣವನ್ನು ನೀಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಕನ್ನಡ ಮಾಧ್ಯಮದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಕನ್ನಡ ಅಭಿಮಾನ ಇರತಕ್ಕಂಥ ವಿದ್ಯಾರ್ಥಿಗಳು ಮುಂದೆ ನಮಗೆ ಬೇಗ ಉದ್ಯೋಗ ಸಿಕ್ಕುತ್ತದೆಂಬ ದೃಷ್ಟಿಯಿಂದ ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ವಿದ್ಯಾಭ್ಯಾಸ ಮಾಡಿದಂತ ಎಷ್ಟು ಜನ ವಿದ್ಯಾರ್ಥಿಗಳಿಗೆ ಇವತ್ತು ಉದ್ಯೋಗವಕಾಶ ಮಾಡಿಕೊಟ್ಟಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಈ ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ವಿದ್ಯಾಭ್ಯಾಸವನ್ನು ಮಾಡಿದಂತಹವರಿಗೆ ಪ್ರಾತಿನಿಧ್ಯ ಕೊಟ್ಟು ಹೆಚ್ಚು ಹೆಚ್ಚು ಉದ್ಯೋಗವಕಾಶವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡಿದ್ದೇ ಆದರೆ ವಿದ್ಯಾರ್ಥಿಗಳು ಹೆಚ್ಚುಹೆಚ್ಚಾಗಿ ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಎಸ್‌ಎಸ್‌ಎಲ್‌ಸಿ ಓದಿದಂತವರು, ಬಿಎಸ್‌ಸಿ., ಎಂಬಿಬಿಎಸ್ ಓದಿದಂತಹವರು ಕೆಲಸಕ್ಕಾಗಿ ಪಿಎಸ್‌ಸಿ. ಮೂಲಕ ಬಂದರೆ ಕೆಲಸ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ಪಿಎಸ್‌ಸಿ. ಎಗ್ಸಾಮ್ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕೆಂದರೆ ಈ ಪಿಎಸ್‌ಸಿಯವರು ಈ ವಿಷಯದಲ್ಲಿ ನ್ಯಾಯರೀತಿಯಿಂದ ಕೆಲಸ ಮಾಡುತ್ತಿದ್ದಾರೆಯೋ ಎಂಬುದನ್ನು ಹೇಳಬೇಕಾಗಿದೆ. ಅವರು ಯಾರ್ಯಾರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದಾರೆಂದು ಎಂಬುದನ್ನು ಕೇಳಬೇಕಾಗಿದೆ.

ಅಧ್ಯಕ್ಷರು. — ವಿಷಯದ ಮೇಲೆ ಮಾತನಾಡಿ.

ಶ್ರೀ ಕೆ ಪ್ರಭಾಕರರೆಡ್ಡಿ — ಇವತ್ತಿನ ದಿವಸ ಬಿ.ಎ, ಬಿಎಸ್‌ಸಿ., ಡಿಪ್ಲಮೋ ಕೋರ್ಸ್‌ಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಇವತ್ತಿನ ದಿವಸ ಬಿ.ಎ. ಬಿ.ಎಸ್‌ಸಿ., ಡಿಗ್ರಿಗಳನ್ನು ಮಾಡಿದಂತಹ ವಿದ್ಯಾರ್ಥಿಗಳಿಗೆ ಕೆಲಸ ಸಿಕ್ಕುತ್ತಾ ಇಲ್ಲ. ಇವತ್ತು ಐಟಿಐ.ನಲ್ಲಿ ಒಂದು ವರ್ಷದ ಟೆಕ್ನಿಕಲ್ ಕೋರ್ಸ್ ಇದೆ. ಇಂತಹ ಕೋರ್ಸ್‌ಗಳನ್ನು ಹೆಚ್ಚಾಗಿ ಮಾಡಿದರೆ ವಿದ್ಯಾರ್ಥಿಗಳು ಈ ತಾಂತ್ರಿಕ ಶಾಲೆಗಳಿಗೆ ಹೋಗಿ ವಿದ್ಯೆ ಕಲಿತು ಕೊಂಡರೆ ಎಲ್ಲಾದರೂ ಉದ್ಯೋಗ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಹೆಚ್ಚು ಹೆಚ್ಚಾಗಿ ಈ ತಾಂತ್ರಿಕ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಇನ್ನೊಂದು ವಿಚಾರವೇನೆಂದರೆ ಈ ಇಂಗ್ಲೀಷ್ ಶಾಲೆಗಳಲ್ಲಿ ಕನ್ನಡವನ್ನು ಕಲಿಸುತ್ತಾ ಇಲ್ಲ. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಆಮೇಲೆ ಈ ಸ್ಕೂಲುಗಳು ಪ್ರಾರಂಭವಾಗಿ ಒಂದು ತಿಂಗಳು, ಒಂದೂವರೆ ತಿಂಗಳಾದರೂ ಪಠ್ಯಪುಸ್ತಕಗಳು ದೊರೆಯುತ್ತಾ ಇಲ್ಲ ತಂದೆತಾಯಿಗಳು ಅಂಗಡಿಗೆ ಹೋಗಿ ಕೇಳಿದಾಗ ಪುಸ್ತಕಗಳು ಬಂದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಪಠ್ಯಪುಸ್ತಗಳು ಅಂಗಡಿಯಲ್ಲಿ ಕಾಲಕ್ಕೆ ಸರಿಯಾಗಿ ಹೆಚ್ಚಿನ ರೀತಿಯಲ್ಲಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯವೇನೆಂದರೆ ಕನ್ನಡ ಕಲಾ ಕುಟೀರದವರು ಕವಿ ಮುದ್ದಣನ ಗ್ರಂಥದ ೫೦೦ ಕಾಪಿಗಳನ್ನು ಕೊಡಿಸ ಬೇಕೆಂದು ಕೇಳಿದ್ದಾರೆ ಈ ಬಗ್ಗೆ ಒಂದು ಗೌರ್ನಮೆಂಟ್ ಆರ್ಡರ್ ಆಗಿದೆ. ಅವರು ಕೇಳಿ ೩ ತಿಂಗಳು ಆಗಿದೆ. ೫,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿಯ ಡೈರೆಕ್ಟರ್‌ರವರನ್ನು ಕೇಳಿದರೆ ಕಾಪಿಗಳು ಬರುತ್ತಿವೆ, ಕೊಡೋಣ ಎಂದು ಹೇಳುತ್ತಿದ್ದಾರೆ. ಇನ್ನು ಮುಂದೆ ಈ ರೀತಿ ಆಗಿದ್ದ ಆದರೆ ಕನ್ನಡ ಕವಿಗಳ ಗ್ರಂಥಕ್ಕೆ ಯಾವ ರೀತಿಯ ಮರ್ಯಾದೆ ಸಿಕ್ಕುತ್ತದೆ. ಆದ್ದರಿಂದ ಈ ಬಗ್ಗೆ ಗಮನಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ) :— ಸನ್ಮಾನ್ಯ ಅಧ್ಯಕ್ಷರೇ, ಈ ವಿದ್ಯಾ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಇಬ್ಬರು ಸಚಿವದ್ವಯರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ೫ ವರ್ಷದಲ್ಲಿ, ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಆಗಿರತಕ್ಕಂಥ ಪ್ರಗತಿಯನ್ನು ಸ್ವಲ್ಪಮಟ್ಟಿಗೆ ವೀಕ್ಷಿಸಿದ್ದೇ ಅದರೆ ಈ ಇಲಾಖೆಯಲ್ಲಿ ಎಷ್ಟರಮಟ್ಟಿನ ಪ್ರಗತಿ ಆಗಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬಹುದು. ಸುಮಾರು ೫ ವರ್ಷಗಳ ಹಿಂದೆ ಅಂದರೆ (೧೯೭೨-೭೩ರಲ್ಲಿ ೪೦ಕೋಟಿ ರೂಪಾಯಿಗಳಿಂದ ೫೦ ಕೋಟಿ ರೂಪಾಯಿಗಳತನಕ ಹಣವನ್ನು ಖರ್ಚು ಮಾಡುತ್ತಾ ಇದ್ದಂಥ ಈ ಇಲಾಖೆ ಇವತ್ತು ಸುಮಾರು ೧೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಒಂದು ಅವಕಾಶ ಈ ಇಲಾಖೆಗೆ ದೊರೆತಿದೆ ಎಂದು ಅಂದಮಾತ್ರಕ್ಕೆ ಎಷ್ಟು ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ನಾವು ಊಹಿಸಬಹುದು. ದಿನೇದಿನೇ ಬಹಳ ಉತ್ತಮಮಟ್ಟಕ್ಕೆ, ಉಚ್ಛ್ರಾಯಸ್ಥಿತಿಗೆ ಹೋಗುತ್ತಾ ಇರತಕ್ಕಂಥಾದ್ದನ್ನು ನೋಡಿದರೆ ಈ ಇಲಾಖೆಯ ಕೆಲಸಕಾರ್ಯಗಳು ಬಹಳ ಸಮರ್ಪಕವಾದ ರೀತಿಯಲ್ಲಿ ನಡೆದಿದೆ ನಡೆಯುತ್ತಾ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅನೇಕ ನಮ್ಮ ವಿರೋಧಪಕ್ಷದ ಸ್ನೇಹಿತರು ಕೂಡ ಈ ಇಲಾಖೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇಲ್ಲಿರತಕ್ಕಂಥ ತಪ್ಪುನೆಪ್ಪುಗಳನ್ನು ಒಳ್ಳೆಯ ರೀತಿಯಲ್ಲಿ ಅವರು ಹೇಳಿದ್ದಾರೆ. ಈಗಿರತಕ್ಕಂಥ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಂಡು ಈ ಒಂದು ಇಲಾಖೆ ಚೆನ್ನಾಗಿ ಕೆಲಸಮಾಡುವುದಕ್ಕೆ ಪ್ರಯತ್ನಪಡಬೇಕು ಎಂದು ನಾನಾದರೂ ಕೂಡ ಇಲ್ಲಿ ಹೇಳುತ್ತಿದ್ದೇನೆ.

(Mr. Deputy Speaker in the Chair)

ಪ್ರಗತಿಯ ವೇಗ ಬಹಳ ವೇಗದಲ್ಲಿ ನಡೆಯುತ್ತಿದ್ದರೂ ಕೂಡ ಗುಣಮಟ್ಟವನ್ನು ಕಾಪಾಡತಕ್ಕ ಸ್ಥಿತಿಗೆ ಹೋಗತಕ್ಕಂತದ್ದು ಬಹಳ ಮುಖ್ಯ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನನ್ನ ಒಂದು ಆಕಾಂಕ್ಷೆ ಪ್ರಕಾರ ಈಗ ಇರುವ ಪಾಠಶಾಲೆಗಳು ಸಾಕು ಆದರೆ ಅವುಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಸತಕ್ಕ ಒಂದು ಮಾರ್ಪಾಡು ಆಗಬೇಕು ಎಂಬ ವಿಷಯವನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲ ಹಳ್ಳಿಗಳಲ್ಲೂ ಕೂಡ ಸಾಮಾನ್ಯ ಪ್ರಾಥಮಿಕ ಪಾಠಶಾಲೆಗಳಾಗಿವೆ. ಬಹುತೇಕ ಹಳ್ಳಿಗಳಲ್ಲಿ ಕಟ್ಟಡಗಳೂ ಕೂಡ ಇವೆ. ಪ್ರಾಥಮಿಕ ಶಾಲೆಗಳಿಗೂ ಮುನ್ನ ಬೇಕಾದ ನರ್ಸರಿ ಶಿಕ್ಷಣವನ್ನು ಕೊಡುವುದಕ್ಕಾಗಿ ನರ್ಸರಿ ಶಾಲೆಗಳನ್ನು ತೆಗೆಯತಕ್ಕ ಏರ್ಪಾಡನ್ನು ಮಾಡಲೇಬೇಕು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಿದ್ದೇನೆ. ಕಳೆದವರ್ಷ ಬಹುಶಃ ಒಂದುನೂರು ಪೂರ್ವಪ್ರಾಥಮಿಕ ಶಾಲೆಗಳನ್ನು ಸರ್ಕಾರ ಮಂಜೂರು ಮಾಡಿದೆ. ಈ ವರ್ಷ ಎಷ್ಟು ನರ್ಸರಿ ಶಾಲೆ

ಗಳನ್ನು ಪ್ರಾರಂಭ ಮಾಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆಯೋ ನನಗೆ ಗೊತ್ತಿಲ್ಲ. ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಯಲ್ಲೂ ಕೂಡ ನರ್ಸರಿ ಪಾಠಶಾಲೆಗಳನ್ನು ಪ್ರಾರಂಭಮಾಡತಕ್ಕ ಒಂದು ಕಾರ್ಯ ನಡೆದರೆ ಮಾತ್ರ ವಿದ್ಯಾಭ್ಯಾಸದ ಸೌಲಭ್ಯ ಅಚ್ಚುಕಟ್ಟಾಗಿ ಸಿಗುತ್ತದೆ; ಮಕ್ಕಳ ಭವಿಷ್ಯ ಉತ್ತಮವಾದಂಥ ರೀತಿಯಲ್ಲಿ ಬದಲಾವಣೆಯಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ಭಾವಿಸಿದ್ದೇನೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಖಾತೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಈ ಬಗ್ಗೆ ಹೆಚ್ಚು ಗಮನವನ್ನು ಕೊಟ್ಟು ಹೆಚ್ಚು ನರ್ಸರಿ ಶಾಲೆಗಳನ್ನು ಹಳ್ಳಿಗಳಲ್ಲೂ ಕೂಡ ಪ್ರಾರಂಭ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ ತನ್ಮೂಲಕ ವಿದ್ಯಾಭ್ಯಾಸದ ಗುಣಮಟ್ಟವನ್ನು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಹೆಚ್ಚಿಸಿದರೆ ಮಾತ್ರ ವಿದ್ಯಾಭ್ಯಾಸದ ಅಭಿವೃದ್ಧಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಪ್ರೈಮರಿ ಶಾಲೆಗಳ ವಿಷಯ ಹೇಳಬೇಕಾದರೆ ಸಾಕಷ್ಟು ಪ್ರೈಮರಿ ಪಾಠಶಾಲೆಗಳು ಆಗಿದ್ದು ಅವುಗಳಿಗೆ ಕಟ್ಟಡಗಳೂ ಕೂಡ ಆಗಿವೆ. ಇನ್ನು ಕೆಲವು ಕಡೆಗಳಲ್ಲಿ ಪಾಠಶಾಲೆಗಳಿಗೆ ಕಟ್ಟಡಗಳು ಆಗಿಲ್ಲ. ಅದಕ್ಕೆ ಅಡ್ಡಿ ಆತಂಕಗಳೇನು ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪಾಠಶಾಲೆಗಳನ್ನು ಕಟ್ಟುವುದಕ್ಕೆ ಒಂದು ರೂಮಿಗೆ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಆದರೆ ಇವತ್ತು ಆ ಕಟ್ಟಡಕ್ಕೆ ಒಂದು ರೂಮಿಗೆ ೮ ಸಾವಿರ ಅಥವಾ ೯ ಸಾವಿರ ಆಗುತ್ತದೆ. ಹಳ್ಳಿಯಲ್ಲಿ ಆ ಹಣವನ್ನು ಸರಿದೂಗಿಸತಕ್ಕ ಸ್ಥಿತಿ ಜನತೆಗೆ ಇಲ್ಲ ಎಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಪಟ್ಟಣಗಳಿಗೇ ಎಲ್ಲ ಹಣ ಮೀಸಲಾಗಿಡುವ ಬದಲಾಗಿ ಗ್ರಾಮಾಂತರ ಪ್ರದೇಶಗಳಿಗೆ ಈ ಒಂದು ಕಾರ್ಯಕ್ಕಾಗಿ ಹೆಚ್ಚು ಹಣವನ್ನು ಮೀಸಲಾಗಿಡತಕ್ಕ ಒಂದು ಕೆಲಸವನ್ನು ಮಾಡಿದರೆ ತಪ್ಪೇನು ಎಂಬುದನ್ನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಹಳ್ಳಿಗಳಲ್ಲಿ ಬಡತನವನ್ನು ಹೆಚ್ಚು ಅನುಭವಿಸುತ್ತಾ ಇರತಕ್ಕ ಜನತೆಗೆ ಅನುಕೂಲವಾಗುವ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಒದಗಿಸ ತಕ್ಕದ್ದು ಸರ್ವಶ್ರೇಷ್ಠ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ತಾವು ಶಾಲಾಕಟ್ಟಡಕ್ಕೆ ಒಂದು ರೂಮಿಗೆ ನಾಲ್ಕೂವರೆ ಸಾವಿರ ರೂಪಾಯಿ ಕೊಡುವುದೆಂದು ಏನು ನಿಗದಿ ಮಾಡಿದ್ದೀರಿ ಅದು ಬಹಳ ಕಡಿಮೆ. ಪೂರ್ತಿ ಖರ್ಚನ್ನು ಕೊಡುವುದಕ್ಕೆ ಸಾಧ್ಯವಾಗದಿದ್ದರೂ ಕೂಡ ಸುಮಾರು ೭೫ ಭಾಗ ಹಣವನ್ನಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹಿಂದೆ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ೭೫ ಭಾಗ ಹಣವನ್ನು ಈ ಯೋಜನೆ ಮೂಲಕ ಕೊಡುತ್ತಿದ್ದರು. ಇನ್ನು ೨೫ ಭಾಗದಷ್ಟು ಹಣವನ್ನು ಜನರಿಂದ ವಸೂಲು ಮಾಡುವ ಏರ್ಪಾಡಿತ್ತು. ಆ ರೀತಿ ಒಂದು ರೇಷ್ಯೋ ಮೈಂಟೈನ್ ಮಾಡುತ್ತಿದ್ದರು. ಇವತ್ತು ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ ಕಟ್ಟಡದ ಬಾಬ್ತು ೭೫ ಭಾಗವನ್ನಾದರೂ ಸರ್ಕಾರ ಕೊಟ್ಟು ಇನ್ನು ೨೫ ಭಾಗವನ್ನು ಪಂಚಾಯತಿ ಅಥವಾ ತಾಲ್ಲೂಕುಬೋರ್ಡುಗಳ ಮುಖಾಂತರ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಒತ್ತಾಯ ಪೂರ್ವಕವಾಗಿ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಪ್ರಸ್ತಾಪ ಮಾಡಿದರು. ಒಳ್ಳೆ ಸದುದ್ದೇಶದಿಂದ ಆ ಮಾತನ್ನು ಹೇಳಿದ್ದಾರೆ. ನಾನೂ ಕೂಡ ನಾಲ್ಕಾರು ವರ್ಷಗಳಿಂದ ವಿದ್ಯಾಭ್ಯಾಸದ ಬೇಡಿಕೆ ಬಗ್ಗೆ ಮಾತನಾಡುತ್ತಾ ಈ ವಿಷಯವನ್ನು ಪ್ರಸ್ತಾಪಮಾಡಿಕೊಂಡು ಬಂದಿದ್ದೇನೆ. ಏನೆಂದರೆ ಸಿಂಗಲ್ ಟೀಚರ್ಸ್ ಸ್ಕೂಲುಗಳನ್ನು ನೀವು ರದ್ದು ಮಾಡಬೇಕು. ಅದರಿಂದ ಬಹಳ ತೊಂದರೆಯಾಗುತ್ತಿದೆ. ಹಳ್ಳಿಗಾಡಿನಲ್ಲೂ ಕೂಡ ಆ ಉಪಾಧ್ಯಾಯ ಎಷ್ಟೋ ದಿವಸ ಸುಮ್ಮನೆ ಬಾಗಿಲು ಹಾಕಿಕೊಂಡು ಹೋಗತಕ್ಕ ಪರಿಸ್ಥಿತಿ ಕೂಡ ಇದೆ. ಅದನ್ನು ನಾನು ಸ್ವತಃ ಕಂಡಿದ್ದೇನೆ. ಆದ್ದರಿಂದ ಪ್ರತಿಯೊಂದು ಪಾಠಶಾಲೆಯಲ್ಲೂ ಅಲ್ಲಿ ನಲವತ್ತು ಮಕ್ಕಳಿರಲಿ ಅಥವಾ ಐವತ್ತು ಮಕ್ಕಳಿರಲಿ ಎಷ್ಟೇ ಮಕ್ಕಳಿದ್ದರೂ ಕೂಡ ಕನಿಷ್ಠಪಕ್ಷ ಇಬ್ಬರು ಉಪಾಧ್ಯಾಯರನ್ನು ಆ ಶಾಲೆಯಲ್ಲಿ ಇರುವಂಥ ವ್ಯವಸ್ಥೆಯನ್ನು ಮಾಡಿ ಆ ರೀತಿ ಒಂದು ಯೋಜನೆ ಯನ್ನು ರೂಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇದು ನಾವು ಬಹಳ ದಿವಸಗಳಿಂದ ಹೇಳುತ್ತಾ ಬಂದಿರತಕ್ಕ ಮಾತು. ಈ ಬಗ್ಗೆ ಸರ್ಕಾರದವರು ಅಲಕ್ಷ್ಯವನ್ನು ತೋರದೆ ಮಕ್ಕಳ ಹಿತದೃಷ್ಟಿಯಿಂದ, ಅವರ ಬೆಳವಣಿಗೆಯ ದೃಷ್ಟಿಯಿಂದ, ಅವರ ಮುಂದಿನ ಭವಿಷ್ಯದ ದೃಷ್ಟಿಯಿಂದ ಮಾಡುವುದು ಅತ್ಯಾವಶ್ಯಕ. ಏಕ ಉಪಾಧ್ಯಾಯರ ಪಾಠಶಾಲೆಗಳನ್ನು ತಪ್ಪಿಸಿ ಕನಿಷ್ಠಪಕ್ಷ ಒಂದು ಪಾಠಶಾಲೆಯಲ್ಲಿ ಇಬ್ಬರು ಉಪಾಧ್ಯಾಯರಿರುವ ವ್ಯವಸ್ಥೆ ಮಾಡಲೇ ಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡಲು ಇಚ್ಛೆಪಡುತ್ತೇನೆ. ನರ್ಸರಿ, ಪ್ರೈಮರಿ, ಹೈಸ್ಕೂಲು ಮತ್ತು ಕಾಲೇಜುಗಳು ಪಟ್ಟಣಗಳಲ್ಲಿ ಇವೆ. ಅದೇ ರೀತಿ ಕೆಲವು ಹಳ್ಳಿಗಳಲ್ಲಿ ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಎಲ್ಲ ಹೈಸ್ಕೂಲುಗಳನು

ಮತ್ತು ಇತರ ಪಾಠಶಾಲೆಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಕೆಲವು ಸ್ನೇಹಿತರು ಸಲಹೆ ಮಾಡಿದರು. ನನ್ನ ಅಭಿಪ್ರಾಯದಲ್ಲಿ ಅದು ಸರಿಯಾದಂಥ ಸಲಹೆಯಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಪಟ್ಟಣಗಳಲ್ಲಿರುವ ಪಾಠಶಾಲೆಗಳಲ್ಲಿ ಲೋಪದೋಷಗಳು ನಡೆಯುತ್ತಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಹೈಸ್ಕೂಲುಗಳನ್ನು ನಡೆಸತಕ್ಕವರು ಪ್ರಾಮಾಣಿಕತೆಯಿಂದ ವಿಶ್ವಾಸದಿಂದ, ಜನತೆಯ ಸೇವೆ ಮಾಡಬೇಕು ಎಂಬ ದೃಷ್ಟಿಯಿಂದ ಹೈಸ್ಕೂಲುಗಳನ್ನಾಗಲೀ ಕಾಲೇಜುಗಳನ್ನಾಗಲೀ ಸ್ಥಾಪನೆ ಮಾಡಿ ನಡೆಸುತ್ತಿದ್ದಾರೆಯೇ ವಿನಹ ಹಣದ ಆಸೆಯಿಂದ ಲಾಭದ ದೃಷ್ಟಿಯಿಂದ ಪಾಠಶಾಲೆಗಳನ್ನು ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ನಡೆಸುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಯಾರು ಈ ವಿಷಯದಲ್ಲಿ ತಪ್ಪು ಮಾಡಿದ್ದಾರೆ. ಯಾರು ಮೇಲೆ ಸರ್ಕಾರ ಕೇಸನ್ನು ಹಾಕಿದೆ ಎಂಬ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ದೊಡ್ಡ ಪಟ್ಟಿಯನ್ನು ಓದಿದರು. ನಾನಾದರೂ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ ಆ ಬಗ್ಗೆ ಗೌಳಿರಿಂದ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದ ಕಾರ್ಯಲೋಪ ಮಾಡಿದಂತಾಗುವುದಿಲ್ಲವೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಯಾವ ಒತ್ತಾಯಕ್ಕೂ ಮಣಿಯಬಾರದು. ಹಣದ ತೊಂದರೆ ಇಲ್ಲದೆ ಸುಲಭವಾಗಿ ಮೋಸದ ಬಲೆಗೆ ಬೀಳದೆ ಎಲ್ಲ ಜನಕ್ಕೂ ಲಭಿಸತಕ್ಕ ರೀತಿಯಲ್ಲಿ ವಿದ್ಯಾಭ್ಯಾಸ ಸೌಲಭ್ಯ ಇರಬೇಕು, ವ್ಯಾಪಾರದ ದೃಷ್ಟಿಯಿಂದ ವಿದ್ಯಾಶಾಲೆಗಳನ್ನು ನಡೆಸುತ್ತಾ ಇರತಕ್ಕ ಸಂಸ್ಥೆಗಳನ್ನು ಮುಟ್ಟುಗೋಲು ಹಾಕಬೇಕು. ಆ ಪ್ರಕಾರ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಮುಂದೆ ಆ ರೀತಿ ಆಗದಂತೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಈ ವಿಷಯದಲ್ಲಿ ಯಾವ ಒತ್ತಾಯಕ್ಕಾಗಲೀ, ಯಾವ ದಾಕ್ಷಿಣ್ಯಕ್ಕಾಗಲೀ, ಮಣಿಯಬಾರದು. ಈ ಒಂದು ಕ್ಷೇತ್ರ ಬಹಳ ಉತ್ತಮವಾದಂಥ ಕ್ಷೇತ್ರ; ಪವಿತ್ರವಾದಂಥ ಕ್ಷೇತ್ರ ಮುಂದಿನ ಪೀಳಿಗೆಯ ಭವಿಷ್ಯವನ್ನು ರೂಪಿಸಲು ಶ್ರಮಿಸಬೇಕಾದ ಉತ್ತಮವಾದ ಕ್ಷೇತ್ರ. ವ್ಯಾಪಾರಕ್ಕೆ ಮೋಸಕ್ಕೆ ಅವಕಾಶವಿಲ್ಲದಂಥ ಇಲಾಖೆ ಇದಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಹಳ್ಳಿಗಾಡಿನಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾ ಸಂಸ್ಥೆಗಳನ್ನು ಪ್ರೈಮರಿ ಪಾಠಶಾಲೆಯಿಂದ ಹಿಡಿದು ಹೈಸ್ಕೂಲ್ ಕಾಲೇಜುಗಳ ತನಕ ಬಹಳ ಚೆನ್ನಾಗಿ, ಪ್ರಾಮಾಣಿಕತೆಯಿಂದ, ನಿರ್ವಂಚನೆಯಿಂದ ಮತ್ತು ಸೇವಾ ಮನೋಭಾವದಿಂದ ನಡೆಸುತ್ತಿದ್ದಾರೆ. ಅಲ್ಲಿಗೆ ಬೇಕಾಗಿರತಕ್ಕದ್ದು ಉಪಾಧ್ಯಾಯರು ಮತ್ತು ಮ್ಯಾನೇಜ್‌ಮೆಂಟಿಗೆ ಸೌಹಾರ್ದದಿಂದ ಇರತಕ್ಕ ವಾತಾವರಣವನ್ನು ಕಲ್ಪಿಸತಕ್ಕದ್ದು ಸರ್ಕಾರದ ಕರ್ತವ್ಯ. ಕೆಲವು ಸಂದರ್ಭಗಳಲ್ಲಿ ಅಧ್ಯಾಪಕರು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಕೆಲವು ಮ್ಯಾನೇಜ್‌ಮೆಂಟಿನವರು ಮೋಸ ಮಾಡುತ್ತಾರೆ. ಮ್ಯಾನೇಜ್‌ಮೆಂಟಿನವರು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಅಲ್ಲಿ ಸರಿಯಾಗಿ ಉಪಾಧ್ಯಾಯರುಗಳೇ ಇರುವುದಿಲ್ಲ, ಮತ್ತು ಇದ್ದವರು ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲ. ಉಪಾಧ್ಯಾಯರು ಯಾವ ರೀತಿ ನಡೆದುಕೊಳ್ಳಬೇಕು, ಮ್ಯಾನೇಜ್‌ಮೆಂಟಿನವರು ಯಾವ ರೀತಿ ನಡೆದುಕೊಳ್ಳಬೇಕು ಮತ್ತು ತನ್ಮೂಲಕ ಮಕ್ಕಳ ಭವಿಷ್ಯವನ್ನು ಯಾವ ರೀತಿ ಕಾಪಾಡಬೇಕೆಂಬ ಬಗ್ಗೆ ಜಿಲ್ಲಾ ಕೇಂದ್ರಗಳಲ್ಲಿ ಕೆಲವು ಸಮಿತಿಗಳನ್ನು ನೇಮಕ ಮಾಡಿಕೊಂಡು ಏಡೆಡ್ ಹೈಸ್ಕೂಲಿನವರು ಕಾರ್ಯಾಚರಣೆ ಮಾಡುತ್ತಿದ್ದಾರೆ. ಅವರನ್ನು ಸರ್ಕಾರದವರು ಕರೆಯಿಸಿ ಅವರಿಂದ ಯಾವ ರೀತಿ ಸಲಹೆಗಳನ್ನು ಪಡೆಯಬೇಕೋ ಅದನ್ನು ಪಡೆದು ವ್ಯವಸ್ಥಿತವಾಗಿ ವಿದ್ಯಾಭ್ಯಾಸ ನಡೆಯುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೊಸದಾಗಿ ಪಾಠಶಾಲೆಗಳನ್ನು ಪ್ರಾರಂಭಿಸುವುದಕ್ಕೆ ಸ್ಥಳೀಯ ಜನರು ೫೦ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿರುವ ಈ ಹೊಸ ವ್ಯವಸ್ಥೆ ಬಹಳ ಕಠಿಣವಾದ ಸಮಸ್ಯೆಯಾಗಿದೆ. ಏಕೆಂದರೆ ಹಳ್ಳಿಗಾಡಿನಲ್ಲಿ ೫೦ ಸಾವಿರ ರೂಪಾಯಿಗಳನ್ನು ಕೊಡತಕ್ಕ ಜನರು ಕಡಿಮೆಯಾಗಿದ್ದಾರೆ ಆದ್ದರಿಂದ ಸರ್ಕಾರದವರು ಈ ಬಗ್ಗೆ ಸಡಿಲವಾದ ಮನೋಭಾವವನ್ನು ತಾಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾ ಮಂತ್ರಿಗಳು ಹೈಸ್ಕೂಲ್‌ಗಳಿಗೆ ೨ ವರ್ಷದ ಪಿ.ಯು. ಸಿ. ಶಿಕ್ಷಣವನ್ನು ಸೇರಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ ಅದು ಯಾವ ರೀತಿ ಅವರ ಮನಸ್ಸಿಗೆ ಬಂತೋ ಗೊತ್ತಿಲ್ಲ. ಹೀಗೆ ವರ್ಷೇ ವರ್ಷೇ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಹೋಗತಕ್ಕದ್ದು ಉಚಿತವೇ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಯಾವ ಆಧಾರದ ಮೇಲೆ ಈ ಬದಲಾವಣೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ

ಮತ್ತು ಇದರಿಂದ ಏನು ಅನುಕೂಲವಾಗುತ್ತದೆಂಬುದನ್ನು ಕೇಳಬಯಸುತ್ತೇನೆ. ನಾವು ಹಿಂದೆ ಓದುತ್ತಿದ್ದವರು. ಆ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ೪ ವರ್ಷ, ಮಾಧ್ಯಮಿಕ ಶಿಕ್ಷಣ ೪ ವರ್ಷ, ಪ್ರೌಢ ಶಿಕ್ಷಣ ೩ ವರ್ಷ, ಎಸ್.ಎಸ್.ಎಲ್.ಸಿ. ಶಿಕ್ಷಣ ೨ ವರ್ಷ ಮತ್ತು ಡಿಗ್ರಿ ಶಿಕ್ಷಣ ೩ ವರ್ಷ ಈ ರೀತಿ ಇತ್ತು. ಆ ಒಂದು ವ್ಯವಸ್ಥೆಯೇ ಸಮರ್ಪಕವಾದ ವ್ಯವಸ್ಥೆ ಎಂದು ಈಗಲೂ ಕೂಡ ಜನತೆ ಹೇಳುತ್ತಿದೆ. ಇತ್ತೀಚಿಗೆ ಹಲವಾರು ರೀತಿಯ ಮಾರ್ಪಾಡುಗಳನ್ನು ಮಾಡಿ ಪ್ರತಿ ನಿತ್ಯ ಜನಗಳ ಮನಸ್ಸಿನಲ್ಲಿ ಮತ್ತು ಮಕ್ಕಳ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡತಕ್ಕ ಪರಿಸ್ಥಿತಿಯನ್ನು ತರತಕ್ಕದ್ದು ಒಳ್ಳೆಯದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಮಕ್ಕಳಿಗೆ ನಾನು ಕಾಲೇಜಿನಲ್ಲಿ ಓದುತ್ತಿದ್ದೇನೆ ಎಂಬ ಭಾವನೆ ಇರುತ್ತಿತ್ತು ಮತ್ತು ಅವರ ಜವಾಬ್ದಾರಿಯು ಸಹ ಹೆಚ್ಚಾಗುತ್ತಿತ್ತು. ಅವರ ರೀತಿನೀತಿಗಳು ಹೆಚ್ಚಾಗಿ ಬೆಳೆದು ಅವರಲ್ಲಿ ವಿದ್ಯಾಭ್ಯಾಸದಕಡೆಗೆ ಹೆಚ್ಚು ಗಮನವನ್ನು ಕೊಡತಕ್ಕ ಒಂದು ಅವಕಾಶವಿತ್ತು ಎಂದು ಹೇಳಬಯಸುತ್ತೇನೆ. ಆದ್ದರಿಂದ ಈ ರೀತಿ ಬದಲಾವಣೆ ಮಾಡತಕ್ಕ ಒಂದು ಸ್ಥಿತಿಯನ್ನು ಪುನರ್ವಿಮರ್ಶೆ ಮಾಡಬೇಕು ಅದಕ್ಕೆ ಈಗಾಗಲೇ ಒಂದು ಸಮಿತಿಯನ್ನು ನೇಮಕಮಾಡಿದ್ದೀರಿ, ಆ ಸಮಿತಿಯು ಬೇಗ ತನ್ನ ರಿಪೋರ್ಟನ್ನು ಕೊಟ್ಟು ಉತ್ತಮವಾದ ವಿದ್ಯಾಭ್ಯಾಸ ಒದಗಿಸತಕ್ಕ ರೀತಿಯಲ್ಲಿ ಆಗಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಪ್ರೌಢಶಾಲಾ ಮಕ್ಕಳಲ್ಲಿ ಯಾವುದಾದರು ಒಂದು ರೀತಿಯ ಕೆಲಸದ ಮೇಲೆ ಮಮತೆ ಹುಟ್ಟಿಸತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ನಮ್ಮಲ್ಲಿ ಇವತ್ತಿನ ದಿವಸ ಏನಾಗಿದೆ ಎಂದರೆ ಕೇವಲ ಕಾರಕೂನರನ್ನು ಉತ್ಪತ್ತಿ ಮಾಡತಕ್ಕ ಯಂತ್ರಗಳಾಗಿ ಎಲ್ಲ ಪಾಠಶಾಲೆಗಳು ನಡೆಯುತ್ತಿವೆಯೇ ವಿನಹ ತಮ್ಮ ಸ್ವಂತ ಉದ್ಯೋಗದ ಮೇಲೆ ಹೋಗತಕ್ಕ ನಡವಳಿಕೆ ರೀತಿ ಆ ಹುಡುಗರಲ್ಲಿ ಬರತಕ್ಕ ವ್ಯವಸ್ಥೆಯನ್ನು ನಾವು ಇನ್ನುಕೂಡ ಮಾಡಲಿಲ್ಲವಲ್ಲ ಎಂದು ನಾನಾದರು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಪ್ರೌಢಶಾಲೆಗಳಲ್ಲಿ ವ್ಯವಸಾಯವನ್ನಾಗಲಿ, ಗ್ರಾಮೋದ್ಯೋಗವನ್ನಾಗಲೀ ಅಥವಾ ಯಾವುದಾದರು ೩-೪ ಉದ್ಯೋಗವನ್ನು ಒದಗಿಸತಕ್ಕ ವಿಷಯಗಳನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿ ಆ ಒಂದು ಕ್ರಮ ಜಾರಿಗೆ ಬಂದು, ದಿನಬೆಳಗಾದರೆ ಗುಮಾಸ್ತರ ಕೆಲಸ ಕೊಡಿಸಿ ಅನ್ನುತಕ್ಕ ಗೋಳನ್ನು ತಪ್ಪಿಸುವ ವ್ಯವಸ್ಥೆಯನ್ನು ಮಾಡಿದರೆ ಅದರಿಂದ ದೇಶಕ್ಕೆ ಕ್ಷೇಮವಾಗುತ್ತದೆ, ಜನತೆಗೆ ಕ್ಷೇಮವಾಗುತ್ತದೆ, ಮತ್ತು ನಮ್ಮ ಹಣವು ಸಾರ್ಥಕವಾಗುತ್ತದೆ. ಇದರಲ್ಲಿ ಯಾವ ಸಂದೇಹವು ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡಬಯಸುತ್ತೇನೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ವಿಮರ್ಶೆಮಾಡಿ ಆದಷ್ಟು ಬೇಗ ಈ ಒಂದು ಕಾರ್ಯವನ್ನು ಕೈಗೊಂಡರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಯಾರು ಕೂಡ ಮಾತನಾಡಲಿಲ್ಲ. ಆ ಬಗ್ಗೆ ಕಾರ್ಯ ಬಹಳ ಚೆನ್ನಾಗಿ ನಡೆಯುತ್ತಿದೆ.

ಒಬ್ಬ ಸದಸ್ಯರು.—ಆ ಬಗ್ಗೆ ಮಾನ್ಯ ಚಂದ್ರಶೇಖರ್‌ರವರು ಮಾತನಾಡಿದರು.

ಶ್ರೀ ಬಿ. ಬೈರಪ್ಪಾಜಿ.—ಮಾತನಾಡಿದ್ದರೆ ಬಹಳ ಸಂತೋಷ, ಆಗ ನಾನು ಇರಲಿಲ್ಲ. ನಮ್ಮ ದೇಶದಲ್ಲಿ ಬಹಳ ಮಂದಿ ವಯಸ್ಕರು ನಿರಕ್ಷರಕುಕ್ಷಿಗಳಾಗಿದ್ದಾರೆ, ಅವರಿಗೆ ಅಕ್ಷರಜ್ಞಾನವನ್ನು ಕೊಡಿಸತಕ್ಕ ವ್ಯವಸ್ಥೆ ನಮ್ಮದಾಗಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇವತ್ತಿನ ದಿವಸ ಈ ಒಂದು ಸಂಸ್ಥೆಗೆ ಸರ್ಕಾರ ನಿಗದಿ ಮಾಡಿರತಕ್ಕ ಹಣವಾಗಲಿ, ಅಥವಾ ಕೊಡುತ್ತಾ ಇರತಕ್ಕ ಹಣವಾಗಲಿ ಬಹಳ ಅತ್ಯಲ್ಪ. ಹಳ್ಳಿಗಾಡಿನಲ್ಲಿರತಕ್ಕ ವಯಸ್ಕ ಗಂಡಸರು ಮತ್ತು ಹೆಂಗಸರು ಅಕ್ಷರಾಭ್ಯಾಸವನ್ನು ಮಾಡಿ ಸಣ್ಣ ಸಣ್ಣ ವ್ಯವಸಾಯದ ಮತ್ತಿತರ ಕೆಲವು ಪುಸ್ತಕಗಳನ್ನು ಓದತಕ್ಕ ಒಂದು ಪರಿಸ್ಥಿತಿಗೆ ಬರುವಂತೆ ಮಾಡಲು ವಯಸ್ಕರ ಶಿಕ್ಷಣ ಸಂಸ್ಥೆ ಶ್ರಮಿಸಿದೆ. ಆದ್ದರಿಂದ ಆ ಒಂದು ಸಂಸ್ಥೆಗೆ ಹೆಚ್ಚಿನ ಹಣವನ್ನು ಒದಗಿಸಿ ಅನೇಕ ಯೋಜನೆಗಳು ಕಾರ್ಯರೂಪಕ್ಕೆ ಬರಲು ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಈ ಒಂದು ಕಾರ್ಯ ಕೇವಲ ನಮ್ಮ ಹಳೆ ಮೈಸೂರಿನಲ್ಲಿ ಮಾತ್ರ ಚೆನ್ನಾಗಿ ನಡೆಯುತ್ತಿದೆಯೇ ಹೊರತು ಹೊಸ ಮೈಸೂರಿನಲ್ಲಿ ಇನ್ನು ವ್ಯಾಪಕವಾಗಿ ನಡೆಯಲ್ಲವೆಂದು ಹೇಳುತ್ತೇನೆ. ಆದ್ದರಿಂದ ಈ ಒಂದು ಬಾಬಿಗೆ ಕೊಟ್ಟಿರತಕ್ಕ ಹಣ ಸಾಲದು, ಇದಕ್ಕೆ ಇನ್ನು ಹೆಚ್ಚು ಹಣವನ್ನು ಕೊಡುವುದರ ಜೊತೆಗೆ ಹೆಚ್ಚು ಅಧಿಕಾರವನ್ನು ಕೊಟ್ಟು ತನ್ಮೂಲಕ ಚೆನ್ನಾಗಿ ಕೆಲಸ ನಡೆಯುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿಂಡ್-ಡೇ ಮೀಲ್ಸ್ ಬಗ್ಗೆ ಹೇಳುವುದಾದರೆ, ಕಳೆದ ವರ್ಷ ನಮ್ಮ ಜಿಲ್ಲೆಯು ಎಲ್ಲಕಡೆಯು ಕ್ಷಾಮ ಪರಿಸ್ಥಿತಿ ತಲೆದೋರಿತ್ತು. ಆಗ ನನ್ನ ಕ್ಷೇತ್ರದ ಪ್ರೌಢಶಾಲೆಯ ಅನೇಕ ಮಕ್ಕಳು ಶಾಲೆಗೆ ಬಾರದಿದ್ದುದನ್ನು ಕಂಡು ಎಲ್ಲ ಪ್ರೌಢಶಾಲೆಗಳಲ್ಲು ಮಿಡ್-ಡೇ ಮೀಲ್ಸನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದಾಗ ಅವರು ಕೊಡುತ್ತೇವೆಂದು ಕೊಟ್ಟರು.

ಇದು ನವಗೆ ಕೊನೆಗೂ ಕೊಡ ಬರಲಿಲ್ಲ. ನಮ್ಮಲ್ಲಿ ಕ್ಷಾಮ ಪರಿಸ್ಥಿತಿ ಇದ್ದರೂ ಕೂಡ ಇದು ಏಕೆ ಬರಲಿಲ್ಲವೊ ? ಈಕಾರ್ಯ ಏಕೆ ಕೈಗೂಡಲಿಲ್ಲ ? ಇದು ಬಂಗಳೂರಿನಿಂದ ತರುವೇಕೆರೆ ತಾಲ್ಲೂಕಿಗೆ ಏಕೆ ಮುಟ್ಟಲಿಲ್ಲ ಎನ್ನುವುದೂ ಕೂಡ ನನಗರ್ಥವಾಗಲಿಲ್ಲ. ಮಿಡ್-ಡೇ ಮೀಲ್ಸ್‌ನ ವ್ಯವಸ್ಥೆಯೂ ಕೂಡ ಸಮರ್ಪಕವಾಗಿ ಆಗಬೇಕು ಎಂದುನಾನು ಕಡ್ಡಾಯವಾಗಿ ಹೇಳುತ್ತೇನೆ. ಬೇರೆ ದೇಶದವರು ಕೊಡತಕ್ಕ ಧರ್ಮದ ಪದಾರ್ಥವನ್ನು ನಮ್ಮದೇಶದಲ್ಲಿ ಸರಿಯಾಗಿ ಉಪಯೋಗಿಸದೆ ಹೋದರೆ ಏನು ಪ್ರಯೋಜನ ಎನ್ನುವುದನ್ನುನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಏನು ಲೋಪದೋಷ ಇದೆ, ಎನ್ನುವುದನ್ನು ತಾವು ತಿಳಿದು ಸರಿಪಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಮತ್ತು ಎಲ್ಲಾ ಕಡೆಯಲ್ಲಿಯೂ ಇದು ಮುಟ್ಟುವಂತೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

3-30 P. M.

ನಮ್ಮ ರಾಜ್ಯದಲ್ಲಿ ಸೆಂಟ್ರಲ್ ಲೈಬರಿ ಇಲಾಖೆ ಕೆಲಸ ಮಾಡುತ್ತಿದೆ. ಇಲ್ಲಿ ಸುಮಾರು ೧೦-೧೫ ವರ್ಷಗಳಿಂದ ಕೆಲಸಮಾಡುತ್ತಾ ಇರುವವರು ದಿನಗೂಲಿಯಮೇಲೆ ಕೆಲಸ ಮಾಡುತ್ತಿದ್ದಾರೆ ಎಂದು ನಾನು ಕೇಳಿದ್ದೇನೆ. ಏಕೆ ಸರ್ಕಾರದವರು ಅವರನ್ನು ಖಾಯಂ ಮಾಡಲಿಲ್ಲ ? ಇಲ್ಲಿ ಖಾಯಂ ಆದಂಥ ವ್ಯವಸ್ಥೆ ಇಲ್ಲವಾದ್ದರಿಂದ ಬಹಳ ತೊಂದರೆಯಾಗುತ್ತಿದೆ. ೨೦ ವರ್ಷದಲ್ಲಿ ಇಲ್ಲಿ ಕೆಲಸಕ್ಕೆ ಸೇರಿದವನು ೩೫ ವರ್ಷಗಳತನಕ ಕೆಲಸಮಾಡಿದರೂ ಅವನ ಕೆಲಸ ಖಾಯಂ ಆಗದೆ ಇದ್ದರೆ ಅವನ ಹೆಂಡತಿ ಮಕ್ಕಳ ಭವಿಷ್ಯವೇನಾಗಬೇಕು ಎಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಸರ್ಕಾರದವರು ಸಹಾನುಭೂತಿಯಿಂದ ವರ್ತನೆ ಮಾಡಬೇಕು ಎಂದು ನಾನು ಕಡ್ಡಾಯವಾಗಿ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಆಡಿಟ್ ರಿಪೋರ್ಟನ್ನು ನಾನು ನೋಡಿದ್ದೇನೆ. ಇದರಲ್ಲಿ ಬಹಳ ಲೋಪದೋಷ ಇದೆ. ಮಾನ್ಯ ಮಾರ್ಗನ ಮಲ್ಲಪ್ಪನವರೂ ನಿನ್ನೆ ಮಾತನಾಡುವಾಗ ಯಾರೋ ಪ್ರಿಂಟ್‌ಮಾಡಿ ಹಂಚಿದಂಥ ಚೀಟಿಯ ಬಗ್ಗೆ ಹೇಳಿದ್ದಾರೆ. ಆ ರೀತಿ ಮಾಡತಕ್ಕದ್ದು ಉಚಿತವಲ್ಲ. ಅವರು ಯಾರೇ ಆಗಿರಲೀ ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು.

ಶ್ರೀ ಕೊಣಂದೂರು ಲಿಂಗಪ್ಪ.—ಅದರ ಬಗ್ಗೆ ಮಾನ್ಯ ಅಧ್ಯಕ್ಷಣಿಯವರು ಹೇಳಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಮತ್ತೆ ಅಲ್ಲಿನಡೆದಿರತಕ್ಕ ಲೋಪದೋಷಗಳನ್ನು ಅವ್ಯವಹಾರಗಳನ್ನು ಇದುವರೆಗೂ ಸರ್ಕಾರದವರು ಏಕೆ ಸರಿಪಡಿಸಿಲ್ಲ ? ಲಕ್ಷಾಂತರ ರೂಪಾಯಿಗಳನ್ನು ಪುಸ್ತಕಗಳನ್ನು ಕೊಳ್ಳುವುದರಲ್ಲಿ, ಬೈಂಡಿಂಗ್ ಮಾಡಿಸುವುದರಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆದಿವೆ. ಈ ರೀತಿ ಸರ್ಕಾರದ ಅಧಿಕಾರಿಯೊಬ್ಬರು ಮಾಡಿದಾಗ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳಬೇಕೇ ? ಸರ್ಕಾರಕ್ಕೆ ಇವರ ಮೇಲೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಇಲ್ಲವೇ ? ಇದನ್ನು ಏಕೆ ಸರಿಪಡಿಸಿಲ್ಲ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆದಷ್ಟು ಬೇಗ ಸರ್ಕಾರದವರು ಈ ಕಡೆ ಗಮನ ಕೊಟ್ಟು ಇದನ್ನು ಸರಿಪಡಿಸಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಕಾಲೇಜುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಎಲ್ಲಾ ಕಾಲೇಜುಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರೀಕೃತವಾಗುತ್ತಿವೆ. ಹಳ್ಳಿಯ ಮಕ್ಕಳು ಏನುಮಾಡಬೇಕು ? ಅವರ ವಿದ್ಯಾಭ್ಯಾಸ ಯಾವರೀತಿಯಾಗಿ ನಡೆಯಬೇಕು ? ಈ ಕ್ಷೇತ್ರದಲ್ಲಿಯೂ ಕೂಡ ವಿಕೇಂದ್ರೀಕರಣ ಆಗಬೇಕು ಎಂದು ನಾನು ಹೇಳುತ್ತೇನೆ. ಫಸ್ಟ್‌ಗ್ರೇಡ್ ಕಾಲೇಜುಗಳನ್ನು ತಾಲ್ಲೂಕುಮಟ್ಟದಲ್ಲಿ ಪ್ರಾರಂಭಮಾಡಬೇಕು, ಇದಕ್ಕೆ ಸರ್ಕಾರದವರಿಂದ ಹಣದ ಸೌಲಭ್ಯವನ್ನು ಒದಗಿಸುವುದು ಅವಶ್ಯಕ ? ಯಾರಾದರೂ ಖಾಸಗಿ ಮ್ಯಾನೇಜ್‌ಮೆಂಟಿನವರು ಮುಂದೆ ಬಂದರೆ, ಅವರು ಪ್ರಾಮಾಣಿಕತೆಯಿಂದ ನಡೆಸುತ್ತೇವೆಂದು ಹೇಳಿದರೆ ಅವರಿಗೂ ಸರ್ಕಾರದ ಸಹಾಯ ಕೊಟ್ಟು ತನ್ಮೂಲಕ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸ ದೊರಕುವಂತೆ ವ್ಯವಸ್ಥೆಯನ್ನು ಮಾಡಬೇಕಾದ್ದು ಸರ್ಕಾರದ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸ ಬಹಳ ಚೆನ್ನಾಗಿ ಚೆನಡೆಯುತ್ತಿದೆ, ಇನ್ನೂ ಕೂಡ ಚೆನ್ನಾಗಿ ನಡೆಯಬೇಕು. ಮಾನ್ಯ ವಿರೋಧಪಕ್ಷದ ಸ್ನೇಹಿತರುಗಳು ಮತ್ತು ನಾನು ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ಇದು ಪಕ್ಷದ ಪ್ರಶ್ನೆಯಲ್ಲ, ದೇಶದ ಕೆಲಸ ಎಂದು ಎಲ್ಲರೂ ತಿಳಿದುಕೊಂಡು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಈ ಬಗ್ಗೆ ಲಕ್ಷ್ಯ ಕೊಟ್ಟು ಒಳ್ಳೆಯ ರೀತಿಯಲ್ಲಿ ಕೆಲಸಮಾಡಿ ಈ ಒಂದು ಕ್ಷೇತ್ರವನ್ನು ಹಸನಾಗಿ ಮಾಡಿದರೆ ನಮ್ಮ ಮಕ್ಕಳ ಭವಿಷ್ಯ ಇನ್ನೂ ಚೆನ್ನಾಗಿ ರೂಪಿತವಾಗುವುದರಲ್ಲಿ ಯಾವ ಸಂದೇಹ ಇಲ್ಲ ಎಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಸಭಾಧ್ಯಕ್ಷರೇ, ನಮ್ಮ ಶಿಕ್ಷಣ ಸಚಿವರ್ಯರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ, ಮಾನ್ಯ ಸದಸ್ಯರಾರೂ ಪ್ರಸ್ತಾಪಮಾಡದೆ ಇರತಕ್ಕ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿ ಆಮೇಲೆ ಪ್ರಮುಖ, ಪ್ರೌಢ ಮತ್ತು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ, ಕನ್ನಡ ಅಭಿವೃದ್ಧಿಯ ಬಗ್ಗೆ ಸಾಕಷ್ಟು ವೆಚ್ಚವನ್ನು ಮಾಡುತ್ತಿದೆ. ಇವತ್ತು ಕನ್ನಡದಅಭಿವೃದ್ಧಿಯನ್ನು ಎಲ್ಲಿಹೇಗೆ ಮಾಡಬೇಕು ಎನ್ನುವುದರಬಗ್ಗೆ ಖಚಿತವಾದ ಯಾವ ಒಂದು ಯೋಜನೆಯನ್ನೂ ಸರ್ಕಾರ ಕೈಗೊಂಡಂತೆ ಕಾಣಲಿಲ್ಲ. ಮೂಲತಃ ಕನ್ನಡದ ಅಭಿವೃದ್ಧಿ ಆಗಬೇಕಾದರೆ, ಕನ್ನಡದ ಮಾಧ್ಯಮ ಬರಬೇಕು, ಕನ್ನಡ ಆಡಳಿತ ಭಾಷೆಯಾಗಬೇಕು, ನಮ್ಮ ರಾಜ್ಯದಲ್ಲಿರತಕ್ಕ ಶಾಲಾ ಕಾಲೇಜುಗಳಲ್ಲಿ ಕನ್ನಡವನ್ನು ಕಡ್ಡಾಯಮಾಡಬೇಕು. ಕನ್ನಡದ ಬೆಳವಣಿಗೆಯ ಬಗ್ಗೆ ಸರ್ಕಾರದವರು ಎಷ್ಟೇ ಹೇಳಿಕೊಂಡರೂ ಕೂಡ ಅದು ಕೇವಲ ಆಡಂಬರ ಮತ್ತು ಪೊಳ್ಳು ಘೋಷಣೆಯಾಗುತ್ತದೆಯೇ ಹೊರತು ನಿಜವಾಗಿಯೂ ಏನೂ ಆಗುವುದಿಲ್ಲ. ಅಂದ ಮಾತ್ರಕ್ಕೆ ನಾನು ಆಂಗ್ಲ ಭಾಷೆಯ ವಿರೋಧಿಯಲ್ಲ. ಆಂಗ್ಲ ಭಾಷೆಯೂ ಇರಲಿ, ಉರ್ದು ಭಾಷೆಯೂ ಇರಲಿ, ಯಾರಿಗೆ ಯಾವ ಭಾಷೆ ಬೇಕೋ ಅದನ್ನು ಅವರು ಕಲಿಯಲಿ, ನಮ್ಮ ರಾಜ್ಯದಲ್ಲಿ ಜಗತ್ತಿನ ಎಲ್ಲಾ ಭಾಷೆಗಳು ಇರಲಿ ಆದರೆ ಕನ್ನಡ ಮಾಧ್ಯಮ ಕಡ್ಡಾಯ ಆಗಬೇಕು ಎಂದು ನಾನು ಹೇಳುತ್ತೇನೆ.

ಸನ್ಮಾನ್ಯ ಹಿರಿಯ ಸದಸ್ಯರಾದ ಅಜೀಜ್ ಶೇಟ್ ಅವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಉರ್ದು ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ತರಗತಿಯನ್ನು ಕಡ್ಡಾಯ ಮಾಡಬೇಕು ಎಂದು ಅವರ ವಾದ ಕೂಡ ಇದೆ. ರಾಜ್ಯದಲ್ಲಿ ಕನ್ನಡ ಮಾಧ್ಯಮ ಕಡ್ಡಾಯ ಮಾಡದೆ ಇದ್ದರೆ ಕನ್ನಡದ ಅಭಿವೃದ್ಧಿಗೆ ಸರ್ಕಾರ ಶ್ರಮಿಸುತ್ತಿದೆ ಎನ್ನುವುದರ ಬಗ್ಗೆ ನನಗೆ ವಿಶ್ವಾಸ ಬರಲಿಕ್ಕೆ ಸಾಧ್ಯವಿಲ್ಲ. ಇವತ್ತು ಅನೇಕ ಶಾಲೆಗಳಲ್ಲಿ ಕನ್ನಡದ ಸೊಲ್ಲೆ ಇಲ್ಲ, ಅದರಲ್ಲಿಯೂ ಮುಖ್ಯವಾಗಿ ಕಾನ್‌ವೆಂಟ್ ಶಾಲೆಗಳಲ್ಲಿ ನಮ್ಮ ಕನ್ನಡದ ಸೊಲ್ಲೆ ಇಲ್ಲ. ಹಳ್ಳಿಗಳ ಶಾಲೆಗಳಲ್ಲಿ ನಮ್ಮ ಹುಡುಗರು ಕನ್ನಡವನ್ನು ಕಲಿತುಕೊಂಡುಬಂದು ಪಟ್ಟಣಗಳ ಕಾನ್‌ವೆಂಟ್ ಹುಡುಗರೊಂದಿಗೆ ಯಾವುದಾದರೂ ಸ್ಪರ್ಧೆ ಅಥವಾ ಸಂದರ್ಶಕ್ಕೆ ಬಂದಾಗ, ನಮ್ಮ ಹಳ್ಳಿಯ ಹುಡುಗರು ಹೆಚ್ಚಿನನಂಬರುಗಳನ್ನು ತೆಗೆಯುತ್ತಾರೆಂದು ನಿರೀಕ್ಷಣೆ ಮಾಡಿದರೆ ಅದು ತಪ್ಪಾಗುತ್ತದೆ. ಆದ್ದರಿಂದಲೇ ಎಲ್ಲಾ ಕಡೆಗಳಲ್ಲಿಯೂ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕು ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ಕನ್ನಡ ಅಭಿವೃದ್ಧಿ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಮಂಡಲಿಯನ್ನು ಮಾಡಿ ಅದಕ್ಕೆ ಬೇಕಾದಂಥ ಸಿಬ್ಬಂದಿ ವರ್ಗವನ್ನು ಒದಗಿಸಿಲ್ಲ ಎಂದು ನಾನು ಕೇಳಿದ್ದೇನೆ. ಇವತ್ತು ಕನ್ನಡ ಬೆರಳಚ್ಚುಗಾರರು ಶೀಘ್ರಲಿಪಿಗಾರರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸರ್ಕಾರದವರು ಕನ್ನಡಕ್ಕೆ ಪ್ರೋತ್ಸಾಹ ಕೊಡುತ್ತಾರೆಂದು ನೂರಾರು ಜನ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಕಲಿತುಕೊಂಡು ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬಹುದಾದರೆ, ಕಾಮರ್ಸ್ ಎಕ್ಸಾಮಿನೇಷನ್ ಬೋರ್ಡ್‌ನವರು ಕನ್ನಡಕ್ಕೆ ಸಂಬಂಧಪಟ್ಟ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳನ್ನು ನಡೆಸುತ್ತಾರೆ, ಅಲ್ಲಿಗೆ ನಮ್ಮ ಲೆಜಿಸ್ಲೇಚರ್ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಪರೀಕ್ಷಕರಾಗಿ ಹೋದರೆ ಇವರನ್ನು ಖನಿಷ್ಠವಾಗಿ ಕಾಣುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ಬೇರೆಯವರಿಗೆ ಯಾವರೀತಿಯ ರೆಮ್ಯುನರೇಷನ್ ಕೊಡುತ್ತಾರೆಯೋ ಅವಕ್ಕಿಂತ ಕನ್ನಡದವರಿಗೆ ಕಡಿಮೆ ಕೊಡುತ್ತಿದ್ದಾರೆ. ಈ ರೀತಿಯಾದಂಥ ತಾರತಮ್ಯವನ್ನು ಕನ್ನಡ ಕಲಿತವರಿಗೆ ಮಾಡುವುದು ಸರಿಯಲ್ಲ. ಆಂಗ್ಲಭಾಷೆಯ ಪರೀಕ್ಷಕರಿಗೆ ಅಲ್ಲಿ ನೂರು ರೂಪಾಯಿಗಳ ರೆಮ್ಯುನರೇಷನ್ ಬೇಕಾದರೆ ಕೊಡುತ್ತಾರೆ ನಮ್ಮ ಕನ್ನಡದ ಪರೀಕ್ಷ

ಕರುಹೋದರೆ ಅವರಿಗೆ ೨೫-೩೦ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಅದು ಏನೋ ದಾನ ಕೊಟ್ಟಂತೆ, ಕೃಪೆ ಮಾಡಿ ಕೊಡುತ್ತಾರೆ. ಈ ತಾರತಮ್ಯ ಏಕೆ ? ಇದು ಖಂಡಿತವಾಗಿಯೂ ಹೋಗಬೇಕು ಇದು ಕನ್ನಡದ ಪ್ರೋತ್ಸಾಹಕ್ಕೆ ಕೊಡತಕ್ಕ ಸಹಕಾರವಲ್ಲ. ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಕಲಿಯುವುದು ಇಂಗ್ಲೀಷ್ ಬೆರಳಚ್ಚು ಮತ್ತು ಶೀಘ್ರಲಿಪಿಗಿಂತ ಕಷ್ಟ ಎನ್ನುವುದು ಇದೆ. ಆದ್ದರಿಂದ ಈಗಲಾದರೂ ಸರ್ಕಾರದವರು ಈ ಕಡೆ ಗಮನ ಹರಿಸಿ ಇಂಗ್ಲೀಷ್ ಭಾಷೆಗೆ ಸರಿಸಮನಾಗಿ ಕನ್ನಡವನ್ನು ಪರಿಗಣಿಸದೆ ಇರುವುದು ಬಹಳ ಅನ್ಯಾಯ, ಈ ಬಗ್ಗೆ ಸರ್ಕಾರದ ಗಮನವನ್ನು ಹರಿಸಲಿಕ್ಕೆ ಸಂಬಂಧಪಟ್ಟವರಿಗೆ ಅರ್ಜಿಯನ್ನು ಸಲ್ಲಿಸಿದ್ದೇನೆ ಮತ್ತು ಈಗ ನನಲ್ಲಿರುವ ಒಂದು ಆದರ ಪ್ರತಿಯನ್ನೂ ತಮಗೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯದಾಗಿ ಈ ಸ್ಕೂಲ್ ಕಟ್ಟಡಗಳ ಬಗ್ಗೆ ಹೇಳುವುದಾದರೆ ಹಳ್ಳಿಗಳಲ್ಲಿ ಸ್ಕೂಲ್ ಕಟ್ಟಡಗಳ ಕೊರತೆ ಬಹಳ ಇದೆ. ನಾನು ಈ ಬಗ್ಗೆ ಕೇಳುವುದು ಏನೆಂದರೆ ವರ್ಷಕ್ಕೆ ಎಷ್ಟು ಸ್ಕೂಲ್ ಕಟ್ಟಡಗಳನ್ನು ಕಟ್ಟಬೇಕು ಎಂದು ಸರ್ಕಾರದ ಆಲೋಚನೆ ಇದೆ ಅನ್ನುವುದನ್ನು ಹೇಳಬೇಕು. ನನಗೆ ಗೊತ್ತಿರುವ ಹಾಗೆ 7-8 ವರ್ಷಗಳಿಂದಲೂ ಕೂಡ ನನ್ನ ಕ್ಷೇತ್ರದಲ್ಲಿರುವ ನಾನಬೂರು ಮತ್ತು ಮಂದಗದ್ದೆ ಎರಡು ತಾಲ್ಲೂಕು ಬೋರ್ಡ್ ಹೈಸ್ಕೂಲ್‌ಗಳನ್ನು ಸರ್ಕಾರದವರು ಏನು ಟೇಕನ್‌ಓವರ್ ಮಾಡಿಕೊಂಡರೋ ಅದನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿದ್ದಾರೆ. ಅಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಬೇಕು ಎಂದು ಕೇಳುತ್ತಿದ್ದಾರೆ. ಶಾಲಾ ಕಟ್ಟಡಗಳನ್ನು ಕಟ್ಟಬೇಕಾದರೆ ಮೈಸೂರು ಮತ್ತು ಬೆಂಗಳೂರಿನಲ್ಲಿ ಹಣ ಸಿಕ್ಕುವ ಹಾಗೆ ಹಳ್ಳಿಗಳಲ್ಲಿ ಸಿಕ್ಕುವುದಿಲ್ಲ. ಆದರೂ ಕೂಡ ನಮ್ಮ ಕೈಯಲ್ಲಾದಷ್ಟು ಮಾಡಿಕೊಡುತ್ತೇವೆ. ಈ ಬಗ್ಗೆ ಸರ್ಕಾರವೇ ಸಂಪೂರ್ಣವಾದ ಜವಾಬ್ದಾರಿ ಹೊತ್ತುಕೊಂಡು ನಮ್ಮ ಕ್ಷೇತ್ರದಲ್ಲಿರುವ ಪ್ರೈಮರಿ ಮತ್ತು ಪ್ರೌಢಶಾಲಾ ಕಟ್ಟಡಗಳ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇಷ್ಟೇ ಅಲ್ಲದೆ ಇದರ ರಿಪೇರಿನೂ ಕೂಡ ಸಕಾಲದಲ್ಲಿ ಮಾಡಿಕೊಟ್ಟರೆ ಸಾಕು. 10 ವರ್ಷ 20 ವರ್ಷವಾದರೂ ಕೂಡ ಒಂದು ಸುಣ್ಣ ಬಣ್ಣ ಆ ಕಟ್ಟಡಕ್ಕೆ ಇರುವುದಿಲ್ಲ. ಯಾರಾದರೂ ಮಂತ್ರಿಗಳು ಬಂದರೆ ಆ ಹೊತ್ತಿಗೆ ಸರಿಯಾಗಿ ಆ ಕಟ್ಟಡಗಳನ್ನು ರಿಪೇರಿ ಮಾಡುವ ಬದಲು ಇಂಥಿಂಥಾ ಕಾಲದಲ್ಲಿ ಇಂಥಿಂಥಾ ರಿಪೇರಿಯಾಗಬೇಕು ಅಂತ ಮಾಡಬೇಕು. ಆ ರಿಪೇರಿಗಳನ್ನು ಸಕಾಲದಲ್ಲಿ ಮಾಡಿಕೊಡಬೇಕು. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡುವಾಗ ಶಾಲಾ ಕಟ್ಟಡಗಳ ಬಗ್ಗೆ ಸರ್ಕಾರೀ ಕಟ್ಟಡಗಳು ಎಷ್ಟು ಇವೆ ಮತ್ತು ಎಲ್ಲೆಲ್ಲಿ ಬಾಡಿಗೆಗಳನ್ನು ಕೊಟ್ಟು ಶಾಲೆಗಳನ್ನು ನಡೆಸುತ್ತಾರೆ ಅನ್ನುವ ವಿವರಣೆಯನ್ನು ಕೊಡಬೇಕು ಎಂದು ಕೇಳುತ್ತೇನೆ.

ಇನ್ನು ಅಕಾಡಮಿ ವಿಷಯದ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನಾನು ಒಂದೇ ಮಾತು ಹೇಳುತ್ತೇನೆ. ಅದೇನೆಂದರೆ ಈಗ 4 ಅಕಾಡಮಿಗಳು ಇವೆ, ಇನ್ನೊಂದು ಉರ್ದು ಅಕಾಡಮಿ ಸೇರಿದರೆ ಒಟ್ಟು 5 ಅಕಾಡಮಿ ಆಗುತ್ತದೆ. ಇದನ್ನೆಲ್ಲಾ ಸೇರಿ ಒಂದು ಅಕಾಡಮಿ ಮಾಡಬೇಕು ಅನ್ನುವ ಯೋಚನೆ ಇದೆ ಎಂದು ನಾನು ಕೇಳಿದ್ದೇನೆ. ಹಾಗೆ ಮಾಡಿದರೆ ಒಳ್ಳೆಯದು. ಮತ್ತು ಇದಕ್ಕೆ ಒಬ್ಬರು ಐ. ಎ. ಎಸ್. ಆಫೀಸರನ್ನು ಇಡುತ್ತೀರಿ. ಏತಕ್ಕೆ ? ನಮ್ಮಲ್ಲಿ ದೊಡ್ಡ ದೊಡ್ಡ ಸಾಹಿತ್ಯ ಕ್ಷೇತ್ರದಲ್ಲಿ, ಕಲಾ ಕ್ಷೇತ್ರದಲ್ಲಿ ಕೆಲಸ ಮಾಡಿರತಕ್ಕಂಥಾ ಶ್ರೀ ಗೋಪಾಲಕೃಷ್ಣ ಅಡಿಗರವರು ಮತ್ತು ಶ್ರೀಮಾನ್ ಶಿವರಾಂ ಕಾರಂತರವರು ಇಲ್ಲವೇ ? ಅವರನ್ನು ಆ ಪೀಠದಲ್ಲಿ ಕೂರಿಸಬೇಕು ಎಂದು ಹೇಳುತ್ತೇನೆ.

ಇನ್ನು ಅಧ್ಯಾಪಕರ ಕೊರತೆ ವಿಚಾರದಲ್ಲಿ ಒಂದೆರಡು ಮಾತು ಹೇಳುತ್ತೇನೆ. ನಮ್ಮ ತಾಲ್ಲೂಕಿನ ಪ್ರೈಮರಿ ಸ್ಕೂಲ್‌ನಲ್ಲೇ 73 ವೇಕನ್ಸಿ ಕೊರತೆ ಬಿದ್ದಿದೆ. ಎಂದು ಹೇಳುತ್ತೇನೆ. ಇವರನ್ನು ಕೇಳಿದರೆ ಅಧ್ಯಾಪಕರ ಕೊರತೆ ಇಲ್ಲ ಎಂದು ಹೇಳುತ್ತಾರೆ. ನನಗೆ ಚೆನ್ನಾಗಿ ಗೊತ್ತಿದೆ. ಆ ಅಧ್ಯಾಪಕರ ಕೊರತೆಯನ್ನು ಸರ್ಕಾರ ಭರ್ತಿ ಮಾಡದೇ ಹೋದರೆ ಈಗ ನಾವು ಇದಕ್ಕೆ ಕೊಡುವ ಸುಮಾರು ೧೩೦ ಕೋಟಿ ರೂಪಾಯಿಯನ್ನು ಇನ್ನಾವುದಕ್ಕೆ ಖರ್ಚು ಮಾಡುತ್ತೀರಿ ಅಂತ ಕೇಳಬೇಕಾಗಿದೆ. ಈ ಅಧ್ಯಾಪಕರ ಕೊರತೆ ನಮ್ಮ ಹಳ್ಳಿಗಾಡಿನಲ್ಲಿ ನೀಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ ಹಾಗೆಯೇ ಈ ಪ್ರೌಢಶಾಲೆಯಲ್ಲೂ ಸಹ ಅಧ್ಯಾಪಕರ ಕೊರತೆ ಇದೆ ಎಂದು ಹೇಳುತ್ತೇನೆ. ಉದಾಹರಣೆಗೆ ನಮ್ಮಲ್ಲಿ ಒಂದು ಗರ್ಲ್ಸ್ ಹೈಸ್ಕೂಲ್ ಇದೆ, ಅದರಲ್ಲಿ ಇಬ್ಬರು ಆರ್ಟ್ಸ್ ಟೀಚರ್ ಮತ್ತು ಒಬ್ಬ ಲೈಬ್ರರಿ ಅಟೆಂಡರ್ ಪೋಸ್ಟ್ 3 ವರ್ಷದಿಂದಲೂ ಖಾಲಿ ಇದೆ. ಅದಕ್ಕೆ ಇನ್ನೂ ಭರ್ತಿ ಮಾಡಿಲ್ಲ. ಆದುದರಿಂದ ಸರ್ಕಾರದವರು ಮೊದಲು ಅಧ್ಯಾಪಕರ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ವಿದ್ಯಾರ್ಥಿಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ತುರ್ತು ಪರಿಸ್ಥಿತಿ ಸಮಯದಲ್ಲಿ ಬಹಳ ವಿದ್ಯಾರ್ಥಿಗಳನ್ನು ಅವರು ವಿಕ್ಟಿಮೈಸ್ ಮಾಡಿದ್ದಾರೆ. ಕೆಲವರನ್ನು 2 ವರ್ಷ ಡಿಬಾರ್ ಮಾಡಿದ್ದಾರೆ. ಇನ್ನು ಕೆಲವರಿಗೆ ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್‌ಗಳನ್ನು ತಡೆದಿದ್ದಾರೆ: ಇನ್ನೂ ಬೇಕಾದ ಹಾಗೆ ತೊಂದರೆಗಳನ್ನು ಕೊಟ್ಟಿದ್ದಾರೆ ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದು ಇಷ್ಟೆ ಈ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ತೊಂದರೆಗೊಳಗಾದಂಥಾ ಹುಡುಗರ ಒಂದು ಪಟ್ಟಿಯನ್ನು ತರಿಸಿಕೊಂಡು ಅವರಿಗೆ ಮುಂದೆ ಯಾವ ತೊಂದರೆಯೂ ಆಗದೇ ಇದ್ದ ಹಾಗೆ ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ರಾಜ್ಯಾದ್ಯಂತ ತಮ್ಮ ಸರ್ವಾಧಿಕಾರವನ್ನೂ ಉಪಯೋಗಿಸಿ ಅವರನ್ನು ದಮನ ಮಾಡುವ ರೀತಿಯಲ್ಲಿ ಕಾರ್ಯ ಕ್ರಮ ಕೈಗೊಂಡಿದ್ದರಿಂದ ಅನೇಕ ವಿದ್ಯಾರ್ಥಿಗಳು ತೊಂದರೆಗೆ ಒಳಗಾಗಿದ್ದಾರೆ. ಕೆಲವು ವಿದ್ಯಾರ್ಥಿಗಳನ್ನು ಹೊರಗೆ ಹಾಕಿದ್ದಾರೆ, ವಿದ್ಯಾರ್ಥಿಗಳನ್ನು ಇನ್ನೂ ಕಾಲೇಜಿಗೆ ತೆಗೆದುಕೊಂಡಿಲ್ಲಾ ಅವರನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮೊಟ್ಟ ಮೊದಲು ಸರ್ಕಾರ ಈ ಬಗ್ಗೆ ಆಜ್ಞೆಯನ್ನು ಹೊರಡಿಸಬೇಕು ಎಂದು ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ.

ಇನ್ನು ನಮ್ಮ ವಿದ್ಯಾಭ್ಯಾಸ ಯಾವ ರೀತಿ ಇದೆ ಎಂದು, ಕೇವಲ ಮೆಕಾಲೆ ವಿದ್ಯಾಭ್ಯಾಸವಾಗಿ ಆಗಿಬಿಟ್ಟಿದೆ. ಅಂದರೆ ಬರೀ ಗುಮಾಸ್ತರನ್ನು ತಯಾರು ಮಾಡುವುದಕ್ಕೆ ಬರೀ ನೌಕರಶಾಹಿಯನ್ನು ತಯಾರುಮಾಡುವುದಕ್ಕೆ ಆಗತಕ್ಕಂಥಾ ವಿದ್ಯಾಭ್ಯಾಸವಾಗಿ ಬಿಟ್ಟಿದೆ. ಆ ಹುಡುಗರಿಗೆ ಮೂಲಭೂತ ವಿದ್ಯಾಭ್ಯಾಸದಲ್ಲಿ ತರಬೇತಿ ಕೊಡಬೇಕು. ಅಂದರೆ ತಾವು ಓದಿದ ನಂತರ ತನ್ನ ಕಾಲ ಮೇಲೆ ನಿಂತು ಕೊಂಡು ಜೀವನ ನಡೆಸುವುದಕ್ಕೆ ಯಾವ ರೀತಿ ಒಂದು ವಿದ್ಯಾಭ್ಯಾಸ ಕೊಡಬೇಕು ಆರೀತಿ ಆಗಿಲ್ಲ. ಇವರ ಬಗ್ಗೆ ಮೂಲಭೂತವಾಗಿ ಬದಲಾವಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಸಚಿವರಾದ ಡಾಕ್ಟರ್. ಚಂದರ್‌ರವರು ಒಂದು ಕಮಿಟಿ ನೇಮಕ ಮಾಡಿದ್ದಾರೆ. ಅವರ ಶಿಫಾರಸ್ಸು ಬಂದನಂತರ ನಮ್ಮ ಸರ್ಕಾರ ಅದನ್ನು ಅನುಷ್ಠಾನಕ್ಕೆ ತರುತ್ತಾರೆಂದು ನಾನು ಅಪೇಕ್ಷಪಡುತ್ತೇನೆ

ಇನ್ನು ಈ ವಿದ್ಯಾಭ್ಯಾಸದಲ್ಲಿ ಒಂದು ವಿಷಯ ಹೇಳುವುದಾದರೆ ಬಿ.ಎ., ಬಿ.ಎಸ್.ಸಿ., ಎಂ.ಎ. ಎಂ.ಎಸ್.ಸಿ., ಈ ಪರೀಕ್ಷೆಗಳಿಗೆ ಹೆಚ್ಚು ಜನ ವಿದ್ಯಾರ್ಥಿಗಳು ಕಲಿತುಕೊಂಡು ಪಾಸಾಗುತ್ತಿದ್ದಾರೆ. ಈ ವಿದ್ಯಾಭ್ಯಾಸ ಕೊಡುವ ಬದಲು ಹೆಚ್ಚು ಹೆಚ್ಚಿಗೆ ತಾಂತ್ರಿಕ ಕಾಲೇಜು ವಿದ್ಯಾಭ್ಯಾಸ ಡಿಪ್ಲೊಮಾ ಕೋರ್ಸಸ್ ಒದಗಿಸಿದರೆ ಬಹಳ ಒಳ್ಳೆಯದು ತಮ್ಮಗೆ ಉದಾಹರಣೆ ಹೇಳುವುದಾದರೆ ಮೈನ್ಸ್ ಅಂಡ್ ಜುಯಾಲಜಿಯಲ್ಲಾಗಲಿ ಅಥವಾ ಬಂದರಿಗೆ ಸಂಬಂಧಪಟ್ಟ ವಿದ್ಯಾಭ್ಯಾಸದಲ್ಲಿಯಾಗಲಿ ಇಂಥಾ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಯಾವುದರಲ್ಲಾಗಲಿ ಹೆಚ್ಚು ಹೆಚ್ಚಾಗಿ ಅವರಿಗೆ ತರಬೇತಿ ಕೊಟ್ಟರೆ ಅವರು ಪದವಿ ಪಡೆದ ನಂತರ ಸ್ವತಂತ್ರವಾಗಿ ತಮ್ಮ ಕ್ಷೇತ್ರದಲ್ಲಿ ಜೀವನವನ್ನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ತಾಂತ್ರಿಕ ಶಾಲೆಗಳನ್ನು ಹೆಚ್ಚು ಹೆಚ್ಚಾಗಿ ಸರ್ಕಾರದವರು ನಿರ್ಮಾಣ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಈವೊತ್ತಿನ ದಿವಸ ಮಾನ್ಯ ಶ್ರೀಗೌಡಿಯವರು ರಜಾ ಬಗ್ಗೆ ಮಾತನಾಡಿದರು. ಮಲೆನಾಡಿನ ಭಾಗದಲ್ಲಿ ಅಕ್ಟೋಬರ್ ತಿಂಗಳಲ್ಲಿ ರಜಾ ಕೊಟ್ಟರೆ, ಅವರಿಗೆ ಅವಾಗ ಸುಗ್ಗಿ ಸಮಯವಾಗುವುದರಿಂದ ಪ್ರಯೋಜನವಾಗುತ್ತದೆ ಎಂದು ಹೇಳಿದರು. ಅವರ ಅಭಿಪ್ರಾಯವನ್ನು ನಾನೂ ಸಹ ಒಪ್ಪುತ್ತೇನೆ. ಈವಾಗ ನೀವು ರಜಾ ಕೊಟ್ಟರೆ ಏನಾಗುತ್ತದೆ ಎಂದರೆ ಈ ಮಳೆಗಾಲದಲ್ಲಿ ಆ ಹುಡುಗರುಗಳು ಹೊರಗೂ ಹೋಗುವ ಹಾಗಿಲ್ಲ. ಒಳಗೂ ಬರುವ ಹಾಗಿಲ್ಲ. ಸುಗ್ಗಿ ಸಮಯದಲ್ಲಿ ರಜಾ ಕೊಟ್ಟರೆ ಅವರ ಮನೆಯಲ್ಲೂ ಕೆಲಸ ಮಾಡಿಕೊಟ್ಟ ಹಾಗಾಗುತ್ತದೆ ಮತ್ತು ಅವರ ತಂದೆತಾಯಿಗಳೂ ಕೂಡ ಗದ್ದೆ ಕೆಲಸಕ್ಕೆ ಹೋಗುವುದಕ್ಕೆ ಅನುಕೂಲವಾಗುತ್ತದೆ, ಅವರು ಮಾಡಿರತಕ್ಕಂಥಾ ಸಲಹೆಯನ್ನು ನಾನು ಒಪ್ಪುತ್ತೇನೆ ಈ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು ಎಂದು ನಾನೂ ಕೂಡ ಹೇಳುತ್ತೇನೆ.

ಇನ್ನು ನನ್ನ ಸ್ನೇಹಿತರಾದ ಶ್ರೀಮಾನ್ ಶೀರ್‍ನಾಳಿ ಚಂದ್ರಶೇಖರ್‌ರವರು ಎ.ಇ.ಓ. ಬಗ್ಗೆ ಹೇಳಿದರು. ಅವರು ಹೇಳುತ್ತಾ ಇದ್ದುದನ್ನು ನಾನು ಕೇಳಿದೆ ಅವರು ಈ ಬಗ್ಗೆ ಬಹಳ ಕಾಲದಿಂದಲೂ ಅಂದರೆ ಎರಡು ವರ್ಷದಿಂದಲೂ ಹೇಳಿಕೊಂಡು ಬರುತ್ತಿದ್ದಾರೆ. ಈ ಬಗ್ಗೆ ನಾನು ಹೇಳುವುದು ಇಷ್ಟೆ ಈಗ ಏನಾಗುತ್ತದೆ ಎಂದರೆ ನಾನು ಮಾನ್ಯ ಮಂತ್ರಿಗಳ ಹತ್ತಿರವೋ ಅಥವಾ ಅಧಿಕಾರಿಗಳ ಹತ್ತಿರವೋ ಯಾವುದೋ ಒಂದು ಕೆಲಸಕ್ಕೆ ಹೋಗಿರುತ್ತೇನೆ ಇಂಥಾವರನ್ನು ಟ್ರಾನ್ಸ್‌ಫರ್ ಮಾಡಿಕೊಡಿ ವ ಅನ್ನುವ ವಿಚಾರದಲ್ಲಿಯಾಗಲಿ ಯಾವುದೋ ಒಂದು ವಿಚಾರದಲ್ಲಿಯಾಗಲಿ ಅವರ ಹತ್ತಿರ ಹೋಗಿರುತ್ತೇವೆ

ಒಂದುವೇಳೆ ನನ್ನ ಕೆಲಸ ಆಗದೇ ಇದ್ದರೆ ನಾವು ಆ ಮಂತ್ರಿಗಳನ್ನು ಬಯ್ಯುವುದು ಸಹಜ. ಈ ಮಾತನ್ನು ಹೇಳಿದರೆ ಇದು ಅನೀತಿಯುತವಾದುದ್ದು ಮತ್ತು ಅಸ್ಪಷ್ಟ ವಿಚಾರವಾದೀತು ಅಂತ ಏನೂ ಅಲ್ಲ. ನನಗೆ ಗೊತ್ತಿರುವ ಹಾಗೆ ಅವರು ಇಲ್ಲಿಗೆ ಬಂದು ಹೇಳುವುದಕ್ಕೆ ಅಧಿಕಾರ ಇಲ್ಲ. ಅದಕ್ಕೋಸ್ಕರ ನಾನು ಯಾವನೋ ಒಬ್ಬ ಅಧಿಕಾರಿಯನ್ನು ಶಿಕ್ಷಿಸಬೇಕು ಅಂತ ಹೀಗೆಲ್ಲಾ ಆಡುವುದು ಅಷ್ಟು ಉಚಿತವಾದುದಲ್ಲ ಎಂದು ಹೇಳುತ್ತೇನೆ. ಅವರು ಯಾರು ಅಂತ ನನಗೆ ಗೊತ್ತಿದೆ. ಆ ಅಧಿಕಾರಿ ಮನೆ ನಮ್ಮ ಮನೆ ಹತ್ತಿರವೇ ಇರುವುದು. ಹಿಂದೆ ಒಂದು ಸಾರಿ ನಮ್ಮ ಶೀರಾಳ್ಳಿ ಚಂದ್ರಶೇಖರ್‌ರವರು ಅವರ ಬಗ್ಗೆ ಆರೋಪಣೆ ಮಾಡಿದ್ದರು. ಆವಾಗ ನಾನು ಊರಿಗೆ ಹೋಗಿ ಅವರ ವಿಚಾರದ ಬಗ್ಗೆ ನನ್ನ ಹೆಂಡತಿಯನ್ನೂ ಮತ್ತು ಅಕ್ಕಪಕ್ಕದ ಮನೆಯವರನ್ನೂ ಕೇಳಿದೆ. ಅವರು ಆ ತರಹ ಏನೂ ಇಲ್ಲ. ಅವರು ಸರಿಯಾಗಿ ಕೆಲಸಕ್ಕೆ ಹೋಗುತ್ತಾರೆ, ಬರುತ್ತಾರೆ ಅಂತ ಹೇಳಿದರು. ನಾನು ಹೀಗೆಂದ ಮಾತ್ರಕ್ಕೆ ಅವರನ್ನು ಡಿಫೆಂಡ್ ಮಾಡಬೇಕು ಅಂತ ನಾನು ಮಾತನಾಡುತ್ತಾ ಇಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮನುಷ್ಯ ಮನುಷ್ಯನಿಗೆ ಪರಿಚಯ ಇರುವುದು ಏನಾದರೂ ತಪ್ಪೇ, ಹಾಗೆ ಮಾನ್ಯ ಯಾಹ್ಯಾರವರು ಮತ್ತು ಮಾನ್ಯ ಖರ್ಗೆ ಅವರು ನಮ್ಮ ಊರಿಗೆ ಬಂದರೆ ಅವರೊಂದಿಗೆ ಮಾತನಾಡುವುದು ತಪ್ಪೇ ? ಆದುದರಿಂದ ಅವರು ಮಾಡಿರುವ ಆರೋಪ ಸರಿಯಾದುದಲ್ಲ ಎಂದು ಹೇಳುತ್ತೇನೆ. ಮತ್ತು ಮಾನ್ಯ ಶೀರಾಳ್ಳಿ ಚಂದ್ರಶೇಖರ್‌ರವರು ಇವರ ಬಗ್ಗೆ ಏನು ಆರೋಪ ಮಾಡಿದ್ದಾರೆ ಅದರ ಬಗ್ಗೆ ಸರ್ಕಾರ ವಿಚಾರ ಮಾಡುವುದಾದರೆ ನಮ್ಮ ಅಭಿಪ್ರಾಯವನ್ನೂ ಸಹ ಕೇಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಟೆಕ್ಸ್ಟ್ ಬುಕ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನನ್ನ ಕೈಯಲ್ಲಿರುವ ಈ ಪುಸ್ತಕದ ಹೆಸರು 'ಸರಳ ಭಾರತಿ" ಅಂತ. ಈ ಹಿಂದೀ ಪುಸ್ತಕವನ್ನು 6 ನೇ ತರಗತಿಗೆ ಇಟ್ಟಿದ್ದಾರೆ. ಇದು ಐಚ್ಛಿಕ ಭಾಷೆ. ಇದರಲ್ಲಿ ಅ, ಆ, ಇ. ಈ ಮೊದಲುಗೊಂಡು ಕೊನೇವರೆಗೂ ಇದೆ. ಈ ಪುಸ್ತಕದ ಕಡೆಯಲ್ಲಿ ಒಂದು ಪಾಠ ಇದೆ. ಅದರಲ್ಲಿ ಈ ರೀತಿ ಇದೆ. ''ಆಜ್ ಸಚ್ ಮುಚ್ ಹಿ ವೆ ನಯೆ ಭಾರತ್ ಆತ್ಮ ಬನೀಹೈ'' ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇಂದಿರಾ ಗಾಂಧಿಯವರ ಬಗ್ಗೆ ಇವರಲ್ಲಿ ಹೇಳಿರುವುದು ತಪ್ಪು ಅಂತ ಹೇಳುವುದಿಲ್ಲ. ಆದರೆ ಇಂಥಾ ಮಾತುಗಳು ಮಹಾತ್ಮ ಗಾಂಧಿ ಬಗ್ಗೆಯಾಗಲಿ, ನೆಹರೂ ಬಗ್ಗೆಯಾಗಲಿ ಅಥವಾ ಸುಭಾಷ್‌ಚಂದ್ರ ಭೋಸ್ ಬಗ್ಗೆಯಾಗಲಿ ಅವರ ಹೆಸರು ಇದರಲ್ಲಿ ಇಲ್ಲ. ಆದುದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ.

ಡಾ. ಅಂಬೇಡ್ಕರ್, ಡಾ ಲೋಹಿಯಾ ಅಂತಹವರು ಯಾರೂ ಇರಲಿಲ್ಲವೇನು ? ಪ್ರಾಥಮಿಕ ಶಾಲೆಗಳ ಮಟ್ಟದಲ್ಲಿಯೇ ಈ ರೀತಿ ವ್ಯಕ್ತಿ ಪೂಜೆ ಮಾಡುವುದು ಸರಿಯೇ ? ಇಂತಹವರ ವಿಚಾರಗಳನ್ನು ಸಾಮಾನ್ಯವಾಗಿ ಅವರುಗಳು ದಿವಂಗತರಾದ ಮೇಲೆ ಸೇರಿಸುವುದು ಸ್ವಾಭಾವಿಕ. ಆದರೆ ಅವರು ಬದುಕಿರುವಾಗಲೇ ಈ ರೀತಿ ಪುಸ್ತಕಗಳಲ್ಲಿ ಸೇರಿಸಿದರೆ, ಅವರನ್ನು ಜೀವಂತವಾಗಿ ಹುತಾತ್ಮರನ್ನಾಗಿ ಮಾಡಿದಂತಾಗುತ್ತದೆ. ಆದ ಕಾರಣ ನಮ್ಮ ಸರ್ಕಾರದವರು ಇನ್ನು ಮುಂದೆಯಾದರೂ ಈ ರೀತಿ ಮಾಡದಂತೆ ಇರಲಿ ಎಂದು ಈ ಮೂಲಕ ತಿಳಿಸುತ್ತೇನೆ.

ಇನ್ನು ಪಿ ಯು ಸಿ ಗೆ ಟಾಲ್‌ಸ್ಟಾಯ್ ಜೀವನಚಿತ್ರ ಎಂಬ ಪುಸ್ತಕವನ್ನು ಇಟ್ಟಿದ್ದಾರೆ. ಇದರಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ವಿಚಾರಗಳು ಬಂದಿದೆ. ಇದರಲ್ಲಿರತಕ್ಕಂಥ ಪದಪುಂಜಗಳನ್ನು ಮತ್ತು ವಾಕ್ಯಗಳನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಕೆಲವು ವಾಕ್ಯಗಳನ್ನು ಮಾತ್ರ ಹೇಳುತ್ತೇನೆ. ''ಪರಸ್ಪರ ಸೋದರರಾಗಿ ಬಿಡಬಹುದೆಂದೂ ಹೇಳುತ್ತಿದ್ದ.'' ಇದರ ಅರ್ಥವೇನು? ''1844ರಲ್ಲಿ ಮೆಟ್ರಿಕ್ಯುಲೇಷನ್ ಪಾಸು ಮಾಡಿದ.. ಅಂದರೆ 1844ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಇತ್ತೇ?'' ಆ ನಂತರದವೇಳೆ ಟಾಲ್‌ಸ್ಟಾಯನ ಪ್ರೀತಿಯ ತಂಗಿ ಮಾರ್ಯ '', ಏನನ್ನೇ ಆಗಲಿ ಸಂಪೂರ್ಣವಾಗಿ ತಿಳಿಯುವ ಪ್ರವೃತ್ತಿ, ಇನ್ನೂ ಇತ್ಯಾದಿ ಇತ್ಯಾದಿ ಇದರಲ್ಲಿದೆ. ಇಲ್ಲಿ ಓದುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಕೆಲವು ಮಾತುಗಳಿವೆ. ಸುಮಾರು 26 ಜನ ಕನ್ನಡ ಅಧ್ಯಾಪಕರುಗಳು ಈ ಪುಸ್ತಕವನ್ನು ಪಾಠ ಮಾಡಲು ನಾವು ತಯಾರಿಲ್ಲವೆಂದು ಸರ್ಕಾರಕ್ಕೆ ಒಂದು ಮನವಿಯನ್ನು ಕಳುಹಿಸಿದ್ದಾರೆ. ಅದರ ಒಂದು ಕಾಪಿ ನನ್ನ ಹತ್ತಿರವಿದೆ. ಯೋಗ್ಯತೆ ಇಲ್ಲದಿರತಕ್ಕಂಥ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳಿದ್ದಾರೆ. ಇದರಲ್ಲಿ ಅಶ್ಲೀಲ ವಾಕ್ಯಗಳಿವೆ. ಇದರಲ್ಲಿರತಕ್ಕಂಥ ವಾಕ್ಯರಚನೆಯನ್ನು ಓದಿದರೆ, ಯಾರೂ

ಪಾಠ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದನ್ನು ಓದಲು ತಮಗೇ ನಾಚಿಕೆಯಾಗುತ್ತದೆಂದು ಕನ್ನಡ ಅಧ್ಯಾಪಕರು ಹೇಳುತ್ತಿದ್ದಾರೆ. ಈ ಪುಸ್ತಕವನ್ನು ವಾಪಸ್ ತೆಗೆದುಕೊಳ್ಳದಿದ್ದರೆ ಮುಷ್ಕರ ಮಾಡುತ್ತೇವೆಂದು ಅವರು ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ. ಸರ್ಕಾರದ ವಿರುದ್ಧವಾಗಿ ಮುಷ್ಕರ ಮಾಡಬೇಕಾಗುತ್ತದೆಂದು ಅವರು ತಮಗೆ ಮನವಿ ಕೊಟ್ಟಿದ್ದಾರೆ. ಅದನ್ನು ಕೂಡ ತಾವು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹೈಸ್ಕೂಲುಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಪಂಡಿತರ ಕಷ್ಟ ತಮಗೆ ಗೊತ್ತಿಲ್ಲ. ಅವರುಗಳು ಕನ್ನಡ ಎಂ. ಎ. ಮಾಡಿಕೊಂಡಿದ್ದಾರೆ. ಪಂಡಿತ ಪರೀಕ್ಷೆ ಮಾಡಿಕೊಂಡಿದ್ದಾರೆ. ಆದರೂ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಬಿ.ಇಡಿ. ಆಗಿರಬೇಕೆಂದು ಹೇಳುತ್ತಿದ್ದಾರೆ. ಈ ರೀತಿ ಇಲ್ಲದ ಕಾರಣಗಳನ್ನು ಹೇಳಿಕೊಂಡು ಕನ್ನಡ ಪಂಡಿತವರ್ಗದವರ ಮೇಲೆ ಗಧಾಪ್ರಹಾರ ಮಾಡುವುದನ್ನು ತಾವು ತಪ್ಪಿಸಿ, ಇತರರಿಗೆ ಕೊಟ್ಟಂತೆ ಅವರಿಗೂ ಪ್ರಮೋಷನ್ ಕೊಡುವುದರ ಮೂಲಕ ಅವರಿಗೂ ಒಂದು ಒಳ್ಳೆಯ ಸ್ಥಾನಮಾನವನ್ನು ನೀಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕೇಂದ್ರ ಗ್ರಂಥಾಲಯ ಎಂಬುದುಂಟು. ಇದರ ಬಗ್ಗೆ ನಾನು ಮತ್ತು ನನ್ನ ಮಾನ್ಯ ಸ್ನೇಹಿತರಾದಂಥ ಮಾನ್ಯ ಪಾಟೀಲ್ ಅವರು ಕಳೆದ ಅಧಿವೇಶನದಲ್ಲಿಯೇ ಸಾಕಷ್ಟು ಹೇಳಿದ್ದೇವೆ. ನೆನ್ನೆ ದಿವಸ ಮಾನ್ಯ ಬೈರಪ್ಪಾಜಿ ಅವರು ಮತ್ತು ಮಾನ್ಯ ಮಾರ್ಗದಮಲ್ಲಪ್ಪನವರು ಸಹ ಹೇಳಿದರು. ಆದ ಕಾರಣ ನಾನು ಇದರ ಬಗ್ಗೆ ಹೇಳದಿರುವುದು ಒಳ್ಳೆಯದು. ಇಂತಹ ಹೇಸಿಗೆ ವಿಷಯವನ್ನು ಎಷ್ಟು ಸಲ ಹೇಳುವುದು ? ಕೆಲವರಿಗೆ ಇದು ಚೆನ್ನಾಗಿ ಕಾಣಬಹುದು, ಅಂತಹವರು ಅದರ ಘಮಘಮ ವಾಸನೆಯನ್ನು ಅನುಭವಿಸುತ್ತಿರಲಿ. ಇದೇ ವಿಚಾರದಲ್ಲಿ ಈ ಲೆಜಿಸ್ಲೇಚರ್‌ನಲ್ಲಿರತಕ್ಕಂಥ ಅಧಿಕಾರಿಯೊಬ್ಬರ ಬಗ್ಗೆ ಒಂದು ಪುಸ್ತಕವನ್ನು ಪ್ರಿಂಟ್ ಮಾಡಿಸಿ ಹಂಚಿದ್ದಾರೆ. ಅದು ನನ್ನ ಹತ್ತಿರವೂ ಸಹ ಇದೆ. ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಈ ಬಗ್ಗೆ ತನಿಖೆ ಮಾಡಲು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದ್ದೇವೆಂದು ಹೇಳುತ್ತೀರಿ ಬರೀ ಆಡಿಟ್ ರಿಪೋರ್ಟ್ ಮೇಲೆ ಅವರು ಏನು ಮಾಡುತ್ತಾರೆ ? ಅದನ್ನು ಅವರು ಸರ್ಕಾರಕ್ಕೇ ವಾಪಸ್ ಕಳುಹಿಸಿದ್ದಾರೆ. ಸಂಬಂಧಪಟ್ಟವರ ಮೇಲೆ ಛಾರ್ಜಸ್‌ನ್ನು ಫ್ರೇಮ್ ಮಾಡಿ ಕಳುಹಿಸಿ, ನಂತರ ಎನ್‌ಕ್ವೈರಿ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಒಟ್ಟಿನಲ್ಲಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲೇ ಬೇಕು. ಅಂತಹವರನ್ನು ಗಲ್ಲಿಗೆ ಹಾಕಿ ನಾನು ಬೇಡವೆಂದು ಹೇಳುವುದಿಲ್ಲ. ಈ ಬಗ್ಗೆ ಪ್ರಿಂಟ್ ಆಗಿ ಬಂದಿರತಕ್ಕಂಥ ಈ ಪುಸ್ತಕದ ಮೇಲೆ ಅಧಿಕಾರಿ ಹೆಸರು ಅದರ ಕೆಳಗೆ ಲೆಜಿಸ್ಲೇಚರ್ ಕಾರ್ಯಾಲಯ, ವಿಧಾನಸೌಧ ಎಂದು ಇದೆ. ಆದ್ದರಿಂದ ಇದು ನಮ್ಮ ವಿಧಾನಸಭೆಯ ಅಂದರೆ ಈ ಸದನದ ಮೇಲೆ ಒಂದು ರೀತಿಯಾದಂಥ ಅಪ್ರತ್ಯಕ್ಷ ಆರೋಪವನ್ನು ಆಪಾದನೆಯನ್ನು ಹೊರಿಸಿದಂತಾಗುತ್ತದೆಂದು ನನಗನ್ನಿಸುತ್ತದೆ. ಆದ್ದರಿಂದ ಯಾರು ಇದನ್ನು ಪ್ರಕಟಣೆ ಮಾಡಿದ್ದಾರೆಂಬುದರ ಮೂಲವನ್ನು ಕಂಡುಹಿಡಿದು, ಅವರ ಮೇಲೆ ತಕ್ಕ ಕ್ರಮವನ್ನು ಮಾನ್ಯ ಅಧ್ಯಕ್ಷರು ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಕೇಂದ್ರ ಗ್ರಂಥಾಲಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನೆಲ್ಲಾ ಹೇಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಏಕೆಂದರೆ ಈ ಬಗ್ಗೆ ಎಷ್ಟು ಹೇಳಿದರೂ ಅಷ್ಟೆ. ಈ ಬಗ್ಗೆ ಸಾಕ್ಷೀ ಸಮೇತ ಒಂದು ಉದಾಹರಣೆಯನ್ನು ಕೊಡುತ್ತೇನೆ. ‘ವಿಶ್ವ ಇತಿಹಾಸ ಸಮೀಕ್ಷೆ’’ ಎಂಬ ಪುಸ್ತಕವನ್ನು ಪಿ. ಯು. ಸಿ. ಯ ಮೊದಲನೆಯ ವರ್ಷಕ್ಕೆ ಪಠ್ಯಪುಸ್ತಕವನ್ನಾಗಿ ಇಡಲಾಗಿದೆ. ೧೯೭೦ನೇ ಇಸವಿಯಿಂದ ಇದನ್ನೇ ಮುಂದುವರೆಸಿಕೊಂಡು ಬರಲಾಗಿದೆ. ನಮ್ಮಲ್ಲಿರತಕ್ಕಂಥ ಪಠ್ಯಪುಸ್ತಕಗಳ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ. ಮುಖ್ಯವಾಗಿ ಯಾವ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಇಡಲಾಗುತ್ತದೋ ಆ ಪುಸ್ತಕವನ್ನು ಲೈಬ್ರರಿಗೆ ಬಲ್ಕ್ ಪರ್ಚೇಸ್ ಮಾಡಬಾರದೆಂದು ಒಂದು ಸಾಮಾನ್ಯವಾದಂಥ ನಿಯಮವಿದೆ. ಆದರೆ ಈ ‘‘ವಿಶ್ವ ಇತಿಹಾಸ ಸಮೀಕ್ಷೆ’’ ಪುಸ್ತಕದ ಬಗ್ಗೆ ಏನು ಕಥೆಯಾಗಿದೆ ಎಂದರೆ, ಮೇಲಿನ ರಕ್ಷಾ ಕವಚವನ್ನು ಹರಿದು ಬೇರೆ ರೀತಿಯ ಬೈಂಡ್ ಹಾಕಿಸುವುದರ ಮೂಲಕ ನಮ್ಮ ಕೇಂದ್ರ ಗ್ರಂಥಾಲಯದವರು ೫–೧೦ ಸಾವಿರ ಪ್ರತಿಗಳನ್ನು ಖರೀದಿ ಮಾಡಿದ್ದಾರೆ. ಈ ಒಂದು ವ್ಯತ್ಯಾಸವನ್ನು ಬಿಟ್ಟರೆ ಈ ಎರಡೂ ಪುಸ್ತಕಗಳಲ್ಲಿರತಕ್ಕಂಥ ಒಂದು ಅಕ್ಷರವಾಗಲೀ ಒಂದು ಶಬ್ದವಾಗಲೀ ಒಂದು ವಾಕ್ಯವಾಗಲೀ, ಒಂದು ಲಿಪಿಯಾಗಲೀ ವ್ಯತ್ಯಾಸವಾಗಿಲ್ಲ. ಬೈಂಡ್ ಮಾತ್ರ ಬದಲಾವಣೆಯಾಗಿದೆ. ಇಂತಹ ಒಂದು ಭ್ರಷ್ಟಾಚಾರವನ್ನು ಅಲ್ಲಿ ನಡೆಸಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಮಾನ್ಯ ಸದಸ್ಯರು ಅಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿದರು. ಅಂದರೆ ಆ ಎರಡೂ ಪುಸ್ತಕಗಳನ್ನು ಬೇರೆಬೇರೆ ರೂಪದಲ್ಲಿ ಕೊಂಡುಕೊಂಡಿದ್ದಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳಿದ್ದು ಯಾವ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಇಡಲಾಗುತ್ತದೋ ಅಂತಹ ಪುಸ್ತಕವನ್ನು ಲೈಬ್ರರಿಗೆ ಬಲ್ಕ್ ಪರ್ಚೇಸ್ ಮಾಡಬಾರದೆಂದೂ ನಿಯಮವಿದ್ದರೂ ಸಹ ಈ ಪುಸ್ತಕದ ಸುಮಾರು ಹತ್ತು ಸಾವಿರ ಪ್ರತಿಗಳನ್ನು ಕೊಂಡಿರಬಹುದೆಂದು ಕಾಣುತ್ತದೆ. ಇಂತಹ ಅವ್ಯವಹಾರಗಳು ಅಲ್ಲಿ ನಡೆದಿದೆ ಈ ಅವ್ಯವಹಾರಗಳ ಬಗ್ಗೆ ನಾನು ಈ ಸದನಕ್ಕೆ ಬಂದಾಗಿನಿಂದಲೂ ಸಹ ಸಾಕಷ್ಟು ಹೇಳಿದ್ದೇನೆ. ಆದರೆ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಯ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದೆ ಅವರನ್ನು ಅಲ್ಲಿಯೇ ಮುಂದುವರಿಸಿದ್ದಾರೆ. ಯಾವ ಅಧಿಕಾರಿಯ ಮೇಲೆ ಆರೋಪವಿದೆಯೋ ಅಂತಹವರನ್ನು ಅಲ್ಲಿಯೇ ಇಟ್ಟು, ಸಿ. ಒ. ಡಿ. ಯಿಂದ ತನಿಖೆ ಮಾಡಿಸುವುದು ಯಾವ ಲೆಕ್ಕಾಚಾರ ? ಇದರಿಂದ ಸಂಬಂಧಪಟ್ಟ ದಾಖಲೆಪತ್ರಗಳು ತನಿಖಾಧಿಕಾರಿಗಳಿಗೆ ಸಿಗುತ್ತದೆಯೋ ಎಂಬುದನ್ನು ತಾವೇ ವಿಚಾರ ಮಾಡಬೇಕು. ಯಾರು ಇವರಿಗೆ ಗುರಾಣಿಯಾಗಿದ್ದಾರೆ, ಯಾರು ಇವರಿಗೆ ರಕ್ಷಾಕವಚವಾಗಿದ್ದಾರೆ ಅವರ ಒಂದು ಹಂಗಿಗೆ ಅವರ ಒಂದು ದಾಕ್ಷಿಣ್ಯಕ್ಕೆ ತಾವು ಒಳಗಾಗದೆ ನಿಷ್ಪಕ್ಷಪಾತವಾದಂಥ ತನಿಖೆಯನ್ನು ನಡೆಸಬೇಕೆಂದು ಹೇಳುತ್ತೇನೆ. ಈ ಅವ್ಯವಹಾರಗಳ ಬಗ್ಗೆ ಯಾರೋ ಬರೆದುಕೊಟ್ಟಿರುವುದನ್ನು ಇಲ್ಲಿ ಓದುವುದು ಸರಿಯಲ್ಲವೆಂದು ತಮಗೆ ಒಂದು ನಿಜವಾದ ಸಾಕ್ಷಿಯನ್ನೇ ತಂದು ಹೇಳಿದ್ದೇನೆ. ಇಷ್ಟಾದರೂ ನಮ್ಮ ಸರ್ಕಾರದವರು ಇವರ ಬಗ್ಗೆ ಕ್ರಮ ಕೈಗೊಳ್ಳುತ್ತಾರೋ ಅಥವಾ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ನನ್ನ ಇಬ್ಬರು ಸ್ನೇಹಿತರೇ ಈಗ ಮಂತ್ರಿಗಳಾಗಿದ್ದಾರೆ. ಜೊತೆಗೆ ಅದೃಷ್ಟದಿಂದ ಅವರ ಕೈಕೆಳಗೆ ಬಂಗಾರದಂಥ ಅಧಿಕಾರಿಗಳಿದ್ದಾರೆ ಕಮಿಷನರ್, ಡಿ. ಪಿ. ಐ., ಅಡಿಷನಲ್ ಸೆಕ್ರೆಟರಿ ಮೊದಲುಗೊಂಡು ಬಹಳ ಜನ ಅಧಿಕಾರಿಗಳು ಇದ್ದಾರೆ. ಇಷ್ಟು ಜನ ಅಧಿಕಾರಿಗಳಿದ್ದರೂ ಕೂಡ ಅವರ ಮೇಲೆ ಏತಕ್ಕೆ ಕ್ರಮ ಕೈಕೊಳ್ಳುತ್ತಿಲ್ಲ ? ಹಾಗಿದ್ದರೆ ನಾನು ಕೇಳುತ್ತೇನೆ, ಆ ಅಧಿಕಾರಿ ಇವರೆಲ್ಲರಿಗಿಂತ ಅತ್ಯಂತ ಮೇಲ್ಮಟ್ಟದವರೇನು ? ಅವರು ಅಂತಹ ಶಕ್ತಿಶಾಲಿಗಳೇನು ?

ಅವರನ್ನು ಪ್ರಧಾನ ಪಟ್ಟಕ್ಕೆ ಏತಕ್ಕೆ ಏರಿಸಿದರು ? ಅವರ ಬಗ್ಗೆ ಏತಕ್ಕೆ ಕ್ರಮತೆಗೆದುಕೊಳ್ಳಲಿಲ್ಲ. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಹೇಳಿದ್ದೇನೆ. ಈಗ ಹಿಳೆ ಅಧಿವೇಶನಗಳಿಂದ ಪ್ರತಿ ಅಧಿವೇಶನದಲ್ಲಿಯೂ ಹೇಳಿದರೂ ಸಹ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಯಾರ ಬಗ್ಗೆಯಾದರೂ ನಾವು ಇಲ್ಲಿ ಹೇಳುವುದೇ ತಪ್ಪಾಗಿದೆ. ಇಂಥವರು ದುಡ್ಡು ಹೊಡೆದಿದ್ದಾರೆ. ತಪ್ಪು ಮಾಡಿದ್ದಾರೆ ಎಂದು ಹೇಳಿದರೆ ಅಂಥವರನ್ನು ಮೆಹರ್ಬಾನಿ ಮಾಡಿ ದೊಡ್ಡ ಹುದ್ದೆಗೆ ಏರಿಸುತ್ತಾರೆ. ಈ ರೀತಿ ಸರ್ಕಾರದ ನೀತಿ ಇದೆ ಎಂದರೆ ನಾವು ಸುಮ್ಮನೆ ಇರುತ್ತೇವೆ ದುಡ್ಡು ಹೊಡೆದಂತಹವರಿಂದ ಇವರಿಗೂ ಹಿಸ್ಸೆ ಇದೆ ಎಂದು ಹೇಳಿದರೆ. ಅದು ಖಚಿತವಾಗಿ ನಡೆದಿಲ್ಲವೆಂದು ಹೇಳಿದರೆ ಅವರ ಬಗ್ಗೆ ಮಾನ್ಯತೆ ಕೊಡಬಹುದು.

ವಿಶ್ವವಿದ್ಯಾನಿಲಯದ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ಮೈಸೂರು ವಿಶ್ವವಿದ್ಯಾನಿಲಯ ಒಂದು ಇದೆ. ಈಗ ಅಲ್ಲಿ ಹೋದರೆ ಬರೀ ಸೆಮಿನಾರ್‌ಗಳೆ ನಡೆಯುತ್ತಿವೆ. ಈ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪ ಈಗಾಗಲೇ ಹೇಳಿದ್ದಾರೆ ಶ್ರೀಯುತ ಶ್ರೀಮಾಲಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಜಿಟಿಂಗ್ ಪ್ರೊಫೆಸರ್ ಆಗಿ ನೇಮಕ ಮಾಡಿದ್ದಾರೆ. ಈ ವಿಶ್ವವಿದ್ಯಾನಿಲಯ ಸ್ವಾಯತ್ತ ಸಂಸ್ಥೆಯಾಗಿ ಸರ್ವ ಸ್ವತಂತ್ರವಾಗಿ ನಡೆಯುವಂತಹ ವೇದಿಕೆಯಾಗಬೇಕು ಆದರೆ ಈ ವಿಶ್ವವಿದ್ಯಾನಿಲಯ ಏನಾಗಿದೆ ಎಂದರೆ ಅಧಿಕಾರದಲ್ಲಿರುವವರ ಪಾದಾರದಿಂದ ಒಲೈಸುತ್ತಿದೆ. ಅಧಿಕಾರ ಗದ್ದುಗೆಯಲ್ಲಿರತಕ್ಕವರಿಗೆ ದಾಸಾನುದಾಸರಾಗಿ ಗುಲಾಮರಾಗಿ ನಡೆಯುತಕ್ಕ ಒಂದು ವಿಶ್ವವಿದ್ಯಾನಿಲಯವಾಗಿದೆ. ಹಿಂದಿನ ಪ್ರಧಾನಿಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ರಷ್ಯಾಕ್ಕೆ ಹೋಗಿ ಬಂದ ಕೂಡಲೇ ಇಲ್ಲದೇ ಇರತಕ್ಕ ಆಡಂಬರ ಮಾಡಿ ವಿಚಾರ ಸಂಕಿರಣ ಮಾಡಿದ್ದಾರೆ. ನಮ್ಮ ಪ್ರಧಾನಿಗಳಾದ ಶ್ರೀ ಮುರಾರ್ಜಿದೇಸಾಯಿಯವರು ಇಂಟರ್ ನ್ಯಾಷನಲ್ ಕಾಮನ್‌ವೆಲ್ತ್ ಸಮ್ಮೇಳನಕ್ಕೆ ಹೋಗಿ ಬಂದ ಮೇಲೆ ಅವರ ಬಗ್ಗೆ ವಿಚಾರ ಸಂಕಿರಣವನ್ನು ಇವರು ಏತಕ್ಕೆ ಮಾಡಲಿಲ್ಲ ?

4-00 P. M.

ಇನ್ನೂ ಸಿಂಡಿಕೇಟ್ ಮತ್ತು ಸೆನೆಟ್‌ಗಳ ವ್ಯವಹಾರ ಇನ್ನೂ ಪೂರ್ಣವಾಗಿಲ್ಲ. ಅಧಿಕಾರದಲ್ಲಿರುವವರು ಏನು ಬೇಕಾದರೂ ಮಾಡಬಹುದು ಎನ್ನುವ ಭಾವನೆ ಬಂದಿದೆ. ಇದರ ಬಗ್ಗೆ ವಿಚಾರಣೆ ಮಾಡಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ಅವ್ಯವಹಾರಗಳು ಢಾಣಾ ಢಂಗುರ ಬಾಜಾ ಭಜಂತ್ರಿ ಇದರ ಬಗ್ಗೆ ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ದೇವರಂತಹ ಮನುಷ್ಯರು. ಅವರ ಬಗ್ಗೆ ವೈಯಕ್ತಿಕವಾಗಿ ಒಂದು ಸೂಜಿಮೊನೆಯಷ್ಟು ಭಿನ್ನಾಭಿಪ್ರಾಯವಿಲ್ಲ. ಅವರ ಬಗ್ಗೆ ಅಪಾರವಾದ ಮತ್ತು ಪೂಜ್ಯ ಭಾವನೆಯನ್ನು ಹೊಂದಿರತಕ್ಕ ವ್ಯಕ್ತಿ ನಾನು. ಆದರೆ ಅಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ. ಈ ವಿದ್ಯಾ ಖಾತೆಯ ಇಬ್ಬರೂ ಸಚಿವರೂ ಏನಿದ್ದಾರೆ ಅವರೂ ಒಳ್ಳೆಯವರು. ಅವರು ಒಳ್ಳೆಯತನವನ್ನು ಇಟ್ಟುಕೊಂಡರೆ ಏನೂ ಪ್ರಯೋಜನವಿಲ್ಲ ಇಂಗ್ಲೀಷಿನಲ್ಲಿ ಹೇಳಿದಹಾಗೆ 'ಗುಡ್ ಫಾರ್ ನಥಿಂಗ್'' ಎಂದು ಹೇಳಿದ ಹಾಗೆ ಆಗುತ್ತದೆ.

ಉಪಾಧ್ಯಕ್ಷರು.—ಅವರು ಒಳ್ಳೆಯ ಕೆಲಸ ಮಾಡಿದರು ಎಂದು ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ಪಿ. ಯು. ಸಿ. ಪರೀಕ್ಷೆಯ ಮಾರ್ಕ್ಸ್‌ಕಾರ್ಡ್ ಅನು ವಿದ್ಯಾರ್ಥಿಗಳಿಗೆ ಕೊಟ್ಟಿದ್ದಾರೆ. ಆದರಲ್ಲಿ ಅಂಕಗಳೂ ಇಲ್ಲ, ಸಹಿಯೂ ಇಲ್ಲ. ಆದರಲ್ಲಿ ಸಂಸ್ಕೃತ, ಕೆಮಿಸ್ಟ್ರಿ, ಬಯಾಲಜಿ ಇವುಗಳನ್ನು ಸರಿಯಾಗಿ ನಮೂದು ಮಾಡಿಲ್ಲ. ಟೋಟಲ್ ಹಾಕಿಲ್ಲ. ಫ್ಯಾಕ್ಸಿಮಿಲ್ ಸಿಗ್ನೇಚರ್ ಹಾಕಿದ್ದಾರೆ. ಇದನ್ನು ಯಾರು ಬೇಕಾದರೂ ಮಾರ್ಕ್ಸ್ ಕಾರ್ಡಿಗೆ ಒತ್ತಿಕೊಳ್ಳಬಹುದು. ಸೀಲ್ ಹಾಕಿಕೊಳ್ಳಬಹುದು ಇದರಿಂದ ನಿಜವಾಗಿ ಪಾಸ್ ಆಗದೆ ಇರುವವರು ಬಹಳ ಜನ ಪಾಸ್ ಮಾಡಿದ್ದೇನೆ ಎಂದು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದರಿಂದ ಈ ಬಗ್ಗೆ ತಾವುಗಳು ಗಮನಿಸಿ ಈ ಬಗ್ಗೆ ಕ್ರಮ ಕೈಗೊಂಡು ನಕಲಿ ಮಾರ್ಕ್ಸ್‌ಕಾರ್ಡ್ ಮಾಡಿಕೊಳ್ಳುವುದಕ್ಕೆ ಅವಕಾಶವಾಗದಂತಹ ರೀತಿಯಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ.

ಈಗ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಎಂ. ಎ. ಎಸ್. ಸಿ. ಪಾಸಾಗಿರುವವರು ಅನೇಕ ಜನ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಕರ್ನಾಟಕದಲ್ಲಿ ಎಂ. ಎ ಎಂ. ಎಸ್. ಸಿ ಪಾಸಾಗಿರುವವರು ೫-೬ ಸಾವಿರ ಜನರು ನಿರುದ್ಯೋಗಿಗಳಾಗಿದ್ದಾರೆ. ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಬಿ.ಎ ಬಿ.ಎಸ್.ಸಿ. ಪಾಸುಮಾಡಿರುವವರು ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ಒಂದು ವರ್ಷಕ್ಕೆ ಗ್ರಾಜುಯೇಟ್ಸ್ ಒಂದು ಸಾವಿರ ಎರಡು ಸಾವಿರ ಜನ ಕಾಲೇಜುಗಳಿಂದ ಪಾಸಾಗಿ ಹೊರಗಡೆ ಬರುತ್ತಿದ್ದಾರೆ. ಅವರೆಲ್ಲರೂ ಕೆಲಸ ಇಲ್ಲದೆ ಅಲೆದಾಡುತ್ತಿದ್ದಾರೆ. ಆದ್ದರಿಂದ ಈ ಪೋಸ್ಟ್ ಗ್ರಾಜುಯೇಟ್ಸ್ ಕೋರ್ಸನ್ನಾದರೂ ಕೆಲವು ವರ್ಷಗಳ ಕಾಲ ಎಂದರೆ ಈಗ ಹಾಲಿ ಇರತಕ್ಕ ನಿರುದ್ಯೋಗಿಗಳೆಲ್ಲರಿಗೂ ಕೆಲಸ ದೊರೆಯುವವರೆಗೆ ಕ್ಲಾಸು ಮಾಡುವುದಿಲ್ಲ ಎನ್ನುವ ಒಂದು ನೀತಿಯನ್ನು ಅನುಸರಿಸಿದರೆ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದಂತಾಗುತ್ತದೆ. ಬಜೆಟ್ಟಿನಲ್ಲಿ ನಮ್ಮ ಸಚಿವದ್ವಯರುಗಳು ಈ ವಿದ್ಯಾ ಇಲಾಖೆ ೧೩೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿದ್ದಾರೆ. ಆದರಲ್ಲಿ ಅನೇಕ ಲೋಪದೋಷಗಳು ಇರುವಾಗ ಹೇಗೆ ಈ ಹಣವನ್ನು ಕೊಡುವುದು ? ಅವರು ಈ ಹಣವನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿ ಕುಳಿತುಕೊಂಡಿದ್ದಾರೆ. ಆದರೆ ಈ ಇಲಾಖೆಯಲ್ಲಿ ಇಷ್ಟೊಂದು ಅನ್ಯಾಯ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರಗಳು ಆಗುತ್ತಾ ಇರತಕ್ಕಂಥಾ ಇಲಾಖೆಗೆ ಇಷ್ಟೊಂದು ಹಣಕ್ಕೆ ಒಪ್ಪಿಗೆಯನ್ನು ಕೊಡುವುದು ಹೇಗೆ ?

ಇನ್ನು ಪ್ರೈವೇಟ್ ಸ್ಕೂಲುಗಳ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಸಾಕಷ್ಟು ಹೇಳಿದ್ದಾರೆ. ಬೆಂಗಳೂರು ಡಿವಿಜನ್‌ನಲ್ಲಿರತಕ್ಕ, ಬೆಂಗಳೂರು ಸಿಟಿಯಲ್ಲಿರತಕ್ಕ ಕೆಲವು ಪ್ರೈವೇಟ್ ಸ್ಕೂಲುಗಳ ಬಗ್ಗೆ ಹಿಂದೆ ಜಾಯಿಂಟ್ ಡೈರೆಕ್ಟರಾಗಿದ್ದಂತಹ ಶ್ರೀ ಟಿ. ರಾಮಯ್ಯನವರ ಕಾಲದಲ್ಲಿ ಮತ್ತು ಶ್ರೀಮಾನ್ ಮುಂಚಯ್ಯನವರ ಕಾಲದಲ್ಲಿ ಸುಮಾರು ೬೮ ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ಹಾಗೆ ಈ ಕೆಲವು ಪ್ರೈವೇಟ್ ಸ್ಕೂಲುಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದರು. ಆದರ ಬಗ್ಗೆ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರೂ ರೆಕಮೆಂಡ್ ಮಾಡಿದ್ದಾರೆ. ಈ ರೀತಿ ಕ್ರಮ ತೆಗೆದುಕೊಂಡು ಮಲ್ಲಿಕಾರ್ಜುನಸ್ವಾಮಿಗಳು ಅಪೀಲಿಗೆ ಹೋಗಿರುವ ವೇಳೆಗೆ ೬೦ ಲಕ್ಷ ರೂಪಾಯಿಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದರು. ಅದನ್ನು ಸಂಬಂಧಪಟ್ಟವರಿಗೆ ವಾಪಸ್ಸು ಕೊಡುವಂತೆ ಸರ್ಕಾರಿ ಆಜ್ಞೆ ಆಯಿತು. ಆದರ ಅರ್ಥ ಏನು ? ಏತಕ್ಕೆ ಈ ರೀತಿ ಆಯಿತು ? ಇದಕ್ಕೆ ಸಂಬಂಧಪಟ್ಟ ಫೈಲನ್ನು ತರಿಸಿ ನೋಡಬೇಕು ಈ ರೀತಿ ಮಾಡುವುದಕ್ಕೆ ಕಾರಣವೇನು ? ಇದರ ಬಗ್ಗೆ ಪರ್ಸೆಂಟೇಜ್ ಎಲ್ಲಾ ಬಂದಿದೆಯೇ ಇದರ ವಿಚಾರ ಏನು ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೬೦ ವಾಪಸ್ಸು ಕೊಟ್ಟರು ಎಂದು ಯಾರು ಹೇಳಿದರು

ಶ್ರೀ ಕೋಣಂದೂರು ಲಿಂಗಪ್ಪ.—ಪೂರ್ತಿ ಇಟ್ಟುಕೊಂಡರೆ ನಮ್ಮ ಅಭ್ಯಂತರ ಇಲ್ಲ ಏತಕ್ಕೆಂದರೆ ಕೆಲವು ಕಡೆ ಕೊಂಡರೋ ಇಂತಿಂಥವರಿಗೆ ಇಷ್ಟಿಷ್ಟು ಕೊಡಬೇಕೆಂದು ಗೊತ್ತಾಗುತ್ತದೆ, ಅವರು ಏನು ಜಮಾ ಖರ್ಚು ಮಾಡಿಕೊಂಡರೋ ಗೊತ್ತಿಲ್ಲ. ನಮಗೆ ಬಂದ ಸುದ್ದಿಯ ಪ್ರಕಾರ ಇದನ್ನು ವಿಚಾರ ಮಾಡಬೇಕು ನಮ್ಮ ಗೆಳೆಯರು ಹೇಳಿದ ಹಾಗೆ ಈ ಪ್ರೈವೇಟ್ ಸ್ಕೂಲುಗಳು ಮತ್ತು ಕಾಲೇಜುಗಳು ಏನಿವೆ ಇವುಗಳು ಒಂದು ಇಲ್ಲದಂತೆ ಪೂರ್ತಿಯಾಗಿ ಸರ್ಕಾರದವರೇ ತೆಗೆದುಕೊಂಡರೆ ಒಳ್ಳೆಯದು. ಈ ವಿದ್ಯಾ ಇಲಾಖೆ ಯಲ್ಲಿ ಸ್ವಲ್ಪ ಆಮೂಲಾಗ್ರವಾಗಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿಸಿF).— ಸನ್ಮಾನ್ಯ ಉಪಾಧ್ಯಕ್ಷರೆ, ಈ ದಿವಸ ಶಿಕ್ಷಣ ಶಾಖೆಯ ಬಗ್ಗೆ ಮಾನ್ಯ ಮಂತ್ರಿಗಳಿಬ್ಬರು ಸುಮಾರು ೧೪೫ ಕೋಟಿ ರೂಪಾಯಿಗಳ ೨೦-೨೨ನೇ ನಂಬರು ಎರಡು ಡಿಮ್ಯಾಂಡುಗಳನ್ನು ಅದರ ಅಂಗೀಕಾರಕ್ಕೆ ನಮ್ಮ ಮುಂದೆ ಮಂಡಿಸಿದ್ದಾರೆ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲಿಕ್ಕೆ ಎಷ್ಟು ಕಾಲವನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಗೊತ್ತಾದ ಕಾಲದಲ್ಲಿ ನಾನು ನನ್ನ ಕೆಲವು ಮಾತುಗಳನ್ನು ಹೇಳುತ್ತೇನೆ ಈ ವಿದ್ಯಾ ಇಲಾಖೆಯ ಶಿಕ್ಷಣದ ಬಗ್ಗೆ ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗ, ಹಿಂದುಳಿದ ವರ್ಗ, ಕೂಲಿಕಾರರ ವರ್ಗಗಳಿಗೆ ಎಷ್ಟರಮಟ್ಟಿಗೆ ಶಿಕ್ಷಣದ ಸೌಲಭ್ಯವನ್ನು ಕಲ್ಪಿಸಿದ್ದಾರೆ, ಅದರಲ್ಲಿ ಏನೇನು ತಪ್ಪು ಮಾಡಿದ್ದಾರೆ ಏನು ಮಾಡಬೇಕಾಗಿತ್ತು ಎನ್ನತಕ್ಕಂಥ ಅಂಶಗಳನ್ನು ಈ ಮನೆಯ ಗಮನಕ್ಕೆ ತಂದು, ಸರ್ಕಾರ ಅದನ್ನು ಮುಂದೆ ಪರಿಶೀಲನೆ ಮಾಡಿ ಜಾರಿಗೆ ತರಬೇಕು ಎಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿ ಇಲ್ಲಿ ಹೇಳಬಯಸುತ್ತೇನೆ, ಅಧ್ಯಕ್ಷರೇ. ಈ ಶಿಕ್ಷಣ ಪದ್ಧತಿ ಇದೆಯಲ್ಲಾ ಇದು, ಬ್ರಿಟಿಷರ ಕಾಲದಲ್ಲಿ ಗುಲಾಮಗಿರಿ ಗುಮಾಸ್ತರನ್ನು ಸೃಷ್ಟಿ ಮಾಡುವುದಕ್ಕೆ ಮಾಡಿದಂಥ ಶಿಕ್ಷಣ ಪದ್ಧತಿ ನಾವು ಸ್ವಾತಂತ್ರ್ಯವನ್ನು ಪಡೆದು ೩೦ ವರ್ಷಗಳಾದರೂ ಸಹ ಆ ಒಂದು ಶಿಕ್ಷಣ ಪದ್ಧತಿಯನ್ನೇ ಮುಂದುವರಿಸುತ್ತಿದ್ದೇವೆ. ಯಾವ ಮಟ್ಟದಲ್ಲೂ ಸಹ ಸ್ವಾವಲಂಬನೆ ಹೊಂದತಕ್ಕಂಥ ಶಿಕ್ಷಣವನ್ನು ನಾವು ಮಾಡಲಿಲ್ಲ. ಇವತ್ತು ನಾವು ಯಾವ ಮಟ್ಟದಲ್ಲಿ ಶಿಕ್ಷಣ ಪಡೆದರೂ ಈ ಶಿಕ್ಷಣ ಏನಾಗಿದೆಯೆಂದರೆ, ಎಲ್ಲಾ ಶಾಲೆಗಳೂ, ಎಲ್ಲಾ ಕಾಲೇಜುಗಳೂ, ಎಲ್ಲಾ ಸಂಸ್ಥೆ ಗಳೂ ಇವತ್ತು ಫ್ಯಾಕ್ಟರಿಗಳಾಗಿಬಿಟ್ಟಿವೆ. ಇಂತಹ ಒಂದು ಶಿಕ್ಷಣವನ್ನು ಯಾವ ರೀತಿ ರೀ ಓರಿಯಂಟೇಷನ್ ಮಾಡಬೇಕು, ಯಾವರೀತಿ ಬದಲಾವಣೆ ಮಾಡಬೇಕು, ಯಾವ ಯಾವ ಮಟ್ಟದಲ್ಲಿ ಈ ಶಿಕ್ಷಣವನ್ನು ಸರಿಪಡಿಸಿದರೆ ಸ್ವಾವಲಂಬನೆ ಬರುತ್ತದೆ ಎನ್ನತಕ್ಕಂಥಾದ್ದು ನಮ್ಮಲ್ಲಿ ತಜ್ಞರು ಇದ್ದರೂ ಸಹ ಮಾಡಲಿಲ್ಲ. ಮಾನ್ಯಮಂತ್ರಿಗಳಿಬ್ಬರೂ ಬಹಳ ಹುಮ್ಮಸ್ಸಿನಿಂದ ಕೆಲಸಮಾಡಲು ಈ ಶಾಖೆಯನ್ನು ವಹಿಸಿಕೊಂಡಿದ್ದಾರೆ. ಈಗ ಶಿಕ್ಷಣ ಪದ್ಧತಿ ಏನಿದೆ ಇದನ್ನು ಬಹಳ ಬದಲಾವಣೆ ಮಾಡಬೇಕು, ಎಲ್ಲಾ ಮಟ್ಟದಲ್ಲೂ ಸ್ವಾವಲಂಬನೆ ಬರಬೇಕು, ಎಲ್ಲೂ ಪರಾವಲಂಬನೆ ಆಗಬಾರದು ಎನ್ನತಕ್ಕಂಥ ಅಂಶಗಳನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು ಎಂದು ಹೇಳಬಯಸುತ್ತೇನೆ. ಮಹಾತ್ಮಾಗಾಂಧಿಯವರು ೧೯೩೭ನೇ ಇಸವಿ ಯಲ್ಲಿ ಈ ಶಿಕ್ಷಣ ಪದ್ಧತಿಯ ಬಗ್ಗೆ ಈ ಭಾರತದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಅಜ್ಞಾನ ಅಂಧಕಾರದಿಂದ ಕೂಡಿರತಕ್ಕಂಥ ಜನರ ಏಳಿಗೆಗಾಗಿ ಒಂದು ಸೂಚನೆಯನ್ನಿತ್ತರು. ಅದೇನೆಂದರೆ ಮೂಲ ಶಿಕ್ಷಣ ಪದ್ಧತಿ. ಈ ಮೂಲ ಶಿಕ್ಷಣ ಪದ್ಧತಿಯನ್ನು ನಾವು ಒಪ್ಪಿದ್ದೇವೆಯೋ, ಈ ಮೂಲ ಶಿಕ್ಷಣ ಪದ್ಧತಿ ಬಗ್ಗೆ ನಾವು ಚರ್ಚಿಸಿದ್ದೇವೆಯೋ? ಈ ಮೂಲ ಶಿಕ್ಷಣ ಪದ್ಧತಿಯಿಂದ ದೇಶದಲ್ಲಿರತಕ್ಕಂಥ ಅಜ್ಞಾನ, ಅಂಧಕಾರದಿಂದ ಕೂಡಿರತಕ್ಕಂಥ ಜನರ ಏಳಿಗೆಯಾಗುತ್ತದೆಯೋ ಎಂದು ಯೋಚನೆ ಮಾಡಲಿಲ್ಲ. ಇವತ್ತಿನ ದಿವಸ ರಷ್ಯಾದೇಶದ ವಿದ್ಯಾಭ್ಯಾಸವೋ, ಅಮೇರಿಕಾ ದೇಶದ ವಿದ್ಯಾಭ್ಯಾಸವೋ ಅಥವಾ ಇಂಗ್ಲೆಂಡ್ ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸದ ತತ್ವದ ಮೇಲೆಯೋ ನಾವು ಶಿಕ್ಷಣವನ್ನು ಬೆಳೆಸಿಕೊಂಡು ಬಂದಿದ್ದೇವೆ. ಇದನ್ನು ತಜ್ಞರು ಯೋಚನೆ ಮಾಡಿ ಸರಿಪಡಿಸಬೇಕು. ನಾವು ಸ್ವಾತಂತ್ರ್ಯವನ್ನು ಗಳಿಸಿ ೩೦ ವರ್ಷಗಳಾಗಿದೆ. ೧೯೭೧ ರಲ್ಲಿ ಜನಗಣತಿ ಏನಾಗಿದೆ ಅದರ ಪ್ರಕಾರ ಶೇಕಡ ೩೧.೩ ರಷ್ಟು ಸಾಕ್ಷರತೆ ಇದೆಯೆಂದು ಗೊತ್ತಾಗಿದೆ. ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಮನವಿ ಮಾಡಿದರು. ಇವತ್ತು ಸಾರ್ವಜನಿಕ ಸಭೆಗಳಲ್ಲೂ ಸಹ ವಿಶೇಷವಾಗಿ ಇವರ ಬಗ್ಗೆ ಹೇಳ ಲಾಗುತ್ತಿದೆ ನಾವು ಸ್ವಾತಂತ್ರ್ಯ ಪಡೆದು ೩೦ ವರ್ಷಗಳಾದರೂ ಸಾಕ್ಷರತೆ ಕೇವಲ ೩೧.೪ ರಷ್ಟಿದೆ. ಇದನ್ನು ಏರಿಸಬೇಕಾದರೆ ಶಿಕ್ಷಣ ಇಲಾಖೆ ಹೆಚ್ಚು ಆಸಕ್ತಿಯಿಂದ ಕೆಲಸಮಾಡಬೇಕು. ಇನ್ನು ೭೦ ಪರ್ಸೆಂಟ್ ಅಂಧಕಾರದಿಂದ, ಅಜ್ಞಾನದಿಂದ ಕೂಡಿರತಕ್ಕಂಥ ಜನರು ಇರತಕ್ಕಂಥ ಕಡೆ ಹೆಚ್ಚು ಹೆಚ್ಚು ಬಾಲಮಂದಿರಗಳನ್ನು, ಹೆಚ್ಚು ಪ್ರೈಮರಿ ಸ್ಕೂಲುಗಳನ್ನು ತೆರೆಯಬೇಕು. ೧೯೩೭ನೇ ಇಸವಿಯಲ್ಲಿ

ಶ್ರೀಮಾನ್ ಸಿ. ಆರ್. ರೆಡ್ಡಿಯವರು ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಆಗಿದ್ದರು. ಆಗ ಪಂಚಮಹಾ ಶಾಲೆಗಳನ್ನು ತೆರೆದರು ಪಂಚಮಹಾ ಶಾಲೆಗಳನ್ನು ತೆರೆದಾಗ ಏನು ಮಾಡಿದರು, ಸಿ ಎ.ಕೆ. ಇನ್‌ಸ್ಟಿಟ್ಯೂಟನ್ನು ತೆರೆದರು ಪಂಚಮಹಾಶಾಲೆಗಳಲ್ಲಿದ್ದಂಥ ೩೫೦ ಮಂದಿಯನ್ನು ಸಿ ಎ.ಕೆ. ಇನ್‌ಸ್ಟಿಟ್ಯೂಟ್‌ಗೆ ಸೇರಿಸಿದರು. ಶಿಕ್ಷಣದ ಜೊತೆಗೆ ಕಾರ್ಪೆಂಟರಿ, ಷೂ ಮೇಕಿಂಗ್, ಟೈಲರಿಂಗ್, ಸ್ಮಿತಿ—ಇವೆಲ್ಲವನ್ನೂ ವಿದ್ಯಾರ್ಥಿಗಳು ಬೆಳಗ್ಗೆ ಹೊತ್ತು ಕಲಿಯಬೇಕು, ಮಧ್ಯಾಹ್ನದ ಹೊತ್ತು ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲ್ ಶಿಕ್ಷಣ ಅಂದರೆ "EARN WHILE YOU LEARN" ಎನ್ನತಕ್ಕ ವ್ಯವಸ್ಥೆಯನ್ನು ಮಾಡಿದ್ದರು ಆ ಕಾಲದಲ್ಲಿ ಶ್ರೀ ನರಸಿಂಹರಾಜ ಹಾಸ್ಟೆಲ್‌ನಲ್ಲಿದ್ದು ಇಂತಹ ಶಿಕ್ಷಣವನ್ನು ಪಡೆದರು ಸ್ವಾವಲಂಬನೆಯಿಂದ ಕೆಲಸಮಾಡಿ ಜೀವನ ಮಾಡುವುದಕ್ಕೆ ಅವಕಾಶವಾಗಿತ್ತು ವಿನಾ ಸರ್ಕಾರಿ ಉದ್ಯೋಗಕ್ಕೆ ಯೋಜನೆ ಮಾಡತಕ್ಕಂಥ ಸ್ಥಿತಿ ಇರಲಿಲ್ಲ. ಇವತ್ತು ನಮ್ಮ ಶಾಲೆಗಳು ಕಾಂಪೋಸಿಟ್ ಸ್ಕೂಲ್ಸ್ ಆಗಬೇಕು. ಅಲ್ಲಿ ವಿದ್ಯಾರ್ಥಿಗಳು ಓದಬೇಕು. ತಮ್ಮ ಅನಿಶಂಗ್‌ನಿಂದ ಸ್ವಾವಲಂಬನೆಯಿಂದ ತಮ್ಮ ಜೀವನವನ್ನು ಮಾಡಿಕೊಳ್ಳಬೇಕು. ಇಂತಹ ಒಂದು ಶಿಕ್ಷಣವನ್ನು ಇವತ್ತು ನಾವು ಕೊಡಬೇಕಾಗಿದೆ, ಇದೇ ಮೂಲಶಿಕ್ಷಣ. ಆದುದರಿಂದ ಈಗಿರುವ ನಮ್ಮ ಶಿಕ್ಷಣ ಪದ್ಧತಿಯನ್ನು ಬದಲಾಯಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಶೇಕಡ ೭೦ ಭಾಗದ ಜನ ಇವತ್ತಿಗೂ ವಿದ್ಯಾಭ್ಯಾಸದಲ್ಲಿ ಮುಂದೆ ಬಂದಿಲ್ಲ. ಏಕೆಂದರೆ ನಮ್ಮ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಿಲ್ಲ. ಇವತ್ತು ಇರತಕ್ಕ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮೆರಿಟ್ ಮೆರಿಟ್ ಎಂದು ನಂಬರುಗಳನ್ನು ಕೊಟ್ಟು ಅವರೇ ಮುಂದಕ್ಕೆ ಬರುತ್ತಿದ್ದಾರೆ ಇವತ್ತು ಶೇಕಡ ೨೦ ಭಾಗದ ದೇಶದ ಜನ ಏನಿದ್ದಾರೆ ಅವರಿಗೋಸ್ಕರ ಈ ಶಿಕ್ಷಣ ಇದೆಯೇನೋ ಎಂದು ಅನ್ನಿಸುತ್ತದೆ. ಇವತ್ತು ೩೫೦ ಬಾಲಮಂದಿರಗಳನ್ನು ತೆರೆದಿದ್ದಾರೆ ಎಲ್ಲ ಹಿಂದುಳಿದ ವರ್ಗದವರು ಇದ್ದಾರೆ ಅಂತಹ ಕಡೆ ಏನು ಬಾಲಮಂದಿರಗಳನ್ನು ಮಾಡಿದ್ದಾರೆ ಅದು ಸಾಲದು. ಪ್ರತಿವರ್ಷ ಒಂದೊಂದು ಸಾವಿರ ಪ್ರಿಪ್ರೈಮರಿ ಸ್ಕೂಲ್ಸ್, ಬಾಲ ಮಂದಿರಗಳು ನರ್ಸರಿ ಸ್ಕೂಲುಗಳು ಬರಬೇಕು. ಹಿಂದೆ ಸಿ.ಆರ್. ರೆಡ್ಡಿಯವರು ಯಾವರೀತಿ ಮಾಡಿದ್ದರೋ ಆ ರೀತಿ ಮಕ್ಕಳಿಗೆ ಸ್ಲೇಟು, ಬಟ್ಟೆ, ಪುಸ್ತಕ, ಟೆಂಟೇಟೀವ್ ಸ್ಕಾಲರ್‌ಷಿಪ್ ಪ್ರತಿಯೊಂದನ್ನೂ ಕೊಡಬೇಕು. ೯೦ ಲಕ್ಷ ಹರಿಜನರಲ್ಲಿ ಸುಮಾರು ೫ ಲಕ್ಷ ಜನ ಮಕ್ಕಳು ಇವತ್ತು ಬೀದಿ ಭಿಕಾರಿಗಳಾಗಿ ಮನೆ ಇಲ್ಲದೆ ಅಲೆಯುತ್ತಿದ್ದಾರೆ ಅಂತಹವರ ಅಂಕಿಸಂಖ್ಯೆಗಳನ್ನು ಶೇಖರಿಸಿ ಅವರಿಗೆ ಬಟ್ಟೆ, ಪುಸ್ತಕ ಬಳಪ ಪ್ರತಿಯೊಂದನ್ನೂ ಕೊಟ್ಟು, ವಿದ್ಯಾಭ್ಯಾಸ ಮಾಡಿಸಿದರೆ, ಅವರಿಗೆ ಅಕ್ಷರತೆ ಬಂದು, ಜ್ಞಾನೋದಯವಾಗಿ ನಮ್ಮ ಓಟು ಯಾರಿಗೆ ಕೊಡಬೇಕು, ಯಾರು ಯೋಗ್ಯರು, ಯಾರು ಅಯೋಗ್ಯರು ಎಂದು ಪರಿಶೀಲನೆ ಮಾಡತಕ್ಕ ಮಟ್ಟಕ್ಕೆ ಬರುತ್ತಾರೆ ಅವರಿಗೆ ಚೇತನ ಶಕ್ತಿ ಬರುತ್ತದೆ. ದೇಶ ಆಗ ಸುಖೀರಾಜ್ಯ ಅಥವಾ ರಾಮರಾಜ್ಯವಾಗುತ್ತದೆ. ಆದುದರಿಂದ ಅಕ್ಷರತೆಯನ್ನು ಹೆಚ್ಚಿಸಬೇಕು. ಅದಕ್ಕಾಗಿ ಕೇವಲ ವಯಸ್ಕರ ಶಿಕ್ಷಣ ಸಮಿತಿಯ ಮೂಲಕ ಮಾಡುವುದರ ಜೊತೆಗೆ ಹರಿಜನ-ಗಿರಿಜನರು, ಕೂಲಿಗಾರರು, ಹಿಂದುಳಿದ ವರ್ಗದವರು ಇರತಕ್ಕಂಥ ಪ್ರದೇಶದಲ್ಲಿ ವಿಶೇಷರೀತಿಯಲ್ಲಿ ಅಕ್ಷರತೆಯನ್ನು ಮಾಡಿಸುವುದಕ್ಕೆ ಶಾಲೆಗಳನ್ನು ತೆರೆಯಬೇಕು. ಅಷ್ಟೇ ಅಲ್ಲ ಪೂರ್ವ ಪ್ರೈಮರಿ ಶಾಲೆಗಳನ್ನು ಹೆಚ್ಚು ಹೆಚ್ಚು ತೆರೆಯಬೇಕು. ಅದಕ್ಕಾಗಿ ಬಜೆಟ್‌ನಲ್ಲಿರತಕ್ಕಂಥ ಹಣವನ್ನು ದ್ವಿಗುಣಮಾಡಬೇಕು ೧೨೫ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಮುಂದಿನ ವರ್ಷದಲ್ಲಿ ಖರ್ಚು ಮಾಡಬೇಕು ಎಂದು ಇದ್ದೀರಿ. ಈ ಶಿಕ್ಷಣ ಖಾತೆಗೆ ಸ್ಪೆಷಲ್ ಪ್ಲಾನ್ ಮಾಡಿಸಿದ್ದಾರೆ ಪ್ಲಾನಿಂಗ್ ಕಮಿಷನ್ ಸೂಚನೆ ಪ್ರಕಾರ ಸ್ಪೆಷಲ್ ಪ್ಲಾನನ್ನು ತಯಾರುಮಾಡಿ ೧೮ ಭಾಗ ಹಣ ಹಿಂದುಳಿದ ವರ್ಗದವರಿಗಾಗಿ ಖರ್ಚು ಮಾಡಬೇಕು. ಪ್ಲಾನ್ ಪ್ರಕಾರ ೨೫ ಭಾಗ ಹಣವನ್ನು ಇದಕ್ಕೆ ಖರ್ಚು ಮಾಡಬೇಕಾಗಿತ್ತು. ಆದರೆ ಇದು ಬರೀ ಪ್ರಿಂಟಾಗಿ ಪುಸ್ತಕದ ಬದನೆಕಾಯಿಯಾಗಿದೆ ಇವತ್ತು ಹಿಂದುಳಿದ ವರ್ಗದವರ ಶಿಕ್ಷಣಕ್ಕಾಗಿ ಎಷ್ಟು ಹಣವನ್ನು ಉಪಯೋಗಿಸಿದ್ದಾರೆ, ಅವರಿಗೆ ಎಷ್ಟರಮಟ್ಟಿಗೆ ಅಕ್ಷರತೆ ಬಂದಿದೆ ಎನ್ನುವುದನ್ನು ನೋಡಬೇಕಾಗಿದೆ. ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಶಾಲೆಗಳಲ್ಲಿ ಅನೇಕರೀತಿಯ ಉತ್ತೇಜನವನ್ನು ಕೊಡಬೇಕು. ಇವತ್ತು ಖಾಸಗಿ ಸಂಸ್ಥೆಗಳವರು ಏನು ಶಾಲೆಗಳನ್ನು ನಡೆಸುತ್ತಿದ್ದಾರೆ ಅದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು, ಕೊಣಂದೂರು ಲಿಂಗಪ್ಪನವರು ಮತ್ತು ಇತರ ಮಿತ್ರರು ಬಹಳವಾಗಿ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇವತ್ತಿನದಿವಸ ಖಾಸಗೀ ಸಂಸ್ಥೆಗಳವರು ವ್ಯಾಪಾರಸ್ಥರಾಗಿಬಿಟ್ಟಿದ್ದಾರೆ ಅವರು ವಿಧಿಸತಕ್ಕ ಫೀಸನ್ನು ಹಿಂದುಳಿದವರ್ಗದವರ ಕೈಯಲ್ಲಿ ಕೊಡುವುದಕ್ಕೆ ಆಗುತ್ತಾ ಇಲ್ಲ. ಇವತ್ತಿನದಿವಸ ಖಾಸಗೀ ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುತ್ತಾ ಇರತಕ್ಕಂಥವರು ಕೆಲವು ವರ್ಗದವರು ಮಾತ್ರ ಅಂದರೆ ಬಂಡವಾಳ ಶಾಹಿಗಳು, ತಿಳಿವಳಿಕೆ ಇರತಕ್ಕಂಥವರು. ಇವತ್ತು ಮಂತ್ರಿಗಳು ಎಷ್ಟು ಜನ ತಮ್ಮ ಮಕ್ಕಳಿಗೆ ಕನ್ನಡ ಮಾಡಿಯಂ ಕಲಿಸುತ್ತಿದ್ದಾರೆ ಎಂದು ಯೋಚನೆ ಮಾಡಿದರೆ

ಅವರು ತಮ್ಮ ಮಕ್ಕಳನ್ನು ಕಾನ್‌ವೆಂಟ್‌ಗೆ ಕಳಿಸಿ ಅಲ್ಲಿ ಓದಿಸುತ್ತಿದ್ದಾರೆ. ಆದುದರಿಂದ ಮೊದಲನೆಯದಾಗಿ, ಈಗ ಇರತಕ್ಕಂಥ ಶಿಕ್ಷಣ ಪದ್ಧತಿಯನ್ನು ಬದಲಾಯಿಸಿ, ಬಡವರಿಗೆ, ಕೂಲಿಗಾರರಿಗೆ ನಿರ್ಗತಿಕರಿಗೆ ಹೆಚ್ಚು ಶಿಕ್ಷಣ ದೊರೆಯುತಕ್ಕ ರೀತಿಯಲ್ಲಿ ಎಲ್ಲಾ ವಿಧವಾದ ರಿಯಾಯಿತಿಯನ್ನು ಕೊಟ್ಟು ಶಿಕ್ಷಣವನ್ನು ಹೆಚ್ಚಿಸಿ, ದೇಶದ ಅಕ್ಷರತೆಯನ್ನು ಹೆಚ್ಚಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಗ್ರ್ಯಾಂಟ್ ಇನ್‌ಏಯ್ಡ್ ಕೋಡ್ ಬಗ್ಗೆ ಹೇಳುವುದಾದರೆ ಇದು ಸೆಕೆಂಡರಿ ಎಜುಕೇಷನ್‌ನಲ್ಲಿದೆ. ೧೯೩೦ನೇ ಇಸವಿಯಿಂದ ೧೯೭೦ನೇ ಇಸವಿವರೆಗೆ ಸುಮಾರು ೧೨೬ ಗ್ರ್ಯಾಂಟ್ ಇನ್ ಏಯ್ಡ್ ಹಾಸ್ಟೆಲ್‌ಗಳಿತ್ತು. ಮೊದಲನೇ ವರ್ಷ ಇವುಗಳನ್ನು ಖಾಸಗಿ ಸಂಸ್ಥೆಗಳವರು ಏನು ನಡೆಸುತ್ತಿದ್ದರು ಅವುಗಳ ಲೆಕ್ಕ ಪತ್ರಗಳ ಸರಿಯಾಗಿದೆಯೋ ಇಲ್ಲವೆ ಎಂದು ಪರಿಶೀಲನೆಮಾಡಿ ಶಿಕ್ಷಣ ಇಲಾಖೆಯವರು ಗ್ರ್ಯಾಂಟನ್ನು ನೀಡುತ್ತಿದ್ದರು. ಆ ಗ್ರ್ಯಾಂಟನ್ನು ಕೊಡುತ್ತಾ ಬಂದು ಪ್ರತಿವರ್ಷವೂ ೧೦ ಪರ್ಸೆಂಟ್ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಇದ್ದರು.

ಶೇ. ೧೦ರಷ್ಟು ಹೆಚ್ಚಿಸಿದರೂ ಸಾಲದು. ಅಲ್ಲಿ ಒಟ್ಟು ೧೨೬ ಹಾಸ್ಟೆಲ್‌ಗಳಿವೆ. ಹಿಂದೆ ಈ ಹಾಸ್ಟೆಲುಗಳು ಒಂದು ಆಡಳಿತ ಸಮಿತಿಯ ಮೇಲ್ವಿಚಾರಣೆಯಲ್ಲಿದ್ದಾಗ ಆ ಶಾಲೆಯ ಮುಖ್ಯೋಪಾಧ್ಯಾಯರೇ ಅಧ್ಯಕ್ಷರಾಗಿಯೂ, ಅಲ್ಲಿಯ ಒಬ್ಬ ಉಪಾಧ್ಯಾಯರೇ ಕಾರ್ಯದರ್ಶಿಯಾಗಿಯೂ ಆಫೀಸಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಈ ಪದ್ಧತಿ ಉತ್ತಮವಾದ ರೀತಿಯಲ್ಲಿ ನಡೆಯುತ್ತಿತ್ತು. ಆದರೆ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಸಮಾಜ ಕಲ್ಯಾಣ ಹಾಗೂ ವಿದ್ಯಾ ಇಲಾಖೆಯ ಮಂತ್ರಿಯಾಗಿ ಬಂದ ಮೇಲೆ ಈ ಎರಡು ಇಲಾಖೆಗಳನ್ನು ತಾವೇ ಇಟ್ಟುಕೊಂಡು ಅವುಗಳ ಅಭಿವೃದ್ಧಿಯನ್ನು ಬಹಳ ಚೆನ್ನಾಗಿ ಮಾಡಿಬಿಡುತ್ತೇನೆಂದು ಹೇಳಿ ೧೯೭೬ನೇ ಇಸವಿ ಏಪ್ರಿಲ್‌ನಲ್ಲಿ ಈ ೧೨೬ ಹಾಸ್ಟೆಲ್‌ಗಳನ್ನೂ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಿಬಿಟ್ಟರು. ನಂತರ ಕಂದಾಯ ಇಲಾಖೆಯ ಒಬ್ಬ ಗುಮಾಸ್ತನನ್ನು, ಅವನಿಗೆ ವಿದ್ಯಾಭ್ಯಾಸದ ಅಂದ ಗೊತ್ತಿಲ್ಲ, ವಿದ್ಯಾಭ್ಯಾಸದ ರೀತಿ ನೀತಿ ಗೊತ್ತಿಲ್ಲ, ವಿದ್ಯಾಭ್ಯಾಸದ ಮಹತ್ವ ಗೊತ್ತಿಲ್ಲ. ಅಂತಹವರಿಗೆ ಈ ಹಾಸ್ಟೆಲಿನಲ್ಲಿ ಮೇಲ್ವಿಚಾರಣೆ ನಡೆಸತಕ್ಕಂಥ ಜವಾಬ್ದಾರಿಯನ್ನು ಕೊಟ್ಟಿದೆ ಈ ರೀತಿ ಸಮಾಜಕಲ್ಯಾಣ ಇಲಾಖೆಗೆ ಆ ಜವಾಬ್ದಾರಿ ಕೊಟ್ಟು ಅನೇಕ ಟೀಕೆ ಟಿಪ್ಪಣಿಗಳಿಗೆ ಅದು ಗುರಿಯಾಗುವಂತೆ ಮಾಡಿದರು. ಇದರಿಂದಾಗಿ ಸಮಾಜಕಲ್ಯಾಣ ವಿಭಾಗದ ಹರಿಜನ-ಗಿರಿಜನರ ಕ್ಷೇಮಾಭಿವೃದ್ಧಿ ಸಮಿತಿಯವರೂ ಹಾಗೂ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರೂ ಅದರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡತಕ್ಕಂಥ ಪರಿಸ್ಥಿತಿಗೆ ಒಳಗಾಗಿದ್ದಾರೆ. ಆದ್ದರಿಂದ ದಯಮಾಡಿ ಈ ಹಾಸ್ಟೆಲ್‌ಗಳನೆಲ್ಲಾ ಕೂಡಲೇ ವಿದ್ಯಾ ಇಲಾಖೆಗೆ ತೆಗೆದುಕೊಂಡು, ಮೊದಲು ಹೇಗೆ ನಡೆಸುತ್ತಿದ್ದರೋ ಅದೇ ರೀತಿ ವಿದ್ಯಾ ಇಲಾಖೆಯವರೇ ಅವನ್ನು ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಾವು ಪ್ರೈಮರಿ, ಸೆಕೆಂಡರಿ ಎಜುಕೇಷನ್ನಿಗಾಗಿ ಸುಮಾರು ೧೦೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಭಾರತ ಸರ್ಕಾರದವರು ಅವರಿಗೆ ಸ್ಕಾಲರ ಷಿಪನ್ನು ಕೊಡುತ್ತಿದ್ದಾರೆ. ಮತ್ತೆ ಪ್ರೀಮೆಟ್ರಿಕ್ ಸ್ಕಾಲರ್‌ಷಿಪ್‌ನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು ಕೊಡುತ್ತಿದೆ. ಕೆಲವು ಫೀಜ್‌ಗಳಲ್ಲಿಯೂ ಸಹ ಈಗಾಗಲೇ ರಿಯಾಯಿತಿ ಮಾಡಿರುವ ಸಂತೋಷಗಳು ಬೇರೆ ಇವೆ. ಆದರೆ ಈ ೧೦೮ ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಕೇವಲ ೨೦-೨೫ ಕೋಟಿ ರೂಪಾಯಿಗಳನ್ನು ಪರಿಶಿಷ್ಟವರ್ಗ ಪರಿಶಿಷ್ಟ ಜನಾಂಗ ಹಾಗೂ ಹಿಂದುಳಿದವರ್ಗದವರಿಗೆ ಖರ್ಚು ಮಾಡಿದ್ದಾರೆ, ನಿಜವಾಗಿಯೂ ಆ ಜನಾಂಗದಲ್ಲಿ ಅಕ್ಷರತೆ ಹೆಚ್ಚುತ್ತಿತ್ತು ಅವರ ವಿದ್ಯಾಭ್ಯಾಸದ ಮಟ್ಟವೂ ಹೆಚ್ಚುತ್ತಿತ್ತೆಂದು ನಾನು ಈಗ ಹೇಳಬೇಕಾಗಿದೆ. ಎಲ್ಲಾ ಇಲಾಖೆಗಳಲ್ಲೂ ಇವರು ಇಲ್ಲದಿರುವ ಒಂದು ಕೊರತೆ ಸರ್ಕಾರಿ ನೌಕರರಾಗುವ ಒಂದು ಯೋಗ್ಯತೆ ಹಾಗೂ ಅರ್ಹತೆಗಳ ಕೊರತೆ ನಿವಾರಣೆಯಾಗುತ್ತಿತ್ತು. ಈ ಹಾಸ್ಟೆಲ್‌ಗಳನ್ನು ಪುನ: ವಿದ್ಯಾ ಇಲಾಖೆಗೆ ವರ್ಗಾಯಿಸಿಕೊಡಬೇಕೆಂದೂ ಹಾಗೂ ಗ್ರ್ಯಾಂಟ್ ಇನ್ ಏಡ್ ಕೋಡ್ ಪ್ರಕಾರ ಈ ಡಿಪಾರ್ಟ್‌ಮೆಂಟಿನಲ್ಲಿ ಹಿಂದೆ ಯಾವ ತತ್ವಗಳನ್ನು ಅಳವಡಿಸುತ್ತಿದ್ದರೋ ಅದೇ ತತ್ವದ ಪ್ರಕಾರ ಈಗಲೂ ನಡೆಸಿಕೊಂಡು ಹೋಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಹಾಗೂ ವಿದ್ಯಾಮಂತ್ರಿಗಳಲ್ಲಿ ನಾನು ಈಗಾಗಲೇ ಒಂದು ನಿವೇದನೆಯನ್ನೂ ಸಹ ಸಲ್ಲಿಸಿದ್ದೇನೆ ನಿಮ್ಮವರ್ಗದ ಎಲ್ಲಾ ಸದಸ್ಯರೂ ಇದನ್ನು ಒಪ್ಪಿದನಂತರವೇ ಆ ಮನವಿಯನ್ನು ಸಲ್ಲಿಸಿದ್ದೇನೆ ಈ ಹಾಸ್ಟೆಲ್‌ಗಳನ್ನು ಪುನ: ವಿದ್ಯಾಭ್ಯಾಸ ಇಲಾಖೆಯಿಂದ ವಾಪಸ್ಸು ಪಡೆದಿರುವ ಹಾಗೆ ಮಾಡಬೇಕು. ವಿದ್ಯಾ ಇಲಾಖೆ ಸಮಾಜಕಲ್ಯಾಣ ಇಲಾಖೆಗಿಂತ ಈ ಹಾಸ್ಟೆಲ್‌ಗಳನ್ನು ಚೆನ್ನಾಗಿ ನಡೆಸುತ್ತವೆಂಬ ರೆಪ್ಯುಟೇಷನ್ ಇರುವಂತೆ ಮಾಡಬೇಕು. ಒಟ್ಟಿನಲ್ಲಿ ಹಾಸ್ಟೆಲ್‌ಗಳನ್ನು ಇನ್ನೂ ಹೆಚ್ಚು ಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡರನ್ ಸ್ಕೂಲ್, ಇರ

ಬೇಕು. ಪಬ್ಲಿಕ್ ಸ್ಕೂಲ್ ಎನ್ನುವ ರೀತಿಯಲ್ಲಿ ಪರಿಶಿಷ್ಟ ಜನಾಂಗಕ್ಕಾದರೂ ಪ್ರತಿಯೊಂದು ಜಿಲ್ಲೆಯಲ್ಲೂ ಏರ್ಪಾಡು ಮಾಡಬೇಕು. ಅಲ್ಲಿ ಅರ್ನ್ ವೈಲ್ ಯು ಲರ್ನ್ ಎಂಬ ತತ್ವವನ್ನು ಪರಿಪಾಲಿಸಬೇಕು. ಅಂತಹ ಶಾಲೆಯಲ್ಲಿ ಗೋಲ್ಡ್ ಸ್ಮಿತಿಂಗ್, ಬ್ಲಾಕ ಸ್ಮಿತಿಂಗ್, ಶೂ ಮೇಕಿಂಗ್, ಟೈಲರಿಂಗ್ ಶಿಕ್ಷಣಗಳು ಇರಬೇಕು. ಜೀವನಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಲ್ಲಿನ ಎಜುಕೇಷನ್ ಇರಬೇಕು. ಹೆಣ್ಣು ಮಕ್ಕಳಿಗೆ ಡ್ಯಾನ್ಸ್, ಮ್ಯೂಸಿಕ್, ಟೈಲರಿಂಗ್, ಮತ್ತು ಎಂಬ್ರಾಯಿಡರಿ ಶಿಕ್ಷಣ ಇರಬೇಕು. ಇಂತಹ ಶಿಕ್ಷಣ ಕೊಡತಕ್ಕ ಶಾಲೆಗಳನ್ನು ಕೂಡಲೇ ಅಲ್ಲಲ್ಲಿ ತೆಗೆಯಲು ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ೨೦ ಜಿಲ್ಲೆಗಳಲ್ಲಿಯೂ ಒಂದೊಂದು ಮಾಡಲ್ ಸ್ಕೂಲ್ ಗಳನ್ನು ರೆಸಿಡೆನ್ಸಿಯಲ್ ಸ್ಕೂಲುಗಳನ್ನು ತೆರೆದು ಅವುಗಳಿಗೆ ಎಲ್ಲಾ ಅನುಕೂಲಗಳನ್ನು ವಿದ್ಯಾ

ಇಲಾಖೆಯವರು ಒದಗಿಸಿಕೊಡಬೇಕು. ಉತ್ತಮ ರೀತಿಯಲ್ಲಿ ಮೆರಿಟ್ ಬರುವ ಮಕ್ಕಳಿಗೆ ಮೊದಲು ಅಲ್ಲಿ ನೀವು ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಡಾ! ಅಂಬೇಡ್ಕರ್ ರವರು 1945ನೇ ಇಸವಿಯಲ್ಲಿಯೇ ಹರಿಜನ ಗಿರಿಜನರಿಗೆ 40—45 ರೂಪಾಯಿಗಳಷ್ಟು ಕೇಂದ್ರ ಸರ್ಕಾರದಿಂದ ಮೆರಿಟ್ ಸ್ಕಾಲರ್‌ಷಿಪ್ ಕೊಡುವಂತೆ ಕಾನೂನಿನಲ್ಲಿ ಅಳವಡಿಸಿ ಅದನ್ನು ಜಾರಿಗೆ ತಂದಿದ್ದರು. ಆದರೆ ನಮಗೆ ಸ್ವರಾಜ್ಯ ಬಂದ ಮೇಲೆ ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 20 ಸಾರಿ ನಮ್ಮ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಿಕೊಂಡಿದ್ದರೂ ಹರಿಜನ, ಗಿರಿಜನರಿಗೆ ಈಗ ಕೊಡುತ್ತಿರುವ ಮೆರಿಟ್ ಸ್ಕಾಲರ್‌ಷಿಪ್ ರೇಟ್, ಮಿಡ್ಲಸ್ಕೂಲನಲ್ಲಿಯೂ, ಹೈಸ್ಕೂಲುಗಳಲ್ಲಿಯೂ ಹಾಗೂ ಯೂನಿವರ್ಸಿಟಿಯಲ್ಲೂ ಒಂದೇ ರೀತಿಯಲ್ಲಿದೆ. ಅದನ್ನು ಇನ್ನೂ ಹೆಚ್ಚು ಮಾಡಿಲ್ಲ. ಈಗ ಅವರಿಗೆ ಕೊಡುತ್ತಿರುವ ವಿದ್ಯಾರ್ಥಿವೇತನವನ್ನು ದ್ವಿಗುಣಗೊಳಿಸಬೇಕೆಂದು ನನ್ನ ಸಲಹೆ. ಏಕೆಂದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸ್ಕಾಲರ್‌ಷಿಪ್ ಕೊಡುವ ಬಗ್ಗೆ ಬಹಳ ಡಿಸ್ಕ್ರಿಂಪಷನ್ ಮಾಡುತ್ತಿದ್ದಾರೆ. ಡಾ : ಅಂಬೇಡ್ಕರ್‌ರವರು ಹಿಂದೆ ಎಜುಕೇಷನ್ ಹಾಗೂ ಲಾ ಇಲಾಖೆಯನ್ನು ವಹಿಸಿಕೊಂಡಿದ್ದಾಗ, ಹರಿಜನ—ಗಿರಿಜನರಿಗಾಗಿ ಒಂದು ಪ್ರತ್ಯೇಕ ಸ್ಕಾಲರ್‌ಷಿಪ್ ಬೋರ್ಡನ್ನೇ ರಚನೆ ಮಾಡಿದ್ದರು. ಯಾವ ಯಾವ ಭಾಗದಲ್ಲಿ ಯಾವ ಯಾವ ರೀತಿ ಯಾರ್‍ಯಾರಿಗೆ ಎಷೆಷ್ಟು ಸ್ಕಾಲರ್‌ಷಿಪ್ ಕೊಡಬೇಕೆಂದು ಒಂದೊಂದು ಡಿಪಾರ್ಟ್‌ಮೆಂಟ್‌ಗೂ ಜವಾಬ್ದಾರಿಯನ್ನು ವಹಿಸಿದ್ದರು. ಅಂತಹ ಒಂದು ದೊಡ್ಡ ಕೆಲಸವನ್ನು ಮಾಡಿದ್ದರು. ಈಗ ಆ ಒಂದು ನಿಯಮವನ್ನು ಇಲ್ಲಿ ಅನುಸರಿಸದೇ ಇರುವುದರಿಂದ ಗೊತ್ತಾದ ಕಾಲಕ್ಕೆ ಹರಿಜನ—ಗಿರಿಜನರಿಗೆ, ಸ್ಕಾಲರ್‌ಷಿಪ್ ಸಿಗದೆ ಸಂಬಂಧಪಟ್ಟ ಸಂಸ್ಥೆಗಳಿಗೆ ಸಕಾಲದಲ್ಲಿ ಗ್ರಾಂಟ್ ಕೊಡದೆ, ಅವರ ವಿದ್ಯಾಭ್ಯಾಸ ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಕುಂಠಿತವಾಗುವುದಕ್ಕೆ ಅವಕಾಶವಾಗುತ್ತಿದೆ. ಆದರೆ ಈ ದೇಶದಲ್ಲಿ ಹಿಂದುಳಿದ ವರ್ಗ ಹಾಗೂ ಶ್ರಮಜೀವಿ ವರ್ಗದವರಿಂದ ನಾವೂ ನೀವು ಓಟು ತೆಗೆದುಕೊಂಡು ಇಲ್ಲಿಗೆ ಆರಿಸಿ ಬಂದಿದ್ದೇವೆ. ಅವರ ಸಹಾಯ ಇಲ್ಲದೇ ಹೋಗಿದರೆ ನಾವು ಇಲ್ಲಿಗೆ ನಿಜವಾಗಿ ಬರುವುದಕ್ಕಾಗುತ್ತಿರಲಿಲ್ಲ. ಇದನ್ನು ಅರಿತು ನೀವು ಅವರ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕು.

ಇನ್ನೊಂದು ವಿಷಯ, ಈಗ ಪ್ರತಿಯೊಂದು ಜಿಲ್ಲೆಯಲ್ಲೂ ಸೆನ್‌ಸಸ್ ಮಾಡುತ್ತಾರೆ. ಅದರಲ್ಲಿ ಎಷ್ಟು ಹರಿಜನ - ಗಿರಿಜನ ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಅರ್ಹತೆಯುಳ್ಳವರು ಇದ್ದಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸುವಾಗ ಅದರಲ್ಲಿ 100ಕ್ಕೆ 10 ಸರಿಯಾಗಿದೆಯೋ ಎಂದು ನೋಡಿದರೆ ಅದು ಸರಿಯಾಗಿರುವುದಿಲ್ಲ ಪ್ರಶ್ನಾರ್ಥಕವೇ ? ಆದರ ಬಗ್ಗೆ ಸರಿಯಾದ ಅಂಕಿ ಅಂಶಗಳಿಲ್ಲ. ಕೇವಲ 5 ರಿಂದ 10 ಪರ್ಸೆಂಟ್ ಮಕ್ಕಳೂ ಸಹ ಆ ಶಾಲೆಗಳಿಗೆ ಸೇರುತ್ತಾ ಇಲ್ಲ. ಅದಕ್ಕೆ ಕಾರಣ ಏನು, ಅವರು ಯಾರು ಎಲ್ಲಿಯವರು ಏತಕ್ಕೆ ಸೇರುವುದಿಲ್ಲ, ಕಂಪಲ್‌ಸರಿ ಎಜುಕೇಷನ್ ಎಂದು ಹೇಳುವುದರ ತತ್ವವೇನೆಂಬುದನ್ನು ಸರಿಯಾಗಿ ವಿಚಾರ ಮಾಡುವುದೇ ಇಲ್ಲ. ಆ ಒಂದು ತತ್ವದ ಪ್ರಕಾರ ಸಂಬಂಧಪಟ್ಟ ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡುವುದೇ ಇಲ್ಲ. ಆದ್ದರಿಂದ ಪ್ರೈಮರಿ ಶಾಲೆಗಳಲ್ಲಿ ಇತರ ಮಕ್ಕಳಿಗೆ ಕೊಡುವ ಅನುಕೂಲಗಳಂತೆ ಇವರಿಗೂ ವ್ಯವಸ್ಥೆ ಮಾಡಿ ಅವರನ್ನು ಸರಿದೂಗಿಸುವ ಏರ್ಪಾಡು ಮಾಡಬೇಕು. ಅವರಿಗೂ ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ; ಇನ್ನು ಮುಂದೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ಒಂದು ಬೋರ್ಡನ್ನು ರಚನೆ ಮಾಡುವುದು ಒಳ್ಳೆಯದು ಸ್ಕಾಲರ್‌ಷಿಪ್ ಸಮಾಜಕಲ್ಯಾಣ ಇಲಾಖೆಯಿಂದ ಕೊಡುವುದನ್ನು ತಪ್ಪಿಸಿ ವಿದ್ಯಾಭ್ಯಾಸ ಇಲಾಖೆಯ ಮೂಲಕವೇ ಕೊಡಬೇಕು. ಬೇರೆ ಬೇರೆ ಇಲಾಖೆಯಲ್ಲಿ ಇಂತಹ ವ್ಯವಸ್ಥೆ ಇದ್ದಾಗೂ ಆ ರೀತಿ ಮಾಡದೆ

ವಿದ್ಯಾ ಇಲಾಖೆಗೆ ಅದನ್ನು ವರ್ಗಾಯಿಸಬೇಕು. ಏಕೆಂದರೆ ಸಮಾಜಕಲ್ಯಾಣ ಇಲಾಖೆಯವರು ಈ ವಿದ್ಯಾರ್ಥಿವೇತನವನ್ನು ಕಾಲಕ್ಕೆ ಸರಿಯಾಗಿ ಅವರಿಗೆ ಕೊಡುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಇದರ ಬಗ್ಗೆ ಯಾವ ನೀತಿಯನ್ನು ಅನುಸರಿಸಿದ್ದಾರೋ ಅದೇ ನೀತಿಯನ್ನು ನೀವೂ ಕೂಡ ಅನುಸರಿಸಿ ಆ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಉಪಾಧ್ಯಕ್ಷರು —ನೀವು ಅದರ ಬಗ್ಗೆ ವಿವರಗಳನ್ನೆಲ್ಲಾ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಇನ್ನು ತಾಂತ್ರಿಕ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡುವುದರಿಂದ ಕೇವಲ ಹರಿಜನ–ಗಿರಿಜನ ಮಕ್ಕಳು ಮಾತ್ರ ಉದ್ಧಾರವಾಗುತ್ತಾರೆಂದಲ್ಲ ನಿಜವಾಗಿ ಹಟ್ಟಿಗೆ ಬಡವರು ಉದ್ಧಾರವಾಗುತ್ತಾರೆ ? ಹಾಗೂ ಕೂಲಿಗಾರರು ಉದ್ಧಾರವಾಗುತ್ತಾರೆ ಆದರೆ ಈಗ ಬಂಡವಾಳಶಾಹಿಗಳಾಗಿರುವವರು ಏನು ಮಾಡುತ್ತಾರೆಂದರೆ 30—40—50 ಸಾವಿರ ರೂಪಾಯಿಗಳಷ್ಟು ದುಡ್ಡು ಕೊಟ್ಟು ಎಂ. ಬಿ ಬಿ. ಎಸ್. ಹಾಗೂ ಇಂಜಿನೀಯರಿಂಗ್ ಕೋರ್ಸ್ ಇರತಕ್ಕ ಕಾಲೇಜುಗಳಲ್ಲಿ ಸೀಟು ತೆಗೆದುಕೊಳ್ಳುತ್ತಾರೆ. ಅವರು ಸರಿಯಾಗಿ ಓದುವುದೇ ಇಲ್ಲ ಅಂತಹ ಮಕ್ಕಳಿಗೆ ಅಲ್ಲಿ ಕೆಲವಾರು ಸೀಟುಗಳನ್ನು ಮೀಸಲಿಡುವುದು ಅಂದರೆ ಏನು ? ಇತ್ತೀಚೆಗೆ ಇಂಜನೀಯರಿಂಗ್ ಹಾಗೂ ಡಾಕ್ಟರ್‌ಗಳ ಸ್ಥಾನಗಳೆಲ್ಲಾ ಅವರಿಗೇ ಕೊಡುತ್ತಿದ್ದಾರೆ. ಹೀಗಾದರೆ ಬಡವರ ಪರಿಸ್ಥಿತಿ ಏನು ? ಈಗ ಎಲ್ಲೆಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿವೆಯೋ, ಮೆಡಿಕಲ್ ಕಾಲೇಜುಗಳಿವೆಯೋ ಅವೆಲ್ಲವನ್ನೂ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿ. ಅದಕ್ಕಾಗಿ ಸರ್ಕಾರಕ್ಕೆ ಏಷ್ಟು ಕೋಟಿ ರೂಪಾಯಿಗಳ ಖರ್ಚಾದರೂ ಚಿಂತೆ ಇಲ್ಲ. ಆ ಕಾಲೇಜುಗಳಲ್ಲಿ ಕೊಡತಕ್ಕ ಶಿಕ್ಷಣ ಇನ್ನು ಮುಂದೆ ಬಡವರಿಗೂ ಹೆಚ್ಚು ಹೆಚ್ಚಾಗಿ ದೊರೆಯುವ ಅವಕಾಶವನ್ನು ಮಾಡುವುದಕ್ಕೆ ತಕ್ಕ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಡೊನೇಷನ್ ವಿಷಯ. ನಾನು ಕೆಲವು ಶಾಲೆಗಳನ್ನು ನೋಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಶಾಲೆಯ ಪಕ್ಕದಲ್ಲಿರುವ ಕೆಲವು ಶಾಲೆಗಳಲ್ಲಿಯೇ ಹರಿಜನ—ಗಿರಿಜನ ಮಕ್ಕಳು ಸಹ 200—300 ರೂಪಾಯಿಗಳಷ್ಟು ಡೊನೇಷನ್ ಕೊಡಬೇಕು. ಇಲ್ಲದಿದ್ದರೆ ಅವರಿಗೆ ಅಲ್ಲಿ ಸೀಟುಗಳಿಲ್ಲ ಶಾಲೆಗೆ ರೆಕಗ್ನಿಷನ್ ಕೊಟ್ಟಿಲ್ಲವೆಂದು ಹೇಳಿಬಿಡುತ್ತಾರೆ. ಇದರಿಂದ ಕೆಲವು ಕಡೆಗಳಲ್ಲಿ ಆ ಶಾಲೆಗಳಿಗೆ ಗ್ರಾಂಟ್ ಇನ್ ಏಡ್ ಕೊಡದೇ ಇರಬಹುದು. ಒಟ್ಟಿನಲ್ಲಿ ಈ ದೇಶ ದುಡ್ಡನ್ನು ಸದುಪಯೋಗವಾಗಿ ಖರ್ಚು ಮಾಡಲು ಅವಕಾಶ ಇರಬೇಕು. ಯಾವುದೇ ಸರ್ಕಾರಿ ಶಾಲೆಗಳಾಗಿರಲಿ, ಖಾಸಗಿ ಶಾಲೆಗಳಾಗಿರಲಿ, ಕಾನ್ವೆಂಟ್ ಸ್ಕೂಲುಗಳಾಗಿರಲಿ, ನರ್ಸರಿ ಸ್ಕೂಲುಗಳಾಗಿರಲಿ, ಹೈಸ್ಕೂಲುಗಳಾಗಿರಲಿ, ಕಾಲೇಜುಗಳಾಗಿರಲಿ, ಹರಿಜನ—ಗಿರಿಜನ ಮಕ್ಕಳಿಗೆ ಅಲ್ಲಿ ಯಾವ ವಿಧವಾದಂತಹ ಫೀಜನ್ನು ವಸೂಲು ಮಾಡದೇ ಇರತಕ್ಕ ಒಂದು ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಮಾಡಿ, ಆ ಬಡ ಮಕ್ಕಳಿಗೆ ಇತರರಂತೆ ಹೆಚ್ಚು ಹೆಚ್ಚು ಅನುಕೂಲಗಳು ದೊರೆಯಲು ಅವಕಾಶವಾಗುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ಮತ್ತೆ ಹಿಂದೆ ನಮ್ಮ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಹೊರದೇಶಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗಿ ಬರುವುದಕ್ಕೆ ಯಾವು ಯಾವುದೋ ಒಂದು ರೀತಿಯ ಸ್ಕಾಲರ್‌ಷಿಪ್ ಎಂದು ಕೊಡುತ್ತಿದ್ದರು. ಅದು ಈಗ ಏನು ಕೊಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಸ್ಟೇಟ್ ಗೌರ್ನಮೆಂಟ್‌ನವರು ಏನು ಮಾಡುತ್ತಿದ್ದಾರೆ ಮತ್ತು ಸೆಂಟ್ರಲ್ ಗೌರ್ನಮೆಂಟನಲ್ಲಿ ಯಾವರೀತಿ ಮಾಡುತ್ತಿದ್ದಾರೋ ತಿಳಿಸಬೇಕು ನಮಗೆ ಸರಿಯಾದ ಮಾಹಿತಿ ಗೊತ್ತಿಲ್ಲ. ಅತ್ಯಂತ ಬುದ್ಧಿವಂತರು ಹೆಚ್ಚಿನ ಅಧ್ಯಯನ ಮಾಡುವುದಕ್ಕೆ ಈ ರೀತಿ ಯಾವುದಾದರೂ ಒಂದು ಯೋಜನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಟ್ರೈನಿಂಗ್ ಕಾಲೇಜುಗಳನ್ನು ತೆರೆಯುವುದಕ್ಕೆ ಏರ್ಪಾಡು ಮಾಡಿದ್ದೀರಿ ? ಆದರೆ ಅದರಲ್ಲಿ ಅಂಕ ಸಂಖ್ಯೆಗಳನ್ನು ಬಗೆಮಾಡಿದ್ದೀರಿ ? ಇನ್ನು ಬಿ ಏಡ್‌ನಲ್ಲಿ ಉಪಾಧ್ಯಾಯರು ಎಷ್ಟು ಇದ್ದಾರೆ, ತಾವು ಹೇಳಿರುವ ಪ್ರಕಾರ 15 ಪರ್ಸೆಂಟ್‌ಗಿಂತ ಕಡಿಮೆ ಇದ್ದಾರೆ ಅದರಲ್ಲಿ ನಮ್ಮ ಪರಿಶಿಷ್ಟವರ್ಗ ಮತ್ತು ಜನಾಂಗದವರು ಕಡಿಮೆ ಇರುವುದರಿಂದ ಇವರಿಗೆ ತರಬೇತಿ ಕೇಂದ್ರಗಳನ್ನು ಜಾಸ್ತಿಮಾಡಬೇಕು. ಇನ್ನು

ಟಿ ಸಿ ಎಚ್ ಎಂದು ನಿಮ್ನವರ್ಗದರಿಗೆ ಎಂದು ನಡೆಸಿಕೊಂಡು ಬರುತ್ತಾ ಇದ್ದೀರಿ. ಆದರಲ್ಲಿ ಹೆಚ್ಚಿನ ರಿಯಾಯಿತಿ ಕೊಟ್ಟು ಮಾನ್ಯ ಶಿಕ್ಷಣ ಸಚಿವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಹೈಸ್ಕೂಲುಗಳಲ್ಲಿ ಒಂದು ಸಲಹೆಯನ್ನು ಮಾಡಿದ್ದಾರೆ. ಅದು ಏನೆಂದರೆ ಗ್ರಾಂಟ್ ಇನ್ ಏಡ್ ಕೋಡಿನಲ್ಲಿ ಅಮೆಂಡ್‌ಮೆಂಟ್ ಮಾಡಿ ಯಾವ ಸಂಸ್ಥೆ 100ಕ್ಕೆ 50 ಪರ್ಸೆಂಟ್ ಯಾರು ಈ ಹಿಂದುಳಿದ ಜಾತಿ ಮತ್ತು ಪಂಗಡಗಳ ಮಕ್ಕಳನ್ನು ಸೇರಿಸಿಕೊಳ್ಳುತ್ತಾರೆ ಮತ್ತು ಆ ಶಾಲೆಗಳ ಆಡಳಿತ ಮಂಡಳಿಗಳಲ್ಲಿಯೂ ಸಹ ಹಿಂದುಳಿದ ಜನಾಂಗಗಳಿಗೆ ಪ್ರಾತಿನಿಧ್ಯವಿದ್ದರೆ ಅಂತಹ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಧನವನ್ನು ಕೊಡಬೇಕೆಂದು ಮಾಡಿದ್ದಾರೆ. ತಾವು ಅದನ್ನು ಮಾಡಿರತಕ್ಕದ್ದು ಸರಿಯಾಗಿದೆ ಅದನ್ನು ಜಾರಿ ಮಾಡಬೇಕೆಂದು ಹೇಳುತ್ತೇನೆ.

4-30 ಪಿ. ಎಂ.

ಉಪಾಧ್ಯಕ್ಷರು.—ತಾವು ಜಾಸ್ತಿ ವಿವರಣೆಗೆ ಹೋಗುತ್ತೀರಿ. ವಿಷಯದ ಮೇಲೆ ವಿವರಣೆ ಕೊಡುವುದಕ್ಕೆ ಹೊರಟಿದ್ದೀರಿ ? ನೀವು ನಿಮ್ಮ ವೇಳೆಯನ್ನು ಅಪವ್ಯಯ ಮಾಡಿಕೊಂಡಿರಿ .

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಖಾಸಗಿ ಶಾಲೆಗಳಲ್ಲಿ 18 ಪರ್ಸೆಂಟ್ ಪ್ರಾತಿನಿಧ್ಯವನ್ನು ಕೊಡಬೇಕೆಂದು ಇವತ್ತು ಮಾಡಿದ್ದೀರಿ ? ಹಿಂದಿನಿಂದಲೂ ಸರಿಯಾದ ಪ್ರಾತಿನಿಧ್ಯ ಕೊಡದೇ ಇರುವುದಕ್ಕೆ 20—30 ವರ್ಷಗಳಿಂದ ಏನು ಮಾಡುತ್ತೀರಿ.

ಉಪಾಧ್ಯಕ್ಷರು.—ರಚನಾತ್ಮಕ ಸಲಹೆ ಕೊಡಬೇಕು. ಜೊತೆಗೆ ಅಂಕಿಅಂಶಗಳನ್ನು ಕೊಟ್ಟು ಹೇಳಿದರೆ ಏನಾದರೂ ಪ್ರಯೋಜನಕ್ಕೆ ಬರುತ್ತದೆ, ಸುಮ್ಮನೆ ಭಾಷಣ ಮಾಡಿದರೆ ಹೇಗೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಖಾಸಗಿ ಸಂಸ್ಥೆಗಳನ್ನು ನ್ಯಾಷನಲೈಸ್ ಮಾಡಿರಿ ? ಸರ್ಕಾರದವರು ಇವತ್ತು 21 ಖಾಸಗಿ ಶಾಲೆಗಳನ್ನು ಹಾಗೆ ಮಾಡಿದ್ದಾರೆ ಈ ರೀತಿ ಮಾಡಿ ನಿರ್ಗತಿಕರಿಗೆ ಹೆಚ್ಚು ಹೆಚ್ಚು ಪ್ರಾತಿನಿಧ್ಯ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಇನ್ನು ಪ್ರೀ ಯೂನಿವರ್ಸಿಟಿ ಬೋರ್ಡನ್ನು ರದ್ದು ಮಾಡಿದ್ದೀರಿ ಅದರಿಂದ ಈಗಾಗಲೇ ಕಾಲೇಜುಗಳಲ್ಲಿ ಶಿಕ್ಷಣ ಪಡೆದಿರತಕ್ಕಂಥ ವಿದ್ಯಾರ್ಥಿಗಳು ಈಗ ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡಬೇಕೆಂದು ಹೇಳಿದರೆ ಅವರ ಮನೋಭಾವ ಬದಲಾವಣೆಯಾಗುತ್ತದೆ. ಇದನ್ನು ಸೆಕೆಂಡರಿ ಶಾಲೆಗಳಿಗೆ ಸೇರಿಸುವುದು ಎಷ್ಟರಮಟ್ಟಿಗೆ ಸರಿಯೋ ಕಾಣೆ ? ಇನ್ನು ಪ್ರಿ ಯೂನಿವರ್ಸಿಟಿ ಜೂನಿಯರ್ ಕಾಲೇಜುಗಳು ಅದರ ಸಂಸ್ಥೆಗಳು ತಮ್ಮ ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡಿವೆ ಇದೆಲ್ಲಕ್ಕಿಂತ ಇದನ್ನು ಯೂನಿವರ್ಸಿಟಿಗೆ ಕೊಟ್ಟು ಬಿಡಿ ಮೊದಲು ಇಂಟರ್‌ಮೀಡಿಯೆಟ್ ಇದ್ದಾಗ ಕೂಡ ಇದು ಯೂನಿವರ್ಸಿಟಿಗೆ ಅಟ್ಯಾಚ್ ಮಾಡಿದ್ದರು. ಆದ್ದರಿಂದ ಇದಕ್ಕೆ ಒಂದು ಬೇರೆ ವ್ಯವಸ್ಥೆ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಿಗೂ ಸಂತೋಷವಾಗುತ್ತದೆ, ಅಧ್ಯಾಪಕರಿಗೂ ಮತ್ತು ಸಾರ್ವಜನಿಕರಿಗೂ ಸಂತೋಷವಾಗುತ್ತದೆ. ಆದ್ದರಿಂದ ನಮ್ಮ ಮಾನ್ಯ ವಿದ್ಯಾಮಂತ್ರಿಗಳು ಇದನ್ನು ಬಹಳ ಗಹನವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಿಂಡಿಕೇಟ್ ಮತ್ತು ಸೆನೆಟ್ ಎಲೆಕ್ಷನ್ ಏತಕ್ಕೆ ಮಾಡಲಿಲ್ಲ ಎಂದರೆ ಕಾಮನ್ ಯೂನಿವರ್ಸಿಟಿ ಆಕ್ಟಿನಲ್ಲಿ ಲೋಪ ದೋಷವಿದೆ, ಜೊತೆಗೆ ಸ್ಟೂಡೆಂಟ್‌ಗಳನ್ನು ಎಲೆಕ್ಟ್ ಮಾಡಬೇಕೆಂದು ಮಾಡಿ, ಅಲ್ಲಿಯೂ ಒಂದು ರಾಜಕೀಯ ಗುಂಪುಗಾರಿಕೆಯಾಗಿ ಇದು ತಡವಾಗಿದೆ. ಇನ್ನು ಮೈಸೂರು ಯೂನಿವರ್ಸಿಟಿ, ಒಕ್ಕಲಿಗರ ಯೂನಿವರ್ಸಿಟಿ ಧಾರವಾಡ ಯೂನಿವರ್ಸಿಟಿ ಲಿಂಗಾಯತರ ಯೂನಿವರ್ಸಿಟಿ, ಹಾಗೂ ಬೆಂಗಳೂರು ಯೂನಿವರ್ಸಿಟಿಯೂ ಕೂಡ ಲಿಂಗಾಯತರ ಯೂನಿವರ್ಸಿಟಿಯಾಗಿದೆ ಎಂದು ಹೇಳುತ್ತಾರೆ ಅದೇ ನಮ್ಮ ಮಾನ್ಯ ಶ್ರೀ ಬಸವಲಿಂಗಪ್ಪನವರು ಯೂನಿವರ್ಸಿಟಿಯ ಬಗ್ಗೆ ಏನೋ ಹೇಳಿದರು ಎಂದು ಅದನ್ನು ದೊಡ್ಡ ಭೂತವನ್ನಾಗಿ ಮಾಡಿ ಅವರು ವಿಜ್ಞಾನದ ಒಬ್ಬ ಕೊಲೆಗಾರರನ್ನುವ ಮಟ್ಟಕ್ಕೆ ತಂದು ಒಂದೇ ದಿವಸದಲ್ಲಿ ಅಧಿಕಾರ ಬಿಟ್ಟು ಹೋಗುವಂತೆ ಮಾಡಿದರು. ಅವರಿಂದ ನಮ್ಮ ಮಂತ್ರಿಗಳು ದಯ ಮಾಡಿ ಈ ಕಡೆಗೆ ಹೆಚ್ಚಿಗೆ ಗಮನಕೊಟ್ಟು ಶಿಕ್ಷಣ ಸಂಸ್ಥೆಗಳು ರಾಜಕೀಯದಿಂದ ದೂರ ಉಳಿಯುವಂತೆ ಮಾಡಬೇಕು. ಆಗ ಅದಕ್ಕೆ ಬಹಳ ಮಹತ್ವ ಪೂರಿತವಾದ ಗೌರವ ಬರುತ್ತದೆ. ಮಾನ್ಯ ಸಚಿವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇಲಾಖೆಯಲ್ಲಿ ದಕ್ಷತೆ ಬಂದಿದೆ ಕೆಲಸವೂ ಕೂಡ ಚೆನ್ನಾಗಿ ನಡೆಯುತ್ತಿದೆ.

ಇನ್ನು ಟೆಕ್ಸ್ಟ್ ಬುಕ್ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವಂತೆ ಒಂದು ನೀತಿಯನ್ನು ಬದಲಾವಣೆ ಮಾಡಿಸಿ ಈ ಇಂಥ ಬಡವರ ಮಕ್ಕಳಿಗೆ ಕೂಲಿಗಾರರ ಮಕ್ಕಳಿಗೆ ವಿದ್ಯಾಭ್ಯಾಸ ದೊರಕುವಂತೆ ಮಾಡಬೇಕೆಂದು ಹೇಳುತ್ತೇನೆ. ಈಗ ಏನು ನಮ್ಮ ರಾಜ್ಯದಲ್ಲಿ ಸುಮಾರು 60—70 ಜನರು ಅವಿದ್ಯಾವಂತರು ಇದ್ದಾರೆ ಅದೇ 60—70 ಭಾಗದ ಜನ ವಿದ್ಯಾವಂತರು ಆರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ ಎಲ್ಲಾ ಖಾಸಗಿ ಶಾಲೆಗಳನ್ನು ನ್ಯಾಷನಲೈಸ್ ಮಾಡಿದರೆ ವಿದ್ಯಾಭ್ಯಾಸ ಕ್ಷೇತ್ರಕ್ಕೆ ಮಹತ್ವ ಬರುತ್ತದೆ ಎಂದು ಹೇಳಿ ನನಗೆ ಹೆಚ್ಚು ಕಾಲವನ್ನು ಕೊಟ್ಟು ಇಷ್ಟು ಹೇಳಲಿಕ್ಕೆ ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೂ ನನ್ನ ಮಾನ್ಯ ಸ್ನೇಹಿತರಿಗೂ ಮತ್ತು ಮಾನ್ಯ ಮಂತ್ರಿಗಳಿಗೂ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಚ್ ಬಿ ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಉಪಾಧ್ಯಕ್ಷರೇ ಈ ದಿವಸ ಇಬ್ಬರು ವಿದ್ಯಾಮಂತ್ರಿಗಳು ಮಂಡಿಸಿರತಕ್ಕಂಥ 128 ಕೋಟಿ ರೂಪಾಯಿಗಳ ಬೇಡಿಕೆಯನ್ನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ನಮ್ಮ ದೇಶ ಇತರ ದೇಶಗಳ ಮಟ್ಟಕ್ಕೆ ಅಭಿವೃದ್ಧಿ ಹೊಂದಬೇಕಾದರೆ ಅನೇಕ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಿರೀಕ್ಷಣೆ ಮಾಡಿದ್ದರು. ಇನ್ನೂ ಆ ಮಟ್ಟಕ್ಕೆ ನಮ್ಮ ಜನರು ಹೋಗಕಾದರೆ ಬಹಳ ವಿದ್ಯಾವಂತರಾಗಬೇಕು ಮತ್ತೆ ಜ್ಞಾನವನ್ನು ಪಡೆಯಬೇಕು ಅದು ಪ್ರತಿಯೊಬ್ಬರಲ್ಲಿಯೂ ಬರಬೇಕು. ಆ ರೀತಿ ಬಂದ ಮೇಲೆ ನಮ್ಮ ದೇಶದಲ್ಲಿ ಶಾಂತಿ, ಸುಖ, ನೆಮ್ಮದಿಯಿಂದ ಬಾಳಲು ಸಾಧ್ಯ. ಆದುದರಿಂದ ಈ ವಿದ್ಯಾಭ್ಯಾಸಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಸರ್ಕಾರದ ಧೋರಣೆಯಾದರೂ ಅದೇ ಇರಬೇಕು. ನಮ್ಮ ಕರ್ನಾಟಕದಲ್ಲಿ ವಿದ್ಯಾಭ್ಯಾಸಕ್ಕಾಗಿ ವರ್ಷೇ ವರ್ಷೇ ಹೆಚ್ಚು ಹಣವನ್ನು ಖರ್ಚು ಮಾಡುತ್ತಾ ಬಂದಿದ್ದಾರೆ. ಈ ವರ್ಷ 129 ಕೋಟಿ ರೂಪಾಯಿಗಳವರೆಗೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಇವತ್ತು ನಮ್ಮ ದೇಶದ ಜನರು ಬಹಳ ಅಜ್ಞಾನಿಗಳಿದ್ದಾರೆ ಅವರ ತಂದೆ ತಾಯಿಗಳಿಗೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕು ಎನ್ನತಕ್ಕ ಅರಿವು ಸಹ ಸಲ್ಲದೇ ಇರುವುದರಿಂದ ಕಡ್ಡಾಯ ಶಿಕ್ಷಣವನ್ನು ನಮ್ಮ ದೇಶದ ಮಕ್ಕಳಿಗೆ ಕೊಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ನಮ್ಮ ದೇಶ ಹೆಚ್ಚು ಹಳ್ಳಿಗಳಿಂದ ಕೂಡಿರತಕ್ಕ ದೇಶ, ನಮ್ಮ ಸ್ನೇಹಿತರು ಇಲ್ಲಿಯವರೆಗೆ ಮಾತನಾಡಿದಂತೆ 75-80 ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ ಇಷ್ಟು ನಮ್ಮ ವಿದ್ಯಾ ಮಂತ್ರಿಗಳವರು ಮಂಡಿಸಿರತಕ್ಕಂಥ 129 ಕೋಟಿ ರೂಪಾಯಿಗಳ ದುಡ್ಡು ಏನಿದೆ ಅದರಲ್ಲಿ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಬಡ ಮಕ್ಕಳಿಗೋಸ್ಕರ ಖರ್ಚು ಮಾಡುತ್ತಿದ್ದೀರಿ ಎಂದು ಕೇಳಬಯಸುತ್ತೇನೆ? ಇವತ್ತು ಒಂದೊಂದಾಗಿ ತೆಗೆದುಕೊಳ್ಳುವುದಾದರೆ ಪ್ರಿ ಪ್ರೈಮರಿ ಸ್ಕೂಲಿನ ವ್ಯವಸ್ಥೆಯಾಗಿಲ್ಲ, ಪ್ರೈಮರಿ ಸ್ಕೂಲ್‌ನ ವ್ಯವಸ್ಥೆಯಾಗಿಲ್ಲ ಅಥವಾ ಹೈಸ್ಕೂಲ್‌ನ ವ್ಯವಸ್ಥೆಯಾಗಲೀ ಎಷ್ಟೆಷ್ಟು ಸೌಕರ್ಯಗಳನ್ನು ನೀವು ಹಳ್ಳಿಗಳಲ್ಲಿ ಒದಗಿಸಿದ್ದೀರಿ? ಪಟ್ಟಣಗಳಲ್ಲಿ ಎಷ್ಟೆಷ್ಟು ಒದಗಿಸಿದ್ದೀರಿ ಎನ್ನುವ ಅಂಕಿ ಅಂಶಗಳನ್ನು ತೆಗೆದುಕೊಂಡು ನೋಡಿದರೆ ತಮಗೇ ಗೊತ್ತಾಗುತ್ತದೆ. ಅದರಲ್ಲಿ ನೀವು ಶೇಕಡ 10 ರಷ್ಟನ್ನು ಮಾತ್ರ ಹಳ್ಳಿಗರ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೀರಿ ಎಂದು ಹೇಳಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ ನಾವು ಇಲ್ಲಿ ಸುಮಾರು 80 ರಷ್ಟು ಹಳ್ಳಿಗಾಡಿನ ಪ್ರತಿನಿಧಿಗಳು ಬಂದಿದ್ದೇವೆ. ನಾವು ಈ ವಿದ್ಯಾಭ್ಯಾಸಕ್ಕಾಗಿ ಕೊಡತಕ್ಕಂಥ ದುಡ್ಡಿನಲ್ಲಿ ಹಳ್ಳಿಗಳ ವಿದ್ಯಾಭ್ಯಾಸಕ್ಕಾಗಿ ಇಷ್ಟು ಪಟ್ಟಣಗಳಲ್ಲಿರತಕ್ಕಂಥ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಷ್ಟು ಎಂದು ಬೈಫರ್‌ಕೇಟ್ ಮಾಡುವುದರಲ್ಲಿ ಹಾಗೂ ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದರಲ್ಲಿ ನಾವು ಕರ್ತವ್ಯ ಲೋಪ ಮಾಡಿದ್ದೇವೆ, ವಿಫಲರಾಗಿದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ನಮಗೆ ಸ್ವಾತಂತ್ರ್ಯ ಬಂದ ನಂತರ ಅಧಿಕಾರ ವಿಕೇಂದ್ರೀಕರಣ ಮಾಡಿದೆವು, ಆದರೆ ಇವತ್ತಿನ ದಿವಸ ನಾವು ವಿದ್ಯಾಭ್ಯಾಸ ಕ್ರಮದಲ್ಲಿ ಎಷ್ಟರಮಟ್ಟಿನ ವಿಕೇಂದ್ರೀಕರಣ ಮಾಡಿದ್ದೇವೆ ಎಂದು ನಾವು ನೋಡಬೇಕಾಗುತ್ತದೆ. ಇವತ್ತು, ಪ್ರತಿಯೊಂದು ಹಳ್ಳಿಯಲ್ಲಿಯೂ ಎಷ್ಟೆಷ್ಟು ಪ್ರಿ ಪ್ರೈಮರಿ ಸ್ಕೂಲ್‌ಗಳು ನಡೆಯುತ್ತಿವೆ? ಎಷ್ಟೆಷ್ಟು ನರ್ಸರಿ ಸ್ಕೂಲ್‌ಗಳು ನಡೆಯುತ್ತಿವೆ? ಅದರ ಬಗ್ಗೆ ತಾವು ಏನು ವ್ಯವಸ್ಥೆ ಮಾಡಿದ್ದೀರಿ

ಎಂದರೆ ಏನೂ ಇಲ್ಲ. ಅದಕ್ಕೆ ನಾನು ಮೊನ್ನೆ ದಿವಸ ಮಾತನಾಡುತ್ತಾ, ತಾಲ್ಲೂಕ್ ಬೋರ್ಡ್, ಪಂಚಾಯಿತಿಗಳು ಇರಬೇಕು ಅವು ಇದ್ದರೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯಾದರೂ ಅವರು ಸರಿಯಾಗಿ ವ್ಯವಸ್ಥೆಯನ್ನು ಮಾಡುತ್ತಾರೆಂದು ಹೇಳಿದ್ದೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಸರ್ಕಾರದವರು ಉಪಾಧ್ಯಾಯರುಗಳಿಗೆ ಹಳ್ಳಿಗಳಲ್ಲಿ ಅವರು ಹೋಗಿ ವಾಸ ಮಾಡಲು ಯಾವ ಒಂದು ಸರಿಯಾದ ಅನುಕೂಲತೆಗಳನ್ನು ಒದಗಿಸಿಕೊಟ್ಟಿಲ್ಲ. ಹಳ್ಳಿಗಳಲ್ಲಿ ಸರಿಯಾದ ಒಂದು ಕಟ್ಟಡಗಳು ಇಲ್ಲ. ಅಲ್ಲಿ ಇದನ್ನು ಯಾರು ಮಾಡುವವರೇ ಇಲ್ಲ, ಸರ್ಕಾರದವರು ಮಾಡುವಹಾಗಿಲ್ಲ, ಹಳ್ಳಿಯವರಿಗೆ ಸ್ವಂತವಾಗಿ ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಲಿಕ್ಕೆ ಶಕ್ತಿ ಇಲ್ಲ. ಇವತ್ತು ಹಳ್ಳಿಗಳಲ್ಲಿ ಎಲ್ಲಿಯೂ ಸಹ ನರ್ಸರಿ ಸ್ಕೂಲ್‌ಗಳು ಕೆಲಸ ಮಾಡುತ್ತಿಲ್ಲ. ಯಾವುದೋ ಒಂದು ದೊಡ್ಡ ಹೋಬಳಿಯಲ್ಲಿಯೋ, ಇಲ್ಲ, ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೋ ನರ್ಸರಿ ಸ್ಕೂಲ್‌ಗಳು ಇರಬಹುದು; ಆದರೆ ಹಳ್ಳಿಗಳಲ್ಲಿ ಆ ವ್ಯವಸ್ಥೆ ಇಲ್ಲವೇ ಇಲ್ಲ. ಇನ್ನು ಪ್ರೈಮರಿ ಸ್ಕೂಲ್ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಊರುಗಳಲ್ಲಿಯೂ ಸರಿಯಾದ ಒಂದು ಕಟ್ಟಡಗಳೇ ಇಲ್ಲ. ಹಿಂದೆ ಪ್ರಜಾಪ್ರಭುತ್ವದ ಪ್ರಕಾರ ಅಲ್ಲಿಯ ಪ್ರತಿನಿಧಿಗಳು ಪಂಚಾಯಿತಿಯ ಮುಖಾಂತರ, ಇಲ್ಲವೇ ತಾಲ್ಲೂಕ್ ಬೋರ್ಡ್‌ಗಳ ಮುಖಾಂತರ, ಅವರಲ್ಲಿಯೂ ಸತ್ಯವಂತರು, ಪ್ರಾಮಾಣಿಕರಾಗಿರತಕ್ಕಂಥವರು ತಮ್ಮ ಹಳ್ಳಿಗಳಲ್ಲಿ ಸ್ಕೂಲ್ ಕಟ್ಟಡ ಕಟ್ಟಿಸಲು ಪ್ರಯತ್ನಿಸುತ್ತಿದ್ದರು. ಇವತ್ತು ಸರ್ಕಾರದವರು ಹಳ್ಳಿಗಳಲ್ಲಿ ಒಂದು ರೂಮನ್ನು ಕಟ್ಟಬೇಕಾದರೆ 10 ಸಾವಿರ ರೂಪಾಯಿಗಳು ಆಗುತ್ತದೆ. ನಾನು ಹಿಂದೆ ತಾಲ್ಲೂಕ್ ಬೋರ್ಡ್ ಚೇರ್ಮನ್ ಆಗಿದ್ದಾಗ ಸ್ಕೂಲ್ ಕಟ್ಟಡಕ್ಕೆ 4 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದ್ದೇವೆ. ಅದರಲ್ಲಿ ಶೇಕಡ 10 ರಷ್ಟು ಜನಗಳು ಇನ್ನು 25 ಪರ್ಸೆಂಟ್ ಪಂಚಾಯಿತಿಯವರು ಇನ್ನಷ್ಟು ಸರ್ಕಾರದವರು ಕೊಡುತ್ತಿದ್ದರು. ಈ ರೀತಿ ಅಲ್ಲಿ ಒಂದು ವ್ಯವಸ್ಥೆ ಮಾಡಿ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಸಾಧ್ಯವಾಗಿತ್ತು. ಇನ್ನು ಉಪಾಧ್ಯಾಯರ ಬಗ್ಗೆ ಹೇಳುವುದಾದರೆ ನಿಮ್ಮ ರಿಪೋರ್ಟ್‌ನಲ್ಲಿ ಹೆಚ್ಚು ಜನರು ಟ್ರೇನ್ಡ್ ಉಪಾಧ್ಯಾಯರುಗಳಿದ್ದಾರೆ ಎಂದು ಹೇಳಿದ್ದೀರಿ. ಆದರೆ ಎಷ್ಟು ಜನ ತರಬೇತಾದ ಉಪಾಧ್ಯಾಯರುಗಳಿದ್ದಾರೋ ಗೊತ್ತಿಲ್ಲ. ಭಾರತದಲ್ಲಿರುವ ಹಳ್ಳಿಗಾಡಿನ ಜನರ ಅಜ್ಞಾನ, ಅನಕ್ಷರತೆ ಹೋಗಲಾಡಿಸಬೇಕಾದರೆ ಇವತ್ತು ನೀವು ಹಳ್ಳಿಗಾಡಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇಲ್ಲಿ ತಾವು ಇದ್ದೀರಿ, ಅಧಿಕಾರಿಗಳಿದ್ದಾರೆ, ನಾವು ಇದ್ದೇವೆ ನಮ್ಮ ಮಕ್ಕಳುಗಳು ಏನು ಪಟ್ಟಣಗಳಲ್ಲಿ ಓದಿ ಪರೀಕ್ಷೆಗಳಲ್ಲಿ ನಂಬರ್‌ಗಳನ್ನು ತೆಗೆಯುತ್ತಾರೆ ಆ ಮಟ್ಟದಲ್ಲಿ ಹಳ್ಳಿಗಳಲ್ಲಿರತಕ್ಕಂಥ ಹುಡುಗರು ಸರಿಬರಲು ಸಾಧ್ಯವೇ ? ಎಂದಿಗೂ ಪಟ್ಟಣಗಳಲ್ಲಿರತಕ್ಕಂಥ ಹುಡುಗರ ಮಟ್ಟಕ್ಕೆ ಬರಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಉಪಾಧ್ಯಾಯರುಗಳು ಸರಿಯಾಗಿ ಪಾಠ ಮಾಡುತ್ತಿದ್ದಾರೆಯೋ ಎಂದು ನೋಡಲು ತಾವೇನೋ ಇನ್ಸ್‌ಪೆಕ್ಟರ್‌ಗಳನ್ನು ತಮ್ಮ ವಿದ್ಯಾಭ್ಯಾಸ ಇಲಾಖೆಯಲ್ಲಿ ನೇಮಿಸಿದ್ದೀರಿ, ಆದರೆ ಅವರು ಎಷ್ಟರಮಟ್ಟಿಗೆ ಹಳ್ಳಿಗಳಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆ ? ನಿರೀಕ್ಷಿಸಿದಷ್ಟು ಕೆಲಸ ಅವರಿಂದ ಆಗುತ್ತಿಲ್ಲವೆಂದು ಹೇಳಿದರೆ ಅದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಇನ್ನೊಂದು ಈ ಉಪಾಧ್ಯಾಯರುಗಳ ಬಗ್ಗೆ ವರ್ಗಾವಣೆಯನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಮಾಡಬಾರದೆಂದು ಆಜ್ಞೆ ಇದೆ ಎಂದು ಕೇಳಿದ್ದೇನೆ.

ಉಪಾಧ್ಯಕ್ಷರು — ಇನ್ನು ಇಬ್ಬರು ಮಂತ್ರಿಗಳು ಇವತ್ತೇ ಉತ್ತರ ಕೊಡಬೇಕಾಗಿರುವುದರಿಂದ ಹಾಗೂ ಇನ್ನು ಕೆಲವು ಸದಸ್ಯರು ಮಾತನಾಡಬೇಕಾಗಿರುವುದರಿಂದ ನಿಮ್ಮ ಭಾಷಣವನ್ನು ಬೇಗನೆ ಮುಗಿಸಿ. ಮತ್ತೆ ನೀವು ಉಪಾಧ್ಯಾಯರುಗಳ ಬಗ್ಗೆ ಸಾಕಷ್ಟು ಹೇಳಿದ್ದೀರಿ ಇನ್ನು ಬೇರೆ ವಿಷಯಕ್ಕೆ ಬನ್ನಿ.

ಶ್ರೀ ಎಚ್. ಬಿ. ಕೆಂಚೇಗೌಡ.—ಇನ್ನು ಹತ್ತೇ ನಿಮಿಷ ಅವಕಾಶ ಕೊಡಿ ಅದಕ್ಕಿಂತ ಜಾಸ್ತಿ ಬೇಡ ಇವತ್ತು ಉಪಾಧ್ಯಾಯರುಗಳನ್ನು ಒಂದೇ ಕಡೆ ವರ್ಗಾವಣೆ ಮಾಡದೇ ಇಟ್ಟರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ 5 ವರ್ಷಕ್ಕೊಂದುಸಾರಿಯಾದರೂ ಅವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸತಕ್ಕಂಥ ಪದ್ಧತಿ ಇರಬೇಕು. ವಿದ್ಯಾ ಇಲಾಖೆಯವರು ಹಳ್ಳಿಗಳಲ್ಲಿ ಸರಿಯಾದ ರೀತಿಯಲ್ಲಿ, ವ್ಯವಸ್ಥಿತವಾದ ರೀತಿಯಲ್ಲಿ ಮಾಡುತ್ತಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಬಯಸುತ್ತೇನೆ.

ಇನ್ನು ಹೈಸ್ಕೂಲುಗಳ ವಿಚಾರ ಮಾತನಾಡುತ್ತೇನೆ. ಎಷ್ಟೋ ಹೈಸ್ಕೂಲ್‌ಗಳನ್ನು ತಾಲ್ಲೂಕು ಬೋರ್ಡಿನವರು ನಡೆಸುತ್ತಿದ್ದರು ಆದರೆ ಅದನ್ನು ಸರ್ಕಾರದವರೇ ವಹಿಸಿಕೊಂಡುಬಿಟ್ಟಿದ್ದಾರೆ. ಆದರೆ ಇವತ್ತು ಅಲ್ಲಿಗೆ ತರಬೇತಾದ ಉಪಾಧ್ಯಾಯರುಗಳನ್ನು ಅಲ್ಲಿಗೆ ಹಾಕುತ್ತಿಲ್ಲ.

ಅವರ ಒಂದು ಕುಂದ ಕೊರತೆ ಏನು ಇದೆ ಅಂದರೆ ಅವರು ಅಲ್ಲಿಗೆ ಹೋದರೆ ಒಂದು ವಸತಿ ಸೌಕರ್ಯವಾಗಲಿ, ಯಾವ ಅನುಕೂಲವಾಗಲಿ ಇಲ್ಲ ಎಂದು ಹೇಳುತ್ತಾರೆ. ಇನ್ನು ಎರಡನೆಯದಾಗಿ ಹೇಳುವುದೇನೆಂದರೆ ಉಪಾಧ್ಯಾಯರುಗಳಾಗಿ ಯಾರು ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೋ ಅವರು ಅಲ್ಲಿ ಪ್ರೈವೇಟ್ ಟ್ಯೂಷನ್ ಅನ್ನು ಇಟ್ಟುಕೊಂಡಿರುತ್ತಾರೆ. ಇದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಇದರಿಂದ ಏನಾಗುತ್ತದೆ ಎಂದರೆ ಅವರು ಸರಿಯಾಗಿ ಸ್ಕೂಲುಗಳಲ್ಲಿ ಪಾಠ ಮಾಡುವುದಿಲ್ಲ. ಯಾವಾಗ ಅವರು ಆ ಸ್ಕೂಲುಗಳಲ್ಲಿ ಸರಿಯಾಗಿ ಪಾಠ ಮಾಡುವುದಿಲ್ಲವೋ ಅನೇಕ ವಿದ್ಯಾರ್ಥಿಗಳಿಗೆ ಪಾಠ ಬರದೇ ಇರುವುದರಿಂದ ತಾವೇ ತಾವಾಗಿ ಬಂದು ಪ್ರೈವೇಟ್ ಟ್ಯೂಷನ್‌ಗೆ ಸೇರಿಕೊಳ್ಳುತ್ತಾರೆ. ಅಲ್ಲದೆ ಅವರು ಸ್ಕೂಲುಗಳಲ್ಲಿ ಸರಿಯಾಗಿ ಪಾಠ ಮಾಡುವುದಿಲ್ಲ ಎಂದು ಪ್ರೈವೇಟ್ ಟ್ಯೂಷನ್‌ಗೆ ಸೇರಿಕೊಳ್ಳುವುದರಿಂದ ಇದರಿಂದ ಉಪಾಧ್ಯಾಯರುಗಳಿಗೆ ಅನುಕೂಲವಾಗುತ್ತದೆ ಆದುದರಿಂದ ಇದನ್ನು ಖಡ್ಡಾಯವಾಗಿ ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಹೈಸ್ಕೂಲ್‌ಗಳ ವಿಚಾರ ಅದರ ಫಲಿತಾಂಶವನ್ನೇ ತೆಗೆದುಕೊಳ್ಳಿ. ನಮ್ಮ ಇಲಾಖೆಯಲ್ಲಿ ಎಷ್ಟೊಂದು ದುಡ್ಡು ಖರ್ಚು ಮಾಡುತ್ತೇವೋ ಇಷ್ಟೊಂದು ದುಡ್ಡನ್ನು ಮತ್ತಾವ ಇಲಾಖೆಗೂ ಖರ್ಚು ಮಾಡುತ್ತಿಲ್ಲ. ತಮಗೆ ಈ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ಮಂಗಳೂರಿನ ಫಲಿತಾಂಶವನ್ನೇ ತೆಗೆದುಕೊಳ್ಳಿ, ಅಲ್ಲಿ ಯಾವ ರೀತಿ ರಿಸಲ್ಟ್ ಬರುತ್ತದೆ. ಅಂತ ನೋಡಿದರೆ ಅಲ್ಲಿ ಸುಮಾರು 100ಕ್ಕೆ 70-80-90ರಷ್ಟು ಪರ್ಸೆಂಟೇಜ್ ವಿದ್ಯಾರ್ಥಿಗಳು ಪಾಸಾಗುತ್ತಾರೆ ಬೇರೆ ಕಡೆ ಹುಡುಗರು ಆ ಹೈಸ್ಕೂಲ್‌ಗಳಲ್ಲಿ ಯಾವ ಪರ್ಸೆಂಟೇಜ್‌ನಲ್ಲಿ ಪಾಸಾಗುತ್ತಾರೆ ಅನ್ನುವುದನ್ನು ನೋಡಿದರೆ 20-21-25 ರಷ್ಟು ಪಾಸಾಗುತ್ತಾರೆ ಇನ್ನೂ ಹೆಚ್ಚು ಎಂದರೆ ಯಾವುದೂ ಕೂಡ 29 ಪರ್ಸೆಂಟ್ ಮೇಲೆ ಇರುವುದಿಲ್ಲಾ. ಇಷ್ಟು ಕಡಿಮೆ ಸಂಖ್ಯೆಯಲ್ಲಿ ಬೇರೆ ಕಡೆ ವಿದ್ಯಾರ್ಥಿಗಳು ಪಾಸಾಗುತ್ತಿದ್ದಾರೆ. ಆದುದರಿಂದ ನಾನು ಇದರ ಬಗ್ಗೆ ಹೇಳುವುದಾದರೆ ನಾವು ಈ ಇಲಾಖೆಗೆ ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದೇವೋ ಅಷ್ಟೂ ಕೂಡ ಪೋಲಾಗುತ್ತಿದೆ ಅನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳಿಗೆ ನನ್ನ ಒಂದು ಸಲಹೆ ಏನೆಂದರೆ ಈ ಇಲಾಖಾ ಅಧಿಕಾರಿಗಳಿಗೆ ಒಂದು ಕಟ್ಟಾಜ್ಞೆ ಮಾಡಬೇಕು ಅದು ಏನೆಂದರೆ ಯಾವ ಹೈಸ್ಕೂಲೇ ಆಗಲಿ ಇಷ್ಟೇ ಫಲಿತಾಂಶ ಬರಬೇಕು ಅಂತ ಮಾಡಿ ಮತ್ತು ಇಷ್ಟು ಕಡಿಮೆ ಪರ್ಸೆಂಟೇಜ್ ಬಂದ ಪಕ್ಷದಲ್ಲಿ ಆ ಉಪಾಧ್ಯಾಯರುಗಳ ಒಂದು ಇಂಕ್ರಿಮೆಂಟ್ ನಿಲ್ಲಿಸುವುದೋ ಅಥವಾ ಖಡ್ಡಾಯವಾಗಿ ನಿವೃತ್ತಿ ಮಾಡುವುದೋ ಏನಾದರೂ ಒಂದು ಮಾಡುವಂತೆ ಈ ಬಗ್ಗೆ ಒಂದು ಕಟ್ಟಾಜ್ಞೆ ಮಾಡಿದ ಹೊರತು ನಮ್ಮ ದೇಶದ ವಿದ್ಯಾಭ್ಯಾಸದ ಮಟ್ಟವನ್ನು ಉತ್ತಮಪಡಿಸುವುದಕ್ಕಾಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕೇರ್ ಸಂಸ್ಥೆಯವರು ಮಿಡ್ಡೇಮೀಲ್ಸ್‌ಗೆ ಏನು ಆಹಾರವನ್ನು ಒದಗಿಸುತ್ತಿದ್ದಾರೋ ಅದರ ವಿಚಾರವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಕೇರ್ ಸಂಸ್ಥೆಯಿಂದ ಬರತಕ್ಕಂಥಾ ಆಹಾರ ಏನು ಇದೆಯೋ ಅವೆಲ್ಲವನ್ನೂ ಕೂಡ ಸರಿಯಾಗಿ ಇವರು ಒದಗಿಸುತ್ತಾ ಇಲ್ಲ. ಮಧ್ಯದಲ್ಲಿ ಇದನ್ನು ಲೋಪ ಮಾಡುತ್ತಿದ್ದಾರೆ. ಈ ಬಗ್ಗೆ ನಿಜವಾಗಲೂ ಹೇಳುವುದಾದರೆ ಪ್ರಾಮಾಣಿಕರಾದ ಉಪಾಧ್ಯಾಯರುಗಳು ಅಂತ ತಿಳಿದುಕೊಂಡು ಈ ಒಂದು ವ್ಯವಸ್ಥೆಗೆ ಏನು ಏರ್ಪಾಟು ಮಾಡಿದ್ದಾರೋ ಅವರುಗಳು ಅಸತ್ಯರಂತೆ ನಡೆಯುತ್ತಿದ್ದಾರೆ. ಇವರಲ್ಲಿ ಬಹಳ ಲೋಪವಾಗುವುದರಿಂದ ನಾನು ಈ ಬಗ್ಗೆ ಹೇಳುವುದು ಇಷ್ಟೆ. ಈಗ ಈ ಬಗ್ಗೆ ಏನು ಒಂದು ವ್ಯವಸ್ಥೆ ಮಾಡಿದ್ದೀರೋ ಅದಕ್ಕೆ ಬದಲಾಗಿ ಯಾರು ಬಡವರು ಇದ್ದಾರೋ. ಯಾರು ದೀನದಲಿತರು ಇದ್ದಾರೋ ಅವರಿಗೇನೇ ನೇರವಾಗಿ ಈ ಆಹಾರವನ್ನು ಕೊಟ್ಟುಬಿಟ್ಟರೆ ಅವರು ತಮ್ಮ ಸ್ವಂತಕ್ಕಾಗಿಯಾದರೂ ಉಪಯೋಗಿಸಿಕೊಂಡು ಅನುಕೂಲ ಮಾಡಿಕೊಳ್ಳುತ್ತಾರೆ. ಇದು ಮಧ್ಯದಲ್ಲಿ ಲೋಪವಾಗುವುದರಿಂದ ಆ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಅರ್ಥಮಂತ್ರಿಗಳು ಹೇಳಿದರು ಈ ಪೌಷ್ಟಿಕ ಆಹಾರವನ್ನು ತಯಾರು ಮಾಡುವುದಕ್ಕೆ 5 ಕೋಟಿ ರೂಪಾಯಿಗಳನ್ನು ಉಪಯೋಗಿಸಿ ಒಂದು ಫ್ಯಾಕ್ಟರಿಯನ್ನೇ ತಯಾರು ಮಾಡುತ್ತೇವೆ ಅಂತ ಹೇಳಿದರು. ಮತ್ತು ತನ್ಮೂಲಕ ಬಡವರಿಗೆ ಈ ಪೌಷ್ಟಿಕ ಆಹಾರ ದೊರಕುತ್ತದೆ ಅಂತ ಹೇಳಿದರು. ಈ ಬಗ್ಗೆ ನಾನು ಹೇಳುವುದಾದರು ಇಷ್ಟೆ. ಈ ಫ್ಯಾಕ್ಟರಿಯಲ್ಲಿ ಈ ಪೌಷ್ಟಿಕ ಆಹಾರವನ್ನು ತಯಾರು ಮಾಡುವ ಸಂದರ್ಭದಲ್ಲಿ ಬೇಕಾದಷ್ಟು ಅಡಲ್ಟ್ರೇಷನ್ ಆಗುವ ಸಂಭವ ಬಂದು ಆ ಫ್ಯಾಕ್ಟರಿನೇ ಮುಳುಗಡೆ ಆಗುವ ಸಂಭವ ಬರುತ್ತದೆ. ಆದುದರಿಂದ ಈ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲಾಗಿ ನಾನು ಹೇಳುವುದೇನೆಂದರೆ ಅನಿಮಲ್ ಹಸ್ಬೆಂಡರಿ ಕಳಗೆ ಬೆಣ್ಣೆ ಮೊಸರು ತಯಾರು ಮಾಡತಕ್ಕಂಥಾವರಿಗೇನೇ ಸ್ವಲ್ಪ ಪ್ರೋತ್ಸಾಹ ಮಾಡಿದರೆ ಈ ಬಗ್ಗೆ ಸ್ವಲ್ಪ ಉತ್ತಮ ಸ್ಥಿತಿ ಬಂದೀತು ಎಂದು ನನಗೆ ಅನಿಸುತ್ತದೆ ಅಲ್ಲದೆ ಈ ಪೌಷ್ಟಿಕ ಆಹಾರ ಏನು ಇದೆಯೋ ಅದನ್ನು ಈ ಮೂಲಕ ಸರಿದೂಗಿಸಿಕೊಳ್ಳಬಹುದು. ಅವರು ಇದನ್ನು ಉತ್ತಮ ರೀತಿಯಲ್ಲಿ ತಯಾರು ಮಾಡಿ ಸಪ್ಲೈ ಮಾಡುತ್ತಾರೆ. ಮತ್ತು ಅವರಿಗೂ ಸಹ ಅನುಕೂಲವಾಗುತ್ತದೆ, ಈ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಪಿ.ಯು ಸಿ. ಎಜುಕೇಷನ್ ಬಗ್ಗೆ ಹೇಳುವುದಾದರೆ ಅಲ್ಲಿಗೆ ಎಷ್ಟು ಬೇಕೋ ಅಷ್ಟು ಉಪಾಧ್ಯಾಯರುಗಳನ್ನು ಕೊಟ್ಟಿಲ್ಲ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ ಸೈನ್ಸ್ ಡಿಪಾರ್ಟ್‌ಮೆಂಟ್‌ಗೆ ಏನು ಉಪಕರಣಗಳು ಬೇಕೋ ಅದನ್ನು ಸರಿಯಾಗಿ ಒದಗಿಸಿಕೊಟ್ಟಿಲ್ಲಾ ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏಕೆಂದರೆ ಪಟ್ಟಣದಲ್ಲಿ ಈ ಬಗ್ಗೆ ಯಾವ ರೀತಿಯಾದು ಒಂದು ವ್ಯವಸ್ಥೆ ಇದೆಯೋ ಅದೇ ರೀತಿಯಲ್ಲಿ ಹಳ್ಳಿಗಳಲ್ಲೂ ಒದಗಿಸಬೇಕು. ಮತ್ತು ಹಳ್ಳಿಗಳಿಗೆ ಈ ಬಗ್ಗೆ ಹೆಚ್ಚು ಹಣವನ್ನು ಒದಗಿಸಿದರೆ ಸರಿಯಾದ ಒಂದು ವ್ಯವಸ್ಥಿತ ರೀತಿಯಲ್ಲಿ ಜೂನಿಯರ್ ಕಾಲೇಜುಗಳು ನಡೆಸುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಹಳ್ಳಿಗಳಲ್ಲಿರುವ ಹುಡುಗರಿಗೂ ಕೂಡ ಸರಿಯಾಗಿ ವಿದ್ಯಾಭ್ಯಾಸ ಮಾಡಿಕೊಂಡು ಹೋಗಲು ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ ನಾನೂ ಒಬ್ಬ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಯಾಗಿದ್ದೆ. ಈ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ನಾನೂ ಸಹ ಎರಡು ವರ್ಷ ಓದಿದ್ದೇನೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು 4ನೇ ವರ್ಷದ ಬಿ. ಇ.ನಲ್ಲಿ ಇದ್ದಾರೆ ನಾನು 3ನೇ ವರ್ಷದ ಬಿ. ಇ.ನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಅವಾಗ ಸೀಟು ಸಿಗಬೇಕಾದರೆ ಯಾವ ರೀತಿ ಸಿಕ್ಕುತ್ತಿತ್ತು ಎಂದರೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಅಂತ ಅಷ್ಟು ಮಾತ್ರ ಪ್ರಶ್ನೆ ಇತ್ತು. ಈವಾಗ ಇಂಜಿನಿಯರಿಂಗ್‌ಗೆ ಮತ್ತು ಮೆಡಿಕಲ್‌ಗೆ ಸೀಟ್ ಸಿಗಬೇಕಾದರೆ ಬಡವ ಮತ್ತು ಬಲ್ಲಿದವ ಅಂತ ಆಗಿದೆ. ಈಗ ಯಾರು 10-15-20 ಸಾವಿರ ರೂಪಾಯಿ ಕೊಡುತ್ತಾರೋ ಅಂಥಾವರಿಗೆ ಸೀಟು ಸಿಗುತ್ತದೇ ವಿನಾ ಬೇರೆಯವರಿಗೆ ಸಿಗುತ್ತಾ ಇಲ್ಲ. ಬಡವರಿಗಂತೂ ಈ ಇಂಜನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾಭ್ಯಾಸವನ್ನು ಪಡೆಯುವುದಕ್ಕೇ ಸಾಧ್ಯವಿಲ್ಲಾ. ರೈತನ ಆರ್ಥಿಕ ಸ್ಥಿತಿ ನೋಡಿದರೆ ಬಹಳ ದುರ್ಬಲವಾಗಿರುವುದರಿಂದ ಖಾಸಗೀ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆ ಹುಡುಗರು ಪಟ್ಟಣದಲ್ಲಿ ಬಂದು ಓದುವುದಕ್ಕೇ ಸಾಧ್ಯವಿಲ್ಲಾ. ಆದುದರಿಂದ ನಾನು ತಮಗೆ ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಯಾರು ಖಾಸಗಿಯವರು ಇಂಜನಿಯರಿಂಗ್ ಕಾಲೇಜನ್ನು ಸ್ಟಾರ್ಟ್ ಮಾಡುತ್ತೇವೆ ಎಂದು ಹೇಳುತ್ತಾರೋ ಅವರು ಹಳ್ಳಿಗಳಲ್ಲಿ ಬಂದು ಅದನ್ನು ಸ್ಟಾರ್ಟ್ ಮಾಡಿದರೆ ಆ ರೈತನ ಮಕ್ಕಳು ಆ ಹಳ್ಳಿಗಳಲ್ಲೇ ತಮ್ಮ ತಮ್ಮ ಮನೆಗಳಲ್ಲಿ ಊಟ ಉಪಚಾರ ಮಾಡಿಕೊಂಡು ಇಂತಹ ಒಂದು ವಿದ್ಯಾಭ್ಯಾಸವನ್ನು ಯಾವ ತೊಂದರೆಯೂ ಇಲ್ಲದೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕು ಎಂದು ಹೇಳಿ, ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಚೆನ್ನಪ್ಪ (ಮಾಗಡಿ).— ಮಾನ್ಯ ಉಪಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥಾ ಈ ವಿದ್ಯಾ ಇಲಾಖಾ ಬಡ್ಜೆಟ್ ಮೇಲೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಮೊಟ್ಟಮೊದಲನೆಯದಾಗಿ ಹೇಳುವುದೇನೆಂದರೆ ಈ ಇಲಾಖೆ ಬಡ್ಜೆಟ್ 129 ಕೋಟಿ ರೂಪಾಯಿ ಏನು ಇದೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು

ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ಸ್ನೇಹಿತರುಗಳನ್ನು ಈ ಬಗ್ಗೆ ಏನು ಮಾತನಾಡಿದರೋ ಆ ವಿಷಯಗಳನ್ನು ಪುನರಾವರ್ತ ಮಾಡುವುದಕ್ಕೆ ಹೋಗದೆ ನನಗೆ ತಿಳಿದಿರುವ ಮಟ್ಟಿಗೆ ಕೆಲವು ವಿಷಯುಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಈವೊತ್ತಿನ ದಿವಸ ನಮ್ಮ ದೇಶದ ಪರಿಸ್ಥಿತಿ ಈ ಬಗ್ಗೆ ಏನು ಇದೆ ಮತ್ತು ನಾವು ಯಾವ ರೀತಿ ಈ ವಿಧ್ಯಾಭ್ಯಾಸ ಕೊಡಬೇಕು ಅನ್ನುವ ಅರಿವು ತಿಳಿದುಕೊಂಡು ಆ ಬಗ್ಗೆ ಪ್ರಯತ್ನ ಮಾಡುವುದಕ್ಕೆ ಇನ್ನೂ ಹೋಗಿಲ್ಲಾ ಹಿಂದೆ ಬ್ರಿಟಿಷರ ಕಾಲದಲ್ಲಿ ಏನು ಒಂದು ವಿಧ್ಯಾಭ್ಯಾಸ ಇತ್ತೋ, ಆಫೀಸುಗಳಲ್ಲಿ ಒಂದು ಅಧಿಕಾರಿಯಾಗಿ ಕೆಲಸ ಮಾಡುವುದಕ್ಕೆ ಏನು ಒಂದು ವಿದ್ಯಾಭ್ಯಾಸ ಬೇಕಾಗಿತ್ತೋ ಅದೇ ಮಾದರೀ ವಿದ್ಯಾಭ್ಯಾಸವನ್ನು ಈವೊತ್ತೂ ಕೂಡ ಕೊಟ್ಟುಕೊಂಡು ಬರುತ್ತಾ ಇದ್ದಾರೆ ಇದರಿಂದ ಈವಾಗ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಅನೇಕ ವಿದ್ಯಾವಂತರು ಪದವೀಧರರಾಗಿ ಅವರಿಗೆ ಕೆಲಸ ಸಿಕ್ಕದೆ ಬೇಕಾದಷ್ಟು ನಿರುದ್ಯೋಗ ಸಮಸ್ಯೆಗಳುಂಟಾಗಿ ಅವರುಗಳು ತೊಂದರೆ ಪಡುತ್ತಾ ಇರುವುದನ್ನು ನಾವು ಕಾಣುತ್ತಾ ಇದ್ದೇನೆ. ಇಂತಹ ವಿದ್ಯಾಭ್ಯಾಸ ಕ್ರಮವನ್ನು ನೀವು ಬದಲಾವಣೆ ಮಾಡಿ ನಮ್ಮ ದೇಶದಲ್ಲಿರುವ ಜನತೆ ವಿದ್ಯಾವಂತರಾದ ಮೇಲೆ ಅವರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವ ಹಾಗೆ ಅವರು ಮುಂದಿನ ಒಂದು ಭವಿಷ್ಯವನ್ನು ರೂಪಿಸತಕ್ಕಂಥಾ ಒಂದು ಮಾದರೀ ವಿದ್ಯಾಭ್ಯಾಸವನ್ನು ಏತಕ್ಕೆ ನೀವು ಮಾಡುವುದಕ್ಕೆ ಇನ್ನೂ ಪ್ರಯತ್ನಪಟ್ಟಿಲ್ಲ ? ನಮ್ಮ ಸರ್ಕಾರ ಈ ಬಗ್ಗೆ ಇನ್ನೂ ಏತಕ್ಕೆ ಯೋಚನೆ ಮಾಡಿಲ್ಲಾ ಎಂದು ನನಗಾದರೂ ಅನಿಸುತ್ತದೆ ಈವೊತ್ತಿನ ದಿವಸ ಒಬ್ಬ ವಿದ್ಯಾರ್ಥಿ ಶಾಲೆಯಲ್ಲಿ ಓದಿರತಕ್ಕಂಥಾವನು ಎಸ್. ಎಸ್. ಎಲ್. ಸಿಯಾಗಲಿ, ಪಿ. ಯು. ಸಿ. ಆಗಲಿ, ಬಿ. ಎ. ಆಗಲ ಬಿ. ಎಸ್. ಸಿ. ಆಗಲಿ, ಎಂ. ಎ. ಆಗಲಿ, ಎಂ. ಎಸ್. ಸಿ. ಆಗಲಿ ಅದರಲ್ಲಿ ಎಷ್ಟೇ ಅವನು ಓದಿ ಉತ್ತಮ ದರ್ಜೆಯಲ್ಲಿ ಪಾಸ್ ಮಾಡಿದ್ದರೂ ಕೂಡ ಆ ವಿದ್ಯಾಭ್ಯಾಸ ಮುಗಿದ ನಂತರ ಆತನು ತನ್ನ ಕಾಲಮೇಲೆ ನಿಂತುಕೊಂಡು ಜೀವನ ನಡೆಸುವುದಕ್ಕೆ ಶಕ್ತಿ ಇಲ್ಲ ಅದೇ ಈವೊತ್ತಿನ ದಿವಸ ಹಳ್ಳಿಯ ರೈತನನ್ನು ತೆಗೆದುಕೊಳ್ಳಿ ಆತನು ತನ್ನ ಸಂಸಾರವನ್ನು ಎಷ್ಟು ಮಕ್ಕಳೇ ಇದ್ದರೂ ಕೂಡ ಅದರ ಭಾರವನ್ನು ಹೊತ್ತು ತನ್ನ ಜೀವನವನ್ನು ಸಾಗಿಸಿಕೊಂಡು ಹೋಗುವುದಕ್ಕೆ ಅವನು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ. ಆತ ತನ್ನ ಕಸುಬಿನಲ್ಲಿ ಪರಿಣತನಾಗಿರುವುದರಿಂದ ಈಗ ನಾವು ಕೊಡುವ ವಿದ್ಯಾಭ್ಯಾಸ ಯಾವ ರೀತಿ ಸಹಾಯವನ್ನೂ ಮಾಡುವುದಿಲ್ಲ. ನೌಕರಿ ಸಿಕ್ಕದಿದ್ದರೆ ಆತ ಒಬ್ಬ ಅವಿದ್ಯಾವಂತನಿಗಿಂತ ಕಡೆ. ಏಕೆಂದರೆ, ಅವನಿಗೆ ಆ ಕಸಬು ಗೊತ್ತಿದೆ. ಅದರಲ್ಲಿ ಅವನಿಗೆ ಉತ್ಪತ್ತಿ ಮಾಡತಕ್ಕ ಮಾರ್ಗ ಗೊತ್ತಿದೆ. ತನ್ನ ಜೀವನವನ್ನು ಯಾವರೀತಿ ನಡೆಸಿಕೊಂಡು ಹೋಗಬೇಕೆಂಬ ಧೈರ್ಯ ಅವನಿಗೆ ಇದೆ. ನಮ್ಮ ವಿದ್ಯಾವಂತರು ಇವತ್ತಿನದಿವಸ ಏನು ಹೇಳುತ್ತಾರೆ, ನಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ಏನು ಮಾಡಬೇಕು ? ನಮ್ಮ ಮುಂದಿನ ಜೀವನದ ಮಾರ್ಗ ಏನು ? ಎನ್ನುವ ವಿಚಾರವನ್ನು ಅವರಿಗೆ ಆಲೋಚನೆ ಮಾಡುವುದಕ್ಕೂ ಕೂಡ ಅವರಿಗೆ ಅವಕಾಶ ಇಲ್ಲ. ವಿದ್ಯಾವಂತರಾದ ಮೇಲೆ ಆಫೀಸಿನಿಂದ ಆಫೀಸಿಗೆ ತಿರುಗಿ, ನನಗೆ ಉದ್ಯೋಗ ಕಲ್ಪಿಸಿಕೊಡಿ, ನನಗೆ ಒಂದು ಜೀವನದ ಮಾರ್ಗವನ್ನು ಕೊಡಿ ಎಂದು ಅಲೆಯಬೇಕಾಗಿದೆ. ಇವತ್ತು ವಿದ್ಯಾಭ್ಯಾಸ ಪೂರ್ಣವಾದಮೇಲೆ ಸ್ವತಃ ತನ್ನ ಕಾಲಮೇಲೆ ನಿಂತು ಯಾವ ಆಫೀಸಿಗೂ ಹೋಗದೆ ಜೀವನ ಮಾಡುವಂತ ಒಂದು ಶಕ್ತಿ ಇವತ್ತಿನ ದಿವಸ ಇನ್ನೂ ಬಂದಿಲ್ಲ. ಇವತ್ತು ಇಂಥ ವಿದ್ಯಾಭ್ಯಾಸ ಬೇಕಾಗಿಲ್ಲ. 28 ಇಂಜಿನಿಯರಿಂಗ್ ಕಾಲೇಜುಗಳು ಮೆಡಿಕಲ್ ಕಾಲೇಜುಗಳು ಹಾಗೂ ಲಾ ಕಾಲೇಜುಗಳು, ತಾಂತ್ರಿಕ ಕಾಲೇಜುಗಳನ್ನು ಯಥೇಚ್ಛವಾಗಿ ತೆರೆದಿರುವುದರಿಂದ ಇವತ್ತು ನಮ್ಮ ಮುಂದೆ ಕಾಣುತ್ತಿರುವುದು ಬರೀ ನಿರುದ್ಯೋಗದ ಸಮಸ್ಯೆ ಇವತ್ತು ಇಂಜಿನಿಯರ್ಸ್‌ಗಳು ಮತ್ತು ಡಾಕ್ಟರುಗಳು ಆಗಿ ಹೊರಗಡೆ ಬಂದರೂ ಕೂಡ ತನ್ನ ಜೀವನವನ್ನು ಮಾಡತಕ್ಕ ಶಕ್ತಿ ಇರುವುದಿಲ್ಲ.

5-00 P. M.

ಇವತ್ತು ಎಂ. ಬಿ. ಬಿ. ಎಸ್. ಮತ್ತು ಬಿ. ಇ. ಪರೀಕ್ಷೆಯಲ್ಲಿ ರ್‍ಯಾಂಕ್ ಬಂದಿದ್ದೇನೆ ಅಂದರೂ ಕೆಲಸ ಸಿಗುವುದಿಲ್ಲ. ಇವತ್ತು ಪ್ರಾಥಮಿಕ ಶಾಲೆಯ ಮಟ್ಟದಿಂದ ವೃತ್ತಿ ಶಿಕ್ಷಣವನ್ನು ಅನುಷ್ಠಾನಕ್ಕೆ ತರದೇ ಹೋದರೆ, ಇವತ್ತು ಎಲ್ಲಾ ಖಾತೆಗಿಂತ ಈ ವಿದ್ಯಾಖಾತೆಗೆ 129 ಕೋಟಿ ರೂಪಾಯಿಗಳನ್ನು ಏನು ಖರ್ಚುಮಾಡುತ್ತಿದ್ದೇವೆ, ಅದು ನಿಜವಾಗಿಯೂ ಸಾರ್ಥಕವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇಲ್ಲದೇ ಹೋದರೆ ಇವತ್ತು ಏನು

ವಿದ್ಯಾವಂತರಾಗಿದ್ದಾರೋ ಅವರೇ ಸರ್ಕಾರದ ಮೇಲೆ ದಂಗೆಯೆದ್ದು ಸಾಯುವುದನ್ನು ಕಣ್ಣಿನಲ್ಲಿ ನೋಡುತ್ತೇವೆ ಎನ್ನುವ ಭಯ ನನಗಿದೆ. ಇವತ್ತು ಎಸ್. ಎಸ್. ಎಲ್. ಸಿ. ಮುಗಿಸಿರಲಿ, ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸವನ್ನು ಮುಗಿಸಿರಲಿ, ಅವನು ತನ್ನ ಕಾಲಮೇಲೆ ತಾನು ನಿಂತು ಜೀವನ ಮಾಡತಕ್ಕ, ತನ್ನ ಸ್ವಇಚ್ಛೆಯಿಂದ ಜೀವನ ಮಾಡತಕ್ಕ ವಿದ್ಯೆಯನ್ನು ಕಲ್ಪಿಸಿಕೊಟ್ಟರೆ ಮುಂದಿನ ಜನ ಸುಖವಾಗಿ ಬಾಳುತ್ತಾರೆ, ಜೊತೆಗೆ ನಿರುದ್ಯೋಗ ಸಮಸ್ಯೆಯೂ ಬಗೆಹರಿಯುವುದಕ್ಕೆ ಸಾಧ್ಯವಾಗಬಹುದು ಎಂದು ನನಗಾದರೂ ಅನಿಸುತ್ತದೆ. ಅದಕ್ಕೆ ಒಂದು ತಜ್ಞರ ಸಮಿತಿಯನ್ನು ಏರ್ಪಡಿಸಿ, ಈ ಬಗ್ಗೆ ಒಂದು ಮಾರ್ಗ ಸೂಚಿಯನ್ನು ಹುಡುಕಿ, ಈ ಬಗೆಯ ವಿದ್ಯಾಭ್ಯಾಸವನ್ನು ಜಾರಿಗೆ ತರುವುದಕ್ಕೆ ಸರ್ಕಾರ ಆಲೋಚನೆ ಮಾಡಬೇಕೆಂದು ನಾನಾದರೂ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಬೇಕಾದಷ್ಟು ಸ್ಕೀಮುಗಳನ್ನು ತಂದರೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ನಮ್ಮ ದೇಶದ ಪ್ರಧಾನಿಯಾಗಿರತಕ್ಕ ಶ್ರೀಮಾನ್ ಮುರಾರ್ಜಿದೇಸಾಯಿಯವರು ಇನ್ನು ಹತ್ತು ವರ್ಷಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಇದನ್ನು ಯಾವರೀತಿ ಬಗೆಹರಿಸುತ್ತಾರೋ ಗೊತ್ತಿಲ್ಲ. ಇವತ್ತು ಇದು ಯಾವುದಕ್ಕೂ ನಿಲುಕದೇ ಇರತಕ್ಕ ಸಮಸ್ಯೆಯೆಂದು ಹೇಳಬೇಕಾಗಿದೆ. ಇದು ಕೇವಲ ಭ್ರಮೆ ಎಂದು ಕಾಣುತ್ತದೆ. ಏಕೆಂದರೆ, ಇವತ್ತು ನಾವು ಕೊಡುತ್ತಿರುವ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾ ಹೋದರೆ, ಈ ನಿರುದ್ಯೋಗ ಸಮಸ್ಯೆ ಬಗ್ಗೆ ಕೊಡುವ ಹೇಳಿಕೆ ಮತ್ತು ತತ್ವ ಬರೀ ಭ್ರಮೆಯಾಗುತ್ತದೆಂದು ನನಗನಿಸುತ್ತದೆ. ಆದುದರಿಂದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. ನಾವು ಖರ್ಚು ಮಾಡುವ ಹಣವನ್ನು ಸಾರ್ಥಕವಾದ ರೀತಿಯಲ್ಲಿ ಉಪಯೋಗಿಸಬೇಕು. ಇವತ್ತು ನಿರುದ್ಯೋಗಿಯಾಗಿರುವ ರೈತನ ಮಗನಿಗೆ ಹೊಲ ಉಳುವುದಕ್ಕೆ ಬರುವುದಿಲ್ಲ, ನೇಗಿಲು ಕಟ್ಟುವುದಕ್ಕೆ ಬರುವುದಿಲ್ಲ, ಇವತ್ತು ಅವರ ಕುಲಕಸಬುಗಳನ್ನೇ ಮರೆತಿದ್ದಾರೆ. ಇವತ್ತು ವಿದ್ಯಾವಂತ ನಿರುದ್ಯೋಗಿ ಜನತೆ ಕಂಗಾಲಾಗಿ ತಿನ್ನುವುದಕ್ಕೆ ಅನ್ನವಿಲ್ಲದೆ ಪರಿತಪ್ಪಿಸುವುದನ್ನು ನಮ್ಮ ಕಣ್ಣಿಂದಲೇ ನೋಡುತ್ತಿದ್ದೇವೆ. ಇವತ್ತು ಪ್ರಾಥಮಿಕ ಶಾಲೆಗಳಿಂದಲೇ ವೃತ್ತಿ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—10 ನಿಮಿಷಗಳ ಕಾಲ ಒಂದೇ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ.

ಶ್ರೀ ಹೆಚ್. ಜಿ ಚನ್ನಪ್ಪ.—ಇವತ್ತು ಈ ಬಾಬಿಗೆ 129 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ. ಇವತ್ತು ಯಾವುದೇ ಪ್ರಾಥಮಿಕ ಶಾಲೆಗೆ ಹೋಗಿ ನೋಡಿ, 6-7 ತರಗತಿಗಳು ಇದ್ದರೂ ಇಬ್ಬರೇ ಉಪಾಧ್ಯಾಯರು ಇರುತ್ತಾರೆ. ಕೆಲವು ಕಡೆಗಳಲ್ಲಿ ಒಬ್ಬರೇ ಇರತಕ್ಕ ಸನ್ನಿವೇಶಗಳು ಇವೆ. ನನಗೆ ಒಂದು ಅರ್ಜಿ ಬಂದಿದೆ, ನಮ್ಮಲ್ಲಿ 7 ತರಗತಿಗಳು ಇವೆ, ನಮ್ಮಲ್ಲಿ ಇರತಕ್ಕ ಇಬ್ಬರೇ ಉಪಾಧ್ಯಾಯರು ಇದ್ದಾರೆ. ನಮಗೆ ಇನ್ನೂ ಜಾಸ್ತಿ ಉಪಾಧ್ಯಾಯರನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಬರೆದಿದ್ದಾರೆ. 7 ತರಗತಿಗೆ ಇಬ್ಬರು ಉಪಾಧ್ಯಾಯರು ಇದ್ದರೆ ಸಾಯಂಕಾಲದವರೆಗೆ ಮಕ್ಕಳನ್ನು ಕುಳ್ಳಿರಿಸಿಕೊಂಡು, ನಂತರ ಮನೆಗೆ ಕಳುಹಿಸುತ್ತಾರೆಯೇ ವಿನಹ ಬೇರೆ ಏನು ಅಲ್ಲಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ನಮ್ಮ ಅಧಿಕಾರಿಗಳು ಈ ವಿಚಾರದಲ್ಲಿ ಹೆಚ್ಚಿನ ಗಮನಕೊಡಬೇಕೆಂದು ನಾನು ಹೇಳುತ್ತೇನೆ. ಉಪಾಧ್ಯಾಯರುಗಳನ್ನು ನೇಮಿಸುವುದರಿಂದ ಉದ್ಯೋಗ ಕಲ್ಪಿಸಿಕೊಡುವುದಲ್ಲದೆ, ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿದಂತಾಗುತ್ತದೆ. ಇವತ್ತು 30-40 ಮಕ್ಕಳಿಗೆ ಒಬ್ಬ ಉಪಾಧ್ಯಾಯ ಇರಬೇಕು ಎನ್ನುವ ನಿಯಮ ಇದೆ. ಇದು ಕೇವಲ ಕಾಗದದಮೇಲೆ ಇದೆಯೇ ಹೊರತು ಅನುಷ್ಠಾನಕ್ಕೆ ಬಂದಿಲ್ಲ.

ಇವತ್ತು ಹೆಚ್ಚಿನ ಸೌಲಭ್ಯ ಪಟ್ಟಣಗಳಿಗೆ ಸಿಗುತ್ತಿದೆಯೇ ಹೊರತು, ಇವತ್ತು ಹಳ್ಳಿಗಳಲ್ಲಿರತಕ್ಕ ಬಡ ರೈತನಿಗೆ, ದರಿಧ್ರ್ಯನಾರಾಯಣನಿಗೆ ಸಿಗುತ್ತಿಲ್ಲ. ಇವತ್ತು ಪಟ್ಟಣಗಳಲ್ಲಿ ಸರ್ಕಾರಿ ಶಾಲೆಗಳಿಗೆ ಮಕ್ಕಳು ಹೋಗುತ್ತಿಲ್ಲ. ಕಾನ್ವೆಂಟುಗಳಿಗೆ ಮತ್ತು ಖಾಸಗಿ ಶಾಲೆಗಳಿಗೆ 15-20 ರೂಪಾಯಿ ಶುಲ್ಕವಾದರೂ ಮಕ್ಕಳನ್ನು ಸೇರಿಸುತ್ತಾರೆ. ಅಂಥ ಕಡೆ 300-400 ರೂಪಾಯಿಗಳನ್ನು ಬಾಡಿಗೆ ತೆತ್ತು ಶಾಲೆಗಳನ್ನು ತೆರೆಯುತ್ತಾರೆ. ಇವತ್ತು ತನ್ನ ಮಕ್ಕಳನ್ನು ಓದಿಸುವುದಕ್ಕೆ ಶಕ್ತಿ ಇಲ್ಲದ, ಬಡ ರೈತ ಶಾಲೆಯನ್ನು ಕೇಳಿದರೆ ನಿಮ್ಮ ವಂತಿಗೆ ಏನು ? ಎಂದು ಪ್ರಶ್ನೆ ಹಾಕುತ್ತಾರೆ. ಅವನು ತನ್ನ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಶಕ್ತಿ ಇಲ್ಲದೇ ಇರುವಾಗ

ವಂತಿಗೆ ಏನು ಕೊಡುತ್ತಾನೆ. ಇವತ್ತು ತನ್ನ ಮಕ್ಕಳನ್ನು ಜೀತಕ್ಕೆ ಇಟ್ಟು ಜೀವನ ಮಾಡುವಂತ ಪರಿಸ್ಥಿತಿ ಇರುವಾಗ ಅಂಥಕಡೆ ನೀವು ವಂತಿಗೆ ಕೇಳುವುದಕ್ಕೆ ಹೊರಟರೆ ವಿದ್ಯಾಭ್ಯಾಸದ ಮಟ್ಟ ಯಾವರೀತಿ ಮುಂದುವರಿಯುತ್ತದೆ? ಕಡ್ಡಾಯ ಶಿಕ್ಷಣ ಬೇರೆ ಜಾರಿಗೆ ತಂದಿದ್ದೇವೆ. ಎಲ್ಲಿಲ್ಲ ಶಾಲೆಗಳು ಇಲ್ಲ, ಅಂಥ ಕಡೆ ಶಾಲೆಗಳನ್ನು ಒದಗಿಸಬೇಕು, ಇಲ್ಲದೇ ಇದ್ದರೆ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮುಂದುವರಿಯುವುದಕ್ಕೆ ಕಷ್ಟವಾಗುತ್ತದೆ ಇವತ್ತು ಒಂದುಕಡೆ ಮೆರಿಟ್ ಮತ್ತು ಡಿಮೆರಿಟ್ ಎಂದು ಹೇಳುತ್ತಾರೆ.

ಉಪಾಧ್ಯಕ್ಷರು.—ಬೇಗ ಮುಗಿಸಿಬಿಡಿ.

ಶ್ರೀ ಹೆಚ್. ಜಿ ಚನ್ನಪ್ಪ.—ಇನ್ನು 10 ನಿಮಿಷ ಕೊಡಿ ಸ್ವಾಮಿ, ಮೆರಿಟ್ ಬಗ್ಗೆ ಹೇಳುತ್ತಾರೆ. ಇವತ್ತು ಮೆರಿಟ್ ಯಾರಿಗೆ ಸಿಗುತ್ತದೆ. ಪಟ್ಟಣದಲ್ಲಿ ಕಾನ್‌ವೆಂಟಿನಲ್ಲಿ ಓದತಕ್ಕ ಮಕ್ಕಳಿಗೆ, ಕೇಂಬ್ರಿಡ್ಜ್ ಹಾಗೂ ಆಕ್ಸ್‌ಫರ್ಡ್ ಕಾನ್ವೆಂಟ್‌ಗಳಲ್ಲಿ ಓದುವ ಮಕ್ಕಳಿಗೆ ಸಿಗುತ್ತದೆ. ಅದೇ ಹಳ್ಳಿಯಿಂದ ಬರತಕ್ಕ ಬಡವನ ಮಕ್ಕಳಿಗೆ ಅದು ಸಿಗುತ್ತಿಲ್ಲ. ನಾನು 14 ವರ್ಷ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದು ಹಳ್ಳಿಯ ಜೀವನಮಟ್ಟವನ್ನು ಚನ್ನಾಗಿ ಅರಿತಿದ್ದೇನೆ. ಹಳ್ಳಿಯವರ ಕಷ್ಟ ಏನೆಂಬುದನ್ನು ಸರ್ಕಾರದ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು.—ಎಲ್ಲಾ ಹೇಳಿದ್ದಾರೆ.

ಶ್ರೀ ಹೆಚ್. ಜಿ. ಚನ್ನಪ್ಪ.—ಸ್ವಾಮಿ, ತಾವು ಟೈಮ್ ಇಲ್ಲ ಎಂದರೆ ನಾನು ಕೂತುಕೊಳ್ಳುತ್ತೇನೆ. ಇವತ್ತು ಪಟ್ಟಣಗಳಲ್ಲಿ ವಾಸಮಾಡತಕ್ಕ ವಿದ್ಯಾವಂತ ಕುಟುಂಬದ ಮಕ್ಕಳಿಗೆ 70-80-90 ಪರ್ಸೆಂಟ್ ಬಂದಿರುವವರಿಗೆ ಸೀಟು ಕೊಡುತ್ತಾರೆ, ಬಡ ಕುಟುಂಬದಿಂದ ಬಂದಿರತಕ್ಕ ಮಕ್ಕಳಿಗೆ ಕೊಡುವುದಿಲ್ಲ. ಯಾವರೀತಿ ಅಷ್ಟು ಪರ್ಸೆಂಟ್ ಅಂಕಗಳನ್ನು ಪಡೆಯುವುದಕ್ಕೆ ಸಾಧ್ಯ? ಆದ್ದರಿಂದ ಹಳ್ಳಿಯವರ ಮಕ್ಕಳಿಗೇ ಇಂತಿಷ್ಟು ಎಂದು ಮೆರಿಟ್ ಫಿಕ್ಸ್ ಮಾಡಿ; ಕಾನ್‌ವೆಂಟ್ ಶಾಲೆಗಳಲ್ಲಿ ಓದಿದ ಮಕ್ಕಳಂತೆ ಅವರಿಗೂ ಕೂಡ ಸೀಟುಗಳನ್ನು ಮೀಸಲಾಗಿಟ್ಟು ಅವರೂ ಕೂಡ ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಈಗ ಅಗ್ರಿಕಲ್ಚರಲ್ ಯೂನಿವರ್ಸಿಟಿಯೊಳಗೆ ಚಿಕ್ಕೇಗೌಡರು ಈ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದಾರೆ, ಅದು ಎಲ್ಲಾ ಕಡೆ ಬರಬೇಕು, ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜು ಇವುಗಳಲ್ಲಿ ಮೊದಲು ಬರಬೇಕು, ಅದು ಬರದೇ ಹೋದರೆ ಪ್ರತಿಯೊಂದು ಶಾಲೆಯಲ್ಲೂ ಶ್ರೀಮಂತ ವರ್ಗಕ್ಕೆ ಮೀಸಲಾಗುತ್ತದೆ. ಆಗ ಬಡವನ ಕಷ್ಟ ಕೇಳುವವರು ಇಲ್ಲದಂತಾಗುತ್ತದೆ. ಆದುದರಿಂದ ಈಗ ಮಾನ್ಯ ಚಿಕ್ಕೇಗೌಡರು ಅಗ್ರಿಕಲ್ಚರಲ್ ಯೂನಿವರ್ಸಿಟಿಯೊಳಗೆ ಏನು ಮಾಡಿದ್ದಾರೆ ಅದನ್ನು ಬೇರೆ ಕಾಲೇಜುಗಳಲ್ಲಿಯೂ ಅಗತ್ಯವಾಗಿ ಮಾಡಬೇಕು ಎಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಇನ್ನು ಹೈಸ್ಕೂಲುಗಳ ವಿಷಯವಾಗಿ ಹೇಳಬೇಕು ಎಂದರೆ, ಇವೊತ್ತು ಸರ್ಕಾರದ ಹೈಸ್ಕೂಲು ಕಟ್ಟಡಗಳು ಇವೆ, ಎಲ್ಲಾ ಉಪಾಧ್ಯಾಯರು ಇರುತ್ತಾರೆ. ಅವರಿಗೆ ಸಾಕಷ್ಟು ಸಂಬಳ ಕೊಡುತ್ತೇವೆ, ಆದರೆ ಅದರ ರಿಸಲ್ಟ್ ನೋಡಿದರೆ ಸೈಫರ್. ಒಂದೊಂದು ಕಡೆ 5 ಪರ್ಸೆಂಟ್, 10 ಪರ್ಸೆಂಟ್ ಬರುತ್ತದೆ. ಆದರೆ ಖಾಸಗಿ ಶಾಲೆಗಳಲ್ಲಿ 70-80 ಪರ್ಸೆಂಟ್ ಬರುವುದಕ್ಕೆ ಕಾರಣ ಏನು? ಅದೇ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಟ್ಟು 5 ಪರ್ಸೆಂಟ್ ಬರದೇ ಇರಬೇಕಾದರೆ ಕಾರಣ ಏನು ಇವೊತ್ತು ತನಿಖಾ ಅಧಿಕಾರಿಗಳು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಬಂದಾಗ ಪ್ರತಿಯೊಂದು ಪರಿಶೀಲನೆ ಮಾಡುತ್ತಾರೆ. ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ನಿಮಗೆ ರೆಕಗ್ನಿಷನ್ ಏತಕ್ಕೆ ಕೊಡಬೇಕು, ಕ್ಯಾನ್ಸಲ್ ಮಾಡುತ್ತೇವೆ ಎಂದು ಹೇಳುತ್ತಾರೆ, ಅದೇ ರೀತಿ ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಏತಕ್ಕೆ ಕೇಳಬಾರದು, ಇವೊತ್ತು ತಮಗೆ ಈ ಶಾಲೆಗಳನ್ನು ಸರಿಯಾಗಿ ನಡೆಸಲಿಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ನಮಗೆ ಬಿಟ್ಟುಕೊಡಿ. ನಾವು ಆಗ 70-80 ಪರ್ಸೆಂಟ್ ರಿಸಲ್ಟ್ ಕೊಡದೇ ಹೋದರೆ ಆಗ ನಮ್ಮನ್ನು ಕೇಳಿ, ಸುಮ್ಮನೆ ಖಾಸಗಿ ಸಂಸ್ಥೆಯವರ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಹೊರಿಸಬೇಡಿ. ಖಾಸಗಿ ಸಂಸ್ಥೆಯವರು ಮಾಡತಕ್ಕಂತಹ ಕೆಲಸಕ್ಕೆ ತಾವು ಇನ್ನೂ

ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಡಬೇಕು. ಇವೊತ್ತು 5ನೇ ವರ್ಷದಲ್ಲಿ ಗ್ರ್ಯಾಂಟ್ಸ್ ಬರುತ್ತದೆ ಎಂದು 5 ವರ್ಷ ಕಷ್ಟಪಟ್ಟು ಶಾಲೆಗಳನ್ನು ನಡೆಸುತ್ತಾರೆ. ಕಡೆಗೆ ಏನಾಗುತ್ತದೆ ಎಂದರೆ ಒಬ್ಬರಿಗೆ ಈ ಗ್ರ್ಯಾಂಟ್ಸ್ ಕೊಡುತ್ತೀರಿ, ಇನ್ನೊಬ್ಬರಿಗೆ ಏನೋ ಒಂದು ಕಾರಣ ಹೇಳಿ ಇಲ್ಲ ಎಂದು ಹೇಳುತ್ತೀರಿ, ಇವೊತ್ತು ಎಲ್ಲಾ ಶಾಲೆಗಳನ್ನು ನ್ಯಾಷನಲೈಸ್ ಮಾಡಿಕೊಂಡು ಸರ್ಕಾರದವರೇ ನಡೆಸಿಕೊಳ್ಳಿ, ನಾವು ಬೇಡ ಎಂದು ಹೇಳುವುದಿಲ್ಲ. ತಾವು ಈ ರೀತಿಯು ಮಾಡುವುದಿಲ್ಲ, ಇಲ್ಲ ಸರಿಯಾಗಿ ಗ್ರ್ಯಾಂಟ್ಸ್ ಕೊಡುವುದಿಲ್ಲ ಅಧಿಕಾರಿಗಳು ಕಂಡೀಷನ್ಸ್ ಹಾಕುವುದರಲ್ಲಿ ಮಾತ್ರ ಪರಿಣಿತರಾಗಿದ್ದಾರೆ. ಇವೊತ್ತು ಖಾಸಗಿ ಶಾಲೆಗಳಲ್ಲಿ ಬರತಕ್ಕ ರಿಸಲ್ಟ್ ಸರ್ಕಾರಿ ಶಾಲೆಗಳಲ್ಲಿ ಏತಕ್ಕೆ ಬರುವುದಿಲ್ಲ. ಎಂದರೆ ಖಾಸಗಿ ಶಾಲೆಗಳಲ್ಲಿ ತನಿಖೆ ಮಾಡತಕ್ಕವರು ಇರುತ್ತಾರೆ. ಮತ್ತೆ ಸಾಧ್ಯವಾದಷ್ಟು ಹುಡುಗರಿಗೆ ಅನುಕೂಲವಾಗುವಂತ ರೀತಿಯಲ್ಲಿ ಪಾಠಪ್ರವಚನಗಳನ್ನು ಬೋಧನೆ ಮಾಡಿ ಒಳ್ಳೆಯ ರಿಸಲ್ಟ್ ಪಡೆಯುತ್ತಾರೆ ಆದರೆ ಕೆಲವರು ತಮ್ಮ ಜೀವನಾಧಾರಕ್ಕಾಗಿ ಖಾಸಗಿ ಶಾಲೆಗಳನ್ನು ನಡೆಸತಕ್ಕವರು ಇದ್ದಾರೆ. ಈ ರೀತಿ ಮಾಡಿಕೊಂಡಿರತಕ್ಕದ್ದು ಸಿಟಿಯಲ್ಲಿಯೇ ಹೊರತು ಹಳ್ಳಿಗಳಲ್ಲಿ ಈ ರೀತಿ ಮಾಡಿಕೊಂಡಿಲ್ಲ. ಹಿಂದೆ ನಾನು ಮಹಾಲಕ್ಷ್ಮಿ ಲೇ ಔಟ್‌ನಲ್ಲಿರತಕ್ಕ ಕಮಲ ನೆಹ್ರೂ ನರ್ಸರಿ ಸ್ಕೂಲ್‌ನ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ, ಅದಕ್ಕೆ ಉತ್ತರ ಬರಲಿಲ್ಲ. ಇವೊತ್ತು ಹಳ್ಳಿಗಳಲ್ಲಿ ನಡೆಯುತಕ್ಕ ಶಾಲೆಗಳು ಸತ್ಯಸಂಧತೆಯಿಂದ ನಡೆಯುತ್ತವೆ. ಆದುದರಿಂದ ಹಳ್ಳಿಗಳಲ್ಲಿ ನಡೆಯುತಕ್ಕಂಥ ಶಾಲೆಗಳಿಗೆ ಹೆಚ್ಚು ಗ್ರ್ಯಾಂಟ್ಸ್ ಕೊಟ್ಟು ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಇನ್ನು ಉಪಾಧ್ಯಾಯರು ಶಾಲೆಗಳನ್ನು ನಡೆಸತಕ್ಕ ಹಳ್ಳಿಗಳಲ್ಲೇ ಉಳಿದುಕೊಳ್ಳುವುದಕ್ಕೆ ಅವರಿಗೆ ಮನೆಗಳು ಸಿಕ್ಕುವಂಥ ವ್ಯವಸ್ಥೆ ಮಾಡಬೇಕು. ಹಿಂದೆ ಹೌಸಿಂಗ್ ಬೋರ್ಡ್‌ನವರು ಈ ಬಗ್ಗೆ ಒಂದು ಸ್ಕೀಮ್ ತಂದಿದ್ದರು. ಅದನ್ನು ಹಾಗೆ ಮುಂದುವರೆಸಿ ಉಪಾಧ್ಯಾಯರುಗಳಿಂದ ಬಾಡಿಗೆ ರೂಪದಲ್ಲಿ ಹಣ ತೆಗೆದುಕೊಳ್ಳುವಂಥ ಸ್ಕೀಮ್ ತಂದರೆ ಮಕ್ಕಳಿಗೆ ಉಪಾಧ್ಯಾಯರು ಹೆಚ್ಚು ವಿದ್ಯಾಭ್ಯಾಸ ಕೊಡಲಿಕ್ಕೆ ಅನುಕೂಲವಾಗುತ್ತದೆ. ಈ ರೀತಿ ಅವರಿಗೆ ಅನುಕೂಲ ಮಾಡಿಕೊಡದೇ ಹೋದರೆ ಏನಾಗುತ್ತದೆ ಎಂದರೆ ಉಪಾಧ್ಯಾಯರು 12 ಗಂಟೆಗೆ ಶಾಲೆಗೆ ಬರುತ್ತಾರೆ 3 ಗಂಟೆಗೆ ಹೊರಟು ಹೋಗುವುದಕ್ಕೆ ಬಸ್ಸ್ ಎದುರು ನೋಡುತ್ತಾ ಇರುತ್ತಾರೆ. ಮಕ್ಕಳಿಗೆ ಪಾಠ ಬಂದಿದೆಯೋ ಇಲ್ಲವೋ ಎಂದು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ ಆದ್ದರಿಂದ ಶಾಲೆಗಳು ಇರತಕ್ಕ ಹಳ್ಳಿಗಳಲ್ಲೇ ಅವರಿಗೆ ಮನೆಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಉಪಾಧ್ಯಾಯರುಗಳು ಸ್ಥಳದಲ್ಲೇ ವಾಸಮಾಡುವಂತಾಗಬೇಕು

ಉಪಾಧ್ಯಕ್ಷರು.—ಇನ್ನು ಮಾನ್ಯಮಂತ್ರಿಗಳವರಿಂದ ಚರ್ಚೆಗೆ ಉತ್ತರ ಆಗಬೇಕಾಗಿದೆ, ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

ಶ್ರೀ ಹೆಚ್ ಜಿ ಚನ್ನಪ್ಪ.—ಈಗ ನಾನು ಹಳ್ಳಿಯಲ್ಲಿರತಕ್ಕ ಕಷ್ಟ ಪರಿಸ್ಥಿತಿ ಹೇಳುತ್ತಿದ್ದೇನೆ. ಇವೊತ್ತು ಗ್ರಾಮಾಂತರ ಪ್ರದೇಶದಿಂದ ಬರತಕ್ಕವರ ಏಳಿಗೆಯಾಗಬೇಕಾದರೆ, ಹಳ್ಳಿಯಿಂದ ಬರತಕ್ಕವರಿಗೆ ಒಂದು ಪರ್ಸೆಂಟೇಜ್ ಇಟ್ಟು, ಪಟ್ಟಣದಿಂದ ಬರತಕ್ಕವರಿಗೆ ಒಂದು ಪರ್ಸೆಂಟೇಜ್ ಇಟ್ಟು ಎಲ್ಲರೂ ವಿದ್ಯಾಭ್ಯಾಸ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕು. ಇನ್ನು ಮ್ಯಾನೇಜ್‌ಮೆಂಟ್‌ನಲ್ಲಿ ಸೀಟುಗಳನ್ನು ಹಂಚುವ ಬಗ್ಗೆ, ಮತ್ತು ವಂತಿಗೆ ಕೊಡುವ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನು ವಿರೋಧಿಸಿ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಹಳ್ಳಿ ಮತ್ತು ಪಟ್ಟಣಗಳಲ್ಲಿ ಎರಡರಲ್ಲೂ ಕೂಡ ಪ್ರೈಮರಿ ಸ್ಕೂಲುಗಳಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದೀರೋ, ಅದೇ ರೀತಿ ಪ್ರೀ ಪ್ರೈಮರಿ ಎಜುಕೇಷನ್‌ಗೂ ಕೂಡ ಸರ್ಕಾರ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಇವೊತ್ತು ಪಟ್ಟಣದಲ್ಲಿ ಇರತಕ್ಕವರಿಗೆ ಸಾಮಾನ್ಯವಾಗಿ ನರ್ಸರಿ ಸ್ಕೂಲುಗಳಿಂದ ಜಾಸ್ತಿ ಅನುಕೂಲ ಸಿಕ್ಕುತ್ತದೆ. ಇದನ್ನು ಪ್ರೈವೇಟ್ ಸಂಸ್ಥೆಯವರು ನಡೆಸುತ್ತಾರೆ. ಹಳ್ಳಿಯಲ್ಲಿ ಇರತಕ್ಕವರಿಗೆ ಈ ಅನುಕೂಲ ಸಿಕ್ಕುವುದಿಲ್ಲ. ಆದುದರಿಂದ

ಸರ್ಕಾರ ಎಲ್ಲಾ ಕಡೆಗಳಲ್ಲೂ ಈ ಫ್ರೀ ಪ್ರೈಮರಿ ಎಜುಕೇಷನ್‌ಗೆ ಹೆಚ್ಚಿನ ಗಮನಕೊಟ್ಟು ಎಲ್ಲಾ ಕಡೆಗಳಲ್ಲೂ ಫ್ರೀ ಪ್ರೈಮರಿ ಎಜುಕೇಷನ್ ಮಾಡಿ, ನಂತರ ಪ್ರೈಮರಿ ಎಜುಕೇಷನ್‌ಗೆ ಅವಕಾಶ ಇರುವಂತೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಹಿಂದೆ 6 ವರ್ಷ ದಿಂದ 10 ವರ್ಷದವರೆಗೆ ಇರತಕ್ಕವರಿಗೆಲ್ಲಾ ಕಂಪಲಸರಿ ಎಜುಕೇಷನ್ ಕೊಡಬೇಕೆಂದು ಒಂದು ಸರ್ವೆ ಮಾಡಿಸಿ ಅದರ ಮುಖಾಂತರ ಅಡ್ಮಿಷನ್ ಮಾಡಿಸುತ್ತಿದ್ದರು. ಇದರ ಬಗ್ಗೆ ಕೆಲವಾರು ವರ್ಷಗಳ ಹಿಂದೆ ಸರ್ವೆ ನಡೆದಿವೆ. ಆದುದರಿಂದ ಇದರ ಬಗ್ಗೆ ಪ್ರತಿ ವರ್ಷ ಸರ್ವೆ ನಡೆಸಿ ಯಾರು ಯಾರು ಇದಕ್ಕೆ ಅರ್ಹರಾಗುತ್ತಾರೆ ಅಂತಹವರಿಗೆ ಈ ಶಿಕ್ಷಣ ದೊರೆಯುವುದಕ್ಕೆ ಅನುಕೂಲ ಮಾಡಬೇಕು. ಎಲ್ಲರಿಗೂ ಈ ರೀತಿಯ ಶಿಕ್ಷಣ ಕೊಡಲಿಕ್ಕೆ ಅನುಕೂಲವಾಗುವಂತೆ, ಶಾಲಾ ಕಟ್ಟಡ ಗಳನ್ನು ಹೆಚ್ಚು ಮಾಡಬೇಕಾಗುತ್ತದೆ, ನಂತರ ಹೆಚ್ಚು ಹೆಚ್ಚು ಸಾಮಗ್ರಿಗಳನ್ನು ಒದಗಿಸ ಬೇಕಾಗುತ್ತದೆ, ನಂತರ ಉಪಾಧ್ಯಾಯರುಗಳಿಗೂ ಕೂಡ ಎಲ್ಲಾ ಸೌಕರ್ಯಗಳನ್ನು ಕೂಡ ಒದಗಿಸಬೇಕಾಗುತ್ತದೆ, ಆದುದರಿಂದ ಈ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಹೇಳಬೇಕು ಎಂದರೆ, ನಿಜವಾಗಿಯೂ ಕೂಡ ಈ ಶಿಕ್ಷಣವನ್ನು ಸರ್ಕಾರದವರು ಬಹಳ ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಆದರೆ ಅದರ ಅನುಕೂಲ ಎಲ್ಲಾ ಕಡೆಗೆ ಸಿಕ್ಕುವಷ್ಟು ಅನುಕೂಲವಾಗಿಲ್ಲ. ವಯಸ್ಕರಿಗೆ ಶಿಕ್ಷಣ ಕೊಡತಕ್ಕದ್ದನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸಿ, ವಯಸ್ಕರಿಗೆ ಅನುಕೂಲವಾಗುವಂತೆ ಮಾಡಲು, ಅದಕ್ಕೆ ಇನ್ನು ಹೆಚ್ಚು ಹಣ ಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಸರ್ಕಾರದವರು ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯ ರುಗಳಿಗೆ, ಲೆಕ್ಚರರ್‌ಗಳಿಗೆ ಯಾವ ರೀತಿ ಚೆಕ್ ಮುಖಾಂತರ ಸಂಬಳವನ್ನು ಕೊಡುತ್ತಿದ್ದೀರೋ ಅದೇ ರೀತಿ ಪ್ರೈವೇಟ್ ಕಾಲೇಜ್ ಮತ್ತು ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ಕೆಲಸ ಮಾಡುವ ಉಪಾ ಧ್ಯಾಯರುಗಳಿಗೂ ಚೆಕ್ ಮುಖಾಂತರವೇ ಸಂಬಳವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಕೆಲವು ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಉಪಾಧ್ಯಾಯರುಗಳಿಗೆ ಸರ್ಕಾರದವರು ಕೊಡುವಷ್ಟು ಸಂಬಳ ಕೊಡದೆ ಕಡಿಮೆ ಕೊಡುತ್ತಿದ್ದಾರೆ, ಇದರ ಬಗ್ಗೆಯೂ ಕೂಡ ಸರ್ಕಾರದವರು ತಮ್ಮ ಗಮನ ವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಸ್ಕೂಲ್‌ಗಳಲ್ಲಿನ ಅಡ್ಮಿಷನ್ ಬಗ್ಗೆ ಹೇಳುವುದಾದರೆ ವಿದ್ಯಾರ್ಥಿಗಳನ್ನು ಸ್ಕೂಲ್ ಗಳಿಗೆ ಅಡ್ಮಿಟ್ ಮಾಡಿಕೊಳ್ಳುವ ಸಮಯದಲ್ಲಿ ಮೆರಿಟ್ ಇದೆಯೋ ಇಲ್ಲವೇ ಎಂದು ನೋಡುತ್ತಾರೆ. ಇವತ್ತು ಪಟ್ಟಣಗಳಲ್ಲಿರುವ ವಿದ್ಯಾರ್ಥಿಗಳಿಗೆ ಸಿಕ್ಕುವಷ್ಟು ಅನುಕೂಲ ಹಳ್ಳಿಗಾಡಿನಲ್ಲಿರುವ ಮಕ್ಕ ಳಿಗೆ ಸಿಕ್ಕುತ್ತಿಲ್ಲವಾದ್ದರಿಂದ ಅವರಿಗೆ ಮೆರಿಟ್ ಇರುವುದಿಲ್ಲ. ಆದುದರಿಂದ ಕೊನೇ ಪಕ್ಷ ರೂರಲ್ ಏರಿಯಾಗಳಿಂದ ಬರುವ ವಿದ್ಯಾರ್ಥಿಗಳಿಗೋಸ್ಕರವಾಗಿ ಇಷ್ಟು ಪರ್ಸೆಂಟ್ ಎಂದು ಇರುವಂತೆ ಮಾಡ ಬೇಕೆಂದು ಹೇಳಬಯಸುತ್ತೇನೆ.

ಇನ್ನು ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡುವ ವಿಷಯದಲ್ಲಿ ಹೇಳುವುದಾದರೆ, ಸ್ಕೂಲ್‌ಗಳು ಪ್ರಾರಂಭವಾಗಿ ಎಷ್ಟು ದಿವಸಗಳಾದರೂ ಪಠ್ಯ ಪುಸ್ತಕಗಳೇ ಬಂದಿರುವುದಿಲ್ಲ. ಇದು ಪ್ರತಿ ವರ್ಷ ಎಲ್ಲಾ ಕಡೆಯಿಂದ ಬರತಕ್ಕ ವಿದ್ಯಾರ್ಥಿಗಳ ದೂರು. ಇವತ್ತು ಮೈಸೂರಿನಲ್ಲಿ ಜರ್ಮನ್ ಏಡ್‌ನಿಂದ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡುವ ಸಲುವಾಗಿ ಒಂದು ಪ್ರಿಂಟಿಂಗ್ ಪ್ರೆಸ್‌ನ್ನು ತೆರೆಯ ಲಾಗಿದೆ. ಇದನ್ನು ತೆರೆದು ಸುಮಾರು 7–8 ವರ್ಷಗಳಾದರೂ ಇದನ್ನು ಸರಿಯಾಗಿ ನಡೆಸದೇ ಇರುವುದರಿಂದ ಇವತ್ತು ಪಠ್ಯ ಪುಸ್ತಕಗಳನ್ನು ಮುದ್ರಿಸಲು ಬಹಳ ತೊಂದರೆಯಾಗಿದೆ. ಇದರ ಕಡೆ ಕೂಡ ಸರ್ಕಾರದವರು ತಮ್ಮ ಗಮನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಎಲ್ಲಕ್ಕಿಂತ ಇನ್ನೊಂದು ಮುಖ್ಯವಾದ ವಿಚಾರವೆಂದರೆ ಪ್ರಿಂಟ್ ಆದ ಪುಸ್ತಕಗಳಲ್ಲಿ ಅನೇಕ ತಪ್ಪುಗಳಿದ್ದರೂ ಅದನ್ನು ಸರಿಯಾಗಿ ನೋಡುತ್ತಿಲ್ಲ ಎಂಬುದಕ್ಕೆ ನಾನು ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. 'ಅಟ್ಲಾಸ್'' ಪುಸ್ತಕದಲ್ಲಿ ''ಕರ್ನಾಟಕ'' ಎನ್ನುವ ದಕ್ಕೆ 'ಕಿರ್ನಾಟಕ'' ಎಂದು ಪ್ರಿಂಟ್ ಆಗಿದೆ ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಈ ತಿಂಗಳ 22ನೇ ತಾರೀಖಿನಲ್ಲಿ ಬಂದಿದೆ. ಇದನ್ನು ನೋಡಿದರೆ ಪ್ರಿಂಟ್ ಮಾಡುವಾಗ ಎಷ್ಟು ಚೆನ್ನಾಗಿ ಈ ತಪ್ಪು

ಗಳನ್ನು ತಿದ್ದುತ್ತಿದ್ದಾರೆ ಎಂಬುದು ಅರ್ಥವಾಗುತ್ತದೆ. ಆದುದರಿಂದ ಇನ್ನು ಮುಂದೆ ಈ ರೀತಿ ತಪ್ಪುಗಳಾಗುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನು ನೌಕರರ ಟ್ರಾನ್ಸ್‌ಫರ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಾದರೆ, ಕೆಲವು ಅಧಿಕಾರಿಗಳು ತಾವು ರಿಟೈರ್ ಆಗುವಾಗ ಇಲ್ಲವೇ ಬೇರೆ ಕಡೆಗೆ ಹೋಗುವಾಗ ತಮ್ಮ ಕೈ ಕೆಳಗಿನ ನೌಕರರನ್ನು ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡಿ ಹೋಗುವಂಥ ಒಂದು ಹವ್ಯಾಸ ಬೆಳೆದು ಬಂದಿದೆ. ಉದಾಹರಣೆಗೆ ಹೇಳುವುದಾದರೆ ಕೊಲಿಜಿಯೇಟ್ ಎಜುಕೇಷನ್‌ನ ಡೈರೆಕ್ಟರ್ ರವರು ನಿನ್ನೆಯ ದಿವಸ ರಿಟೈರ್ ಆದರು. ಅವರು ರಿಟೈರ್ ಆಗುವ ಮುನ್ನ ಅಂದರೆ ಮೊನ್ನೆಯ ದಿವಸ ಅನೇಕ ಟೀಚರ್ಸ್‌ನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡಿ ಅವರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನು ನೋಡಿದರೆ ಅನೇಕ ಜನ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವುದು, ಬೇಡವಾದವರಿಗೆ ಅನ್ಯಾಯ ಮಾಡುತ್ತಿದ್ದಾರೆ ಎನಿಸುತ್ತದೆ ಆದುದರಿಂದ ಈ ರೀತಿ ಆಗುವುದಕ್ಕೆ ಇನ್ನು ಮುಂದೆ ಸರ್ಕಾರ ದವರು ಅವಕಾಶವನ್ನು ಕೊಡಬಾರದೆಂದು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಾಮಾನ್ಯವಾಗಿ 3 ವರ್ಷ ಒಂದೇ ಕಡೆ ಇರುವಂಥವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ರೂಲ್ಸ್ ಇದೆ. ಆದರೆ ಈಗೀಗ ಒಂದು ವರ್ಷ ಅಥವಾ ಒಂದೂವರೆ ವರ್ಷ ಆಗುವುದರೊಳಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ.

ಶ್ರೀ ಎಂ. ವೆಂಕಟಲಿಂಗಯ್ಯ.—ಆದುದರಿಂದ ನಾನು ಹೇಳುವುದೇನೆಂದರೆ ಯಾವ ಅಧಿ ಕಾರಿಯೇ ಆಗಲಿ ತಾವು ರಿಟೈರ್ ಆಗುವ ಸಂದರ್ಭದಲ್ಲಾಗಲಿ, ಅಥವಾ ಬೇರೆ ಕಡೆಗೆ ಟ್ರಾನ್ಸ್ ಫರ್ ಆಗುವ ಸಂದರ್ಭದಲ್ಲಾಗಲಿ ತಮ್ಮ ಕೈಕೆಳಗಿನ ನೌಕರರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಅವಕಾಶಕೊಡಬಾರದೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರೈಮರಿ ಎಜುಕೇಷನ್ ವಿಷಯದಲ್ಲಿ ಒಂದು ಮಾತು ಹೇಳುವುದಾದರೆ, ಈ ಪ್ರೈಮರಿ ಸ್ಕೂಲ್ ಮಕ್ಕಳಿಗೆ ಇಟ್ಟಿರುವ ಪಠ್ಯ ಪುಸ್ತಕಗಳನ್ನು ನೋಡಿದರೆ ಹಿಂದೆ ಶಿಕ್ಷಣ ಪದ್ಧತಿ ಎಷ್ಟು ಸುಲಭವಾಗಿತ್ತೋ ಈ ಅಷ್ಟೇ ವಿಪರೀತವಾಗಿದೆ. ಈ ಮಕ್ಕಳು ಹೊರುವ ಪುಸ್ತಕಗಳ ಹೊರೆ ಬಹಳವಾಗಿದೆ. ಆದುದರಿಂದ ಇಷ್ಟೊಂದು ಪುಸ್ತಕಗಳನ್ನು ಆ ಮಕ್ಕಳು ಓದುವುದಕ್ಕೆ ಶಕ್ತಿ ಇದೆಯೋ, ಅಥವಾ ಅವುಗಳನ್ನು ಹೊರುವುದಕ್ಕೆ ಶಕ್ತಿ ಇದೆಯೋ ಎಂಬುದನ್ನು ಸರ್ಕಾರದವರು ನೋಡಿ ಅವರ ವಯಸ್ಸಿಗೆ ತಕ್ಕಂತೆ ಪುಸ್ತಕಗಳನ್ನು ಇಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕನ್ನಡದ ಬಗ್ಗೆ ಹೇಳುವುದಾದರೆ, ಕನ್ನಡಕ್ಕೆ ಪ್ರೋತ್ಸಾಹ ಕೊಡಬೇಕು, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ನಾವು ಹೇಳುತ್ತಲೇ ಬರುತ್ತಿದ್ದೇವೆ. ಇವತ್ತು ಪಿ.ಎಸ್.ಸಿ. ಯವರಾಗಲಿ, ಅಥವಾ ಇತರೇ ಇಲಾಖೆಯವರಾಗಲಿ ಅಭ್ಯರ್ಥಿಗಳನ್ನು ತೆಗೆದುಕೊಳ್ಳ ಬೇಕಾದರೆ ಅವರಿಗೆ ಮಾಡುವ ಪರೀಕ್ಷೆಗಳಲ್ಲಿ ಇಂಗ್ಲಿಷ್‌ನಲ್ಲೇ ಉತ್ತರಗಳನ್ನು ಬರೆಯಬೇಕಾಗಿದೆ. ಆದರೆ ನಾನು ಇಂಗ್ಲಿಷ್‌ನಲ್ಲಿ ಬರೆಯುವುದನ್ನು ಬೇಡವೆಂದು ಹೇಳುವುದಿಲ್ಲ. ಇಂಗ್ಲಿಷ್‌ನಲ್ಲಿ ಬರೆಯುವವರು ಅದರಲ್ಲಿ ಬರೆಯಲಿ, ಕನ್ನಡದಲ್ಲಿ ಬರೆಯುವವರು ಕನ್ನಡದಲ್ಲೇ ಬರೆಯಲಿ, ಇಲ್ಲವೇ ಎಲ್ಲರೂ ಕನ್ನಡದಲ್ಲೇ ಬರೆಯಲು ಅವಕಾಶವನ್ನು ಕೊಡಿ. ತಾವು ಈ ರೀತಿ ಮಾಡುವುದರಿಂದ ನಮ್ಮ ಕನ್ನಡಕ್ಕೆ ಒಂದು ಪ್ರೋತ್ಸಾಹವನ್ನು ಕೊಟ್ಟಂತಾಗುತ್ತವೆ. ಇನ್ನೊಂದು ನನ್ನ ಸಲಹೆ ಏನೆಂದರೆ ಈ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಗ್ಗೆ ಇಷ್ಟು ದಿವಸದೊಳಗಾಗಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಒಂದು ಪ್ಲಾನ್ ಹಾಕಿಕೊಂಡು ಅದರಂತೆ ಕೆಲಸ ಮಾಡಿ ಎಂದು ಹೇಳುತ್ತಾ, ಇನ್ನೂ ಅನೇಕ ವಿಷಯಗಳು ಮಾತನಾಡಬೇಕಾದ್ದು ಇದ್ದರೂ ಕೂಡ ಸಮಯ ಇಲ್ಲದ ಪ್ರಯುಕ್ತ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

† ಶ್ರೀ ಎಸ್. ಎಂ. ಯಾಹ್ಯಾ (ವಿಶ್ವವಿದ್ಯಾನಿಲಯ ಶಿಕ್ಷಣ ಹಾಗೂ ವಕ್ಫ್ ಶಾಖೆಗಳ ಮಂತ್ರಿಗಳು).—

ಮಾನ್ಯ ಅಧ್ಯಕ್ಷರೆ, ವಿದ್ಯಾಭ್ಯಾಸ ಸಂಸ್ಥೆಗಳ ವಿಚಾರದಲ್ಲಿ ಮತ್ತು ವಿದ್ಯಾಭ್ಯಾಸ ಪದ್ಧತಿ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದರ ಜೊತೆಗೆ ಒಳ್ಳೆಯ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಮತ್ತು ಅದೇ ರೀತಿಯಲ್ಲಿ ಟೀಕೆಗಳನ್ನೂ ಕೂಡ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸ ಬಹಳ ಮುಖ್ಯವಾದ ವಿಚಾರ. ಈ ವಿದ್ಯಾಭ್ಯಾಸ ವಿಚಾರದಲ್ಲಿ ಕೆಲವರಿಗೆ ಆಸಕ್ತಿ, ಮತ್ತೆ ಕೆಲವರಿಗೆ ಒಳ್ಳೆಯ ಅನುಭವ ಇದೆ. ಪ್ರತಿಯೊಬ್ಬ ನಾಗರೀಕನೂ ಕೂಡ ವಿದ್ಯಾಭ್ಯಾಸ ಇವತ್ತು ಯಾವರೀತಿ ನಡೆಯುತ್ತಿದೆ, ವಿದ್ಯಾ ಸಂಸ್ಥೆಗಳು ಯಾವ ರೀತಿ ನಡೆಯುತ್ತಿವೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ ಪ್ರತಿ ದಿನವೂ ತಮ್ಮ ಮಕ್ಕಳು ಓದುವುದನ್ನು ನೋಡುತ್ತಿದ್ದಾರೆ ಪ್ರತಿಯೊಬ್ಬ ನಾಗರೀಕನ ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುತ್ತಿರುವುದರಿಂದ ಈ ವಿದ್ಯಾ ಇಲಾಖೆ ಬಹಳ ಮಹತ್ವಪೂರ್ಣವಾದುದು ಎಂದು ಹೇಳಬಯಸುತ್ತೇನೆ. ನಮ್ಮ ವಿದ್ಯಾಭ್ಯಾಸ ಇಲಾಖೆಗೂ, ಬೇರೆ ಇಲಾಖೆಗೂ ಹೋಲಿಸಿ ನೋಡಿದರೆ ಇಡೀ ಸಮಾಜದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯಾಗಲಿ, ಅಥವಾ ಬದಲಾವಣೆಗಳಾಗಲಿ ಅದೆಲ್ಲಕ್ಕೂ ಮೂಲ ಕಾರಣ ಈ ವಿದ್ಯಾಭ್ಯಾಸ ಮತ್ತು ವಿದ್ಯಾ ಇಲಾಖೆಯ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

5-30 p. m.

ಅದಲ್ಲದೆ ವ್ಯಕ್ತಿತ್ವವನ್ನು ಬೆಳೆಸಬೇಕಾದರೂ ವಿದ್ಯೆಯಿಂದಲೇ ಆಗಬೇಕು. ಅದೇ ರೀತಿಯಲ್ಲಿ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡಬೇಕಾದರೂ ವಿದ್ಯೆಯು ಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ವಿದ್ಯಾ ಇಲಾಖೆಯು ಇನ್ನಿತರ ಇಲಾಖೆಗಳಿಗಿಂತ ಬೇರೆ ರೀತಿಯಲ್ಲಿರುತ್ತದೆ. ಅದಕ್ಕಾಗಿಯೇ ಈ ವಿದ್ಯಾ ವಿಚಾರದಲ್ಲಿ, ಜನ ಸಾಮಾನ್ಯರು ಹೆಚ್ಚು ಹೆಚ್ಚು ಆಸಕ್ತಿಯನ್ನು ತೆಗೆದುಕೊಳ್ಳುತ್ತಾ ಹೋಗುತ್ತಿರುತ್ತಾರೆ ವಿದ್ಯಾ ಇಲಾಖೆಯಲ್ಲಿ ವಿದ್ಯಾಭಿವೃದ್ಧಿಯ ಬಗ್ಗೆ ಯಾವ ರೀತಿಯ ಹೊಣೆಗಾರಿಕೆ ಇದೆ ಅದು ಸರ್ಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಇತರ ಇಲಾಖೆಗಳಿಗಿಂತ ಸರ್ಕಾರದ್ದು ಸಂಪೂರ್ಣವಾಗಿ ಹೊಣೆಗಾರಿಕೆ ಇರುತ್ತದೆ. ವಿದ್ಯಾ ವಿಚಾರದಲ್ಲಿ ಹೊಣೆಗಾರಿಕೆ ಸರ್ಕಾರದ್ದು ಇದ್ದರೂ ಅದೇ ರೀತಿಯಲ್ಲಿ ಅಧ್ಯಾಪಕರದು ಇರುತ್ತದೆ, ವಿದ್ಯಾರ್ಥಿಗಳದು ಇರುತ್ತದೆ, ಮತ್ತು ಸಮಾಜದ್ದೂ ಹೊಣೆಗಾರಿಕೆ ಇರುತ್ತದೆ. ಈ ಎಲ್ಲ ಕಾರಣಗಳಿಂದ ವಿದ್ಯೆ ಯಾವುದು ಇದೆ ಇದು ಇತರ ಇಲಾಖೆಗಳಿಗಿಂತ ಬೇರೆಯಾಗಿದೆ. ವಿದ್ಯಾ ಹೊಣೆಗಾರಿಕೆ ಬರೇ ಸರ್ಕಾರದ್ದು ಎಂದು ಹೇಳಿದರೆ ತಪ್ಪಾಗುತ್ತದೆ, ಸರ್ಕಾರದ ಹೊಣೆಗಾರಿಕೆಯೂ ಇದೆ, ಇದರ ಜೊತೆಗೆ ಸಮಾಜದ್ದು ಮತ್ತು ಅಧ್ಯಾಪಕರ ಹೊಣೆಗಾರಿಕೆಯು ಬಹಳಷ್ಟು ಇದೆ. ಈ ಕಾರಣದಿಂದ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು, ಸಮಾಜದವರು ಎಲ್ಲರೂ ಪ್ರಯತ್ನ ಪಡಬೇಕಾದುದು ಸ್ವಾಭಾವಿಕವಾದ ವಿಚಾರ. ಕೆಲವು ವರ್ಷಗಳಿಂದೀಚೆಗೆ ವಿದ್ಯೆ ಬಹಳಷ್ಟು ಹರಡಿದೆ, ಇದು ಹೆಚ್ಚು ಹೆಚ್ಚು ಹರಡಿದಂತೆಲ್ಲ ಸ್ಟ್ಯಾಂಡರ್ಡ್ ಕಡಿಮೆಯಾಗಿವೆ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಇಲ್ಲವೆಂದು ಹೇಳಲಿಕ್ಕೂ ಬರುವುದಿಲ್ಲ. ಸರ್ಕಾರದ ನೀತಿ ಇದರಲ್ಲಿ ಸ್ಪಷ್ಟವಾಗಿದೆ. ಅದಷ್ಟು ವಿದ್ಯೆ ಹರಡಬೇಕು ಇದರಲ್ಲಿ ಸ್ಟ್ಯಾಂಡರ್ಡ್ ಇಟ್ಟುಕೊಳ್ಳಬೇಕೆಂದು ಇದೆ, ಇದು ಸರ್ಕಾರದ ನೀತಿಯಾಗಿರುತ್ತದೆ. There should be growth and at the same time we should maintain the standard. ಕಳೆದ ಕೆಲವು ವರ್ಷಗಳಿಂದ ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್ ರಿಸರ್ಚ್ ಟ್ರೈನಿಂಗ್ ಅಕಾಡೆಮಿಕ್ ವಿಂಗ್ ಎಂದು ಮಾಡಿದ್ದಾರೆ ವಿದ್ಯೆಯ ಸ್ಟ್ಯಾಂಡರ್ಡ್ ಹೋಗಬಾರದು, ಅದು ಇಳಿಯಬಾರದು ಎಂದು ಹೇಳಿ ಸರ್ಕಾರದವರು ಕೆಲವು ವಿಚಾರಗಳನ್ನು ತೆಗೆದುಕೊಂಡು ಒಂದು ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಷನ್ ರೀಸರ್ಚ್ ಟ್ರೈನಿಂಗ್ ಎಂದು ಮಾಡಿದೆ. ಒಂದು ಕಡೆ ವಿದ್ಯಾಭ್ಯಾಸ ಇನ್ನೂ ಮುಂದೆ ಹೋಗಬೇಕು, ಇನ್ನೊಂದು ಕಡೆ ಬಡವರಿಗೆ ಹೆಚ್ಚು ಹೆಚ್ಚು ವಿದ್ಯೆ ಸಿಕ್ಕಲಿಕ್ಕೆ ಅವಕಾಶವಾಗಬೇಕು, ಮತ್ತು ಇನ್ನೊಂದು ಕಡೆ ಅದರ ಗುಣ ಮಟ್ಟವನ್ನು ಕಾಪಾಡಬೇಕು ಎಂದು

ಸರ್ಕಾರದವರು ಬಹಳವಾಗಿ ಪ್ರಯತ್ನ ಪಡುತ್ತಿದ್ದಾರೆ. ಸ್ಟ್ಯಾಂಡರ್ಡ್ ಕಡಿಮೆಯಾಯಿತೆಂದು ಬೇಸರ ಪಡಬೇಕಾಗಿಲ್ಲ. ಇದು ಖಂಡಿತವಾಗಿಯೂ ಆಗುತ್ತದೆಂದು ತಿಳಿಸುತ್ತೇನೆ. ಅದೇ ರೀತಿಯಲ್ಲಿ ಸರ್ಕಾರದವರು ವಿಧ್ಯೆ ಹರಡುವುದಕ್ಕೆ ವಿಧ್ಯಾ ಇಲಾಖೆಯವರು ಬಹಳಷ್ಟು ಸಾಧನೆಗಳನ್ನು ಮಾಡಿದ್ದಾರೆ. The achievements are very many. The institution have come up in various places in rural areas also. Similarly, new hostels have been established. This year we have completed the construction of hostels in Shimoga, Tumkur and Mysore. In Mangalore, Raichur, Chitradurga, Belgaum Bangalore, Gulbarga, Bellary, Dharwar and other places constructions are going on. So, there are achievements in various ways, not only with regard to the spread of education but also connected matters of education. The achievement is something marvelous. Therefore, in Karnataka we are very proud that the education has spread and many new instutions have come up ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತಿತರ ಸ್ನೇಹಿತರೂ ಸಹ ಒಂದು ಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ಕೆಲವು ಖಾಸಗಿ ಸಂಸ್ಥೆಗಳಲ್ಲಿ ಬಹಳಷ್ಟು ವ್ಯಾಪಾರ ನಡೆಯುತ್ತಿದೆ, ಬಹಳಷ್ಟು ತಪ್ಪು ವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಕೆಲವು ಖಾಸಗಿ ಶಾಲೆಗಳಲ್ಲಿ ಖಂಡಿತವಾಗಿಯೂ ತಪ್ಪು ವ್ಯವಹಾರ ನಡೆಯುತ್ತಿದೆ. ಹೆಚ್ಚಾಗಿ ಇದು ಪಟ್ಟಣದಲ್ಲಿಯೇ ಸೀಮಿತವಾಗಿದೆ. ಈಗ ನಮ್ಮ ಎದುರು ಇರುವ ಪ್ರಶ್ನೆ ಎಂದರೆ ಖಾಸಗಿ ಸಂಸ್ಥೆಗಳು ಇರಬೇಕೋ ಇರಬಾರದೋ ಎನ್ನುವುದು. ಕೆಲವರು ಬೇಡವೆಂದು ಹೇಳುವವರು ಇದ್ದಾರೆ. ಮಾನ್ಯ ಚನ್ನಪ್ಪನವರು ಮತ್ತಿತರರು ಬೇಕು ಎಂದು ಹೇಳುವವರು ಇದ್ದಾರೆ. ಅದಕ್ಕಾಗಿ ಸರ್ಕಾರದ ಡೋರಣೆ ಏನು ಎನ್ನುವುದು ಬಹಳ ಕ್ಲಿಯರ್ ಆಗಿರುತ್ತದೆ. ಈ ಖಾಸಗೀ ಸಂಸ್ಥೆಗಳು ನೆನ್ನೆ ಮೊನ್ನೆ ಹುಟ್ಟಿದಂಥವು ಅಲ್ಲ. ಕೆಲವು ಉತ್ತಮವಾದ ಖಾಸಗಿ ಸಂಸ್ಥೆಗಳು ಇರುತ್ತವೆ. ಬಹಳ ವರ್ಷಗಳಿಂದಲೂ ಅಂದರೆ ಬ್ರಿಟೀಷರ ಕಾಲದಿಂದಲೂ ಮುಂದೆ ಬಂದು ಬಹಳಷ್ಟು ಸೇವೆಯನ್ನು ಮಾಡಿಕೊಂಡು ಬಂದಿರುತ್ತವೆ. ಖಾಸಗೀ ಸಂಸ್ಥೆಗಳನ್ನು ಬೆಳೆಸಲಿಕ್ಕೆ ಹಣವನ್ನು ಕೊಟ್ಟವರು ಇದ್ದಾರೆ, ಜೀವನವನ್ನೇ ತ್ಯಾಗಮಾಡಿದವರು ಇದ್ದಾರೆ, ಈ ರೀತಿ ನಮ್ಮ ದೇಶದಲ್ಲಿ ಎರಡು ಸಂಸ್ಥೆಗಳು ಬೆಳೆದುಕೊಂಡು ಬರುತ್ತಿದೆ. ಒಂದು ಕಡೆ ಖಾಸಗಿ ಸಂಸ್ಥೆಗಳು ಬೆಳೆದುಕೊಂಡು ಬರುತ್ತಿದ್ದರೆ ಇನ್ನೊಂದು ಕಡೆ ಸರ್ಕಾರಿ ಸಂಸ್ಥೆಗಳೂ ಬೆಳೆದುಕೊಂಡು ಬರುತ್ತಿದೆ. ನಮ್ಮ ಸರ್ಕಾರದ ನೀತಿ ಇದೆಲ್ಲ ಖಾಸಗಿ ಸಂಸ್ಥೆಗಳನ್ನು ತೆಗೆದುಹಾಕಬೇಕು ನ್ಯಾಷನಲೈಸ್ ಮಾಡಬೇಕು ಎಂದು ಇಲ್ಲ. ಕೆಟ್ಟ ಖಾಸಗಿ ಸಂಸ್ಥೆಗಳನ್ನು ನೋಡಿಕೊಂಡು ಇರಬೇಕೆಂದೂ ಇಲ್ಲ. ಕೆಟ್ಟ ಸಂಸ್ಥೆಗಳು ಇದ್ದರೆ ಅದನ್ನು ಕುರಿತು ವಿಚಾರಣೆ ಮಾಡಿ ತಪ್ಪಿದ್ದರೆ ಅದನ್ನು ತೆಗೆಯಬೇಕೆಂದು ಇದ್ದೇವೆಯೇ ಹೊರತು ಖಾಸಗಿ ಸಂಸ್ಥೆಗಳನ್ನು ನ್ಯಾಷನಲೈಸ್ ಮಾಡಬೇಕು, ಟೇಕ್ ಓವರ್ ಮಾಡಬೇಕು ಎಂದು ಸರ್ಕಾರದ ನೀತಿಯಲ್ಲವೆಂದು ಹೇಳಬಯಸುತ್ತೇನೆ. ಕೆಲವು ಸಂಸ್ಥೆಗಳು ಬಹಳ ವರ್ಷಗಳಿಂದ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿಕೊಂಡು ಬಂದಿರುತ್ತವೆ ಅವುಗಳಿಗೆ ಬೇಸರವಾಗುವಂತೆ ನಡೆದುಕೊಳ್ಳುವುದು ಸರ್ಕಾರದ ನೀತಿಯಲ್ಲ. It is Highly sentimental. Those who have sacrificed and those who have contributed know the value of good private institutions. ಈ ಕಾರಣದಿಂದ ಸರ್ಕಾರದ ನೀತಿ ಏನೆಂದರೆ ಸರ್ಕಾರದ ಸಂಸ್ಥೆಗಳು ಇರಬೇಕು, ಮತ್ತು ಖಾಸಗಿ ಸಂಸ್ಥೆಗಳು ಇರಬೇಕೆಂಬುದು. ಸರ್ಕಾರಿ ಸಂಸ್ಥೆಗಳು ಚೆನ್ನಾಗಿ ನಡೆಯಬೇಕು, ಅದೇ ರೀತಿಯಲ್ಲಿ ಖಾಸಗಿ ಸಂಸ್ಥೆಗಳು ಚೆನ್ನಾಗಿ ನಡೆಯಬೇಕು. ಕೆಲವು ಖಾಸಗಿ ಸಂಸ್ಥೆಗಳಲ್ಲಿ ಬಹಳಷ್ಟು ತಪ್ಪು ನಡೆಯುತ್ತಿದೆ. ಶ್ರೀ ಎಸ್. ವಿ. ನಾಯ್ಕರ್ ಮತ್ತಿತರರು ಹೇಳಿದ್ದಾರೆ. ಇಂಜಿನೀಯರಿಂಗ್ ಮತ್ತಿತರ ಸಂಸ್ಥೆಗಳಲ್ಲಿ ಬಹಳಷ್ಟು ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇಂಜಿನೀಯರಿಂಗ್ ಕಾಲೇಜ್‌ಗಳ ವಿಷಯವಾಗಿ ಹೇಳುವುದಾದರೆ, ಎಲ್ಲ ಕಡೆಯೂ ಈ ರೀತಿಯಾದ ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದರೆ ಅದು ತಪ್ಪಾಗುತ್ತದೆ. ನಮ್ಮಲ್ಲಿ 15 ಇಂಜಿನೀಯರಿಂಗ್ ಕಾಲೇಜುಗಳು ಇದೆ.

ಇದರಲ್ಲಿ 2 ಸರ್ಕಾರಿ ಕಾಲೇಜ್‌ಗಳಾಗಿವೆ. ಒಂದು ಯೂನಿವರ್ಸಿಟಿ ಕಾಲೇಜ್ ಆಗಿರುತ್ತದೆ. ಬಾಕಿ ಉಳಿದಿರುವುದು 12ರಲ್ಲಿ 8 ಗ್ರಾಂಟ್ ಇನ್ ಏಡೆಡ್ ಇಂಜಿನೀಯರಿಂಗ್ ಕಾಲೇಜ್ ಆದರೆ 4 ನಾನ್ ಗ್ರಾಂಟ್ ಇನ್ ಏಡೆಡ್ ಇಂಜಿನೀಯರಿಂಗ್ ಕಾಲೇಜ್‌ಗಳು ಇರುತ್ತವೆ. ಸರ್ಕಾರಿ ಯೂನಿವರ್ಸಿಟಿ ಕಾಲೇಜ್‌ನಲ್ಲಿ ಯಾವ ಕ್ಯಾಪಿಟೇಷನ್ ಫೀಸನ್ನು ತೆಗೆದುಕೊಳ್ಳುವುದಿಲ್ಲ. ನೇರವಾಗಿ ಕೆಲವು ಗೈಡ್ ಲೈನ್ಸ್ ಪ್ರಕಾರ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುತ್ತಿದೆ. ಎಂಟು ಏಡೆಡ್ ಇನ್ಸ್ಟಿಟ್ಯೂಶನ್‌ಗಳಲ್ಲಿ ಶೇಕಡಾ 80 ರಷ್ಟು ಯಾವ ಕ್ಯಾಪಿಟೇಷನ್ ಫೀಸ್ ಇಲ್ಲದೆ ಮೆರಿಟ್ ಮೇಲೆ ಸೀಟ್ಸನ್ನು ಕೊಡುತ್ತಿದ್ದಾರೆ ಇನ್ನು 20 ರಷ್ಟು ಮ್ಯಾನೇಜ್‌ಮೆಂಟಿಗೆ ಬಿಟ್ಟಿರುತ್ತದೆ. ಯಾರು ಸರ್ಕಾರದ ಧನ ಸಹಾಯ ತೆಗೆದುಕೊಳ್ಳುತ್ತಿದ್ದಾರೆ ಅವರು ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳದೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡುತ್ತಿದ್ದಾರೆ. ಇತರ ಸಂಸ್ಥೆಗಳಲ್ಲಿ ಇದರಿಂದ ಶೋಷಣೆ ಮಾಡಿದಂತಾಗುವುದಿಲ್ಲವೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲವು ಸಂಸ್ಥೆಗಳಲ್ಲಿ ಎಕ್ಸ್‌ಪ್ಲಾಯಿಟೇಷನ್ ಆಗುತ್ತಾ ಇದೆ. ಅದಕ್ಕಾಗಿ ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಇದನ್ನು ರೆಗ್ಯುಲೇಟ್ ಮಾಡಬೇಕು. ಆ ಸಂಸ್ಥೆಗಳಿಗೆ ಧನಸಹಾಯ ಮಾಡಲಿಲ್ಲ ಎಂದರೆ ಅವರು ಏನು ಬೇಕಾದರೂ ಮಾಡಬಹುದು, ಯಾವ ರೀತಿ ಬೇಕಾದರೂ ಎಕ್ಸ್‌ಪ್ಲಾಯಿಟೇಷನ್ ಮಾಡಬಹುದು : ತನಗೆ ಬೇಕಾದ ರೀತಿಯಲ್ಲಿ ಅವನ್ನು ನಡೆಸಿಕೊಂಡು ಹೋಗಬಹುದು. ಅದಕ್ಕಾಗಿ ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಸರ್ಕಾರದವರು ಇದನ್ನು ರೆಗ್ಯುಲೇಟ್ ಮಾಡಬೇಕಾಗಿದೆ. ಅದೇ ರೀತಿಯಲ್ಲಿ ರೆಗ್ಯುಲೇಟ್ ಮಾಡುವಂಥ ಕೆಲಸವನ್ನು ಈ ವರ್ಷ ಸರ್ಕಾರದವರು ಕೈಗೊಂಡಿದ್ದಾರೆ.

ಇನ್ನು ಅಧ್ಯಾಪಕರ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದವರು ಅಧ್ಯಾಪಕರಿಗೆ ಬಹಳಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಿಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಅವರಿಗೆ ಬೇಕಾದಂತ ವೇತನವನ್ನು ಹೆಚ್ಚು ಮಾಡಿ ಕೊಟ್ಟಿದ್ದಾರೆ. ಈ ಅಧ್ಯಾಪಕರುಗಳಲ್ಲಿ ಬಹಳ ಒಳ್ಳೆಯವರೂ ಇದ್ದಾರೆ. ಈ ಅಧ್ಯಾಪಕರ ವಿಷಯದಲ್ಲಿ ಟೀಕೆ ಬರುವುದು ಸ್ವಾಭಾವಿಕ. ನಮ್ಮಲ್ಲಿ ಸಾವಿರಾರು ಅಧ್ಯಾಪಕರುಗಳು ಇರುವಾಗ ಕೆಲವರು ತಪ್ಪು ದಾರಿಗೆ ಹೋಗುವಂತಹವರು ಇದ್ದಾರೆ. ಹೆಚ್ಚು ಜನ ಅಧ್ಯಾಪಕರಲ್ಲಿ ಅಕಾಡೆಮಿಕ್ ಮೈಂಡ್‌ನವರು ಇದ್ದಾರೆ, ಒಳ್ಳೆಯ ರೀಸರ್ಚ್ ಮಾಡತಕ್ಕಂಥವರು ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮಲ್ಲಿ ಉತ್ತಮರಾದ ಅಧ್ಯಾಪಕರು ಇದ್ದಾರೆ. ಈ ಅಧ್ಯಾಪಕರುಗಳು ಅಕಾಡೆಮಿಕ್ ಮೈಂಡ್ ಇಟ್ಟುಕೊಂಡು ವಿದ್ಯಾಭ್ಯಾಸದ ಮಟ್ಟವನ್ನು ಏರಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಅವರಲ್ಲಿ ಪೊಲಿಟಿಕಲ್ ಮೈಂಡ್ ಇರಬಾರದು ಎಂಬುದನ್ನೂ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಕಾಡೆಮಿಕ್ ವಿದ್ಯೆಯಲ್ಲಿ ಇರುವವರು ಪೊಲಿಟಿಕಲ್ ಮೈಂಡ್ ಇಟ್ಟುಕೊಂಡರೆ ಆ ಒಂದು ವಿದ್ಯೆಕ್ಕೆ ತೊಂದರೆಯಾಗುತ್ತದೆ, ಆ ವಿದ್ಯೆಗೆ ಬಹಳಷ್ಟು ನಷ್ಟವಾಗುತ್ತದೆಂದು ಎಲ್ಲರೂ ವಿಚಾರ ಮಾಡುತ್ತಿದ್ದಾರೆ. ನಾನು ಹೇಳುತ್ತೇನೆ ಕೆಲವು ಅಧ್ಯಾಪಕರಲ್ಲಿ ಪೊಲಿಟಿಕಲ್ ಮೈಂಡ್ ಇರಬಹುದು. ಅಂತಹವರನ್ನು ನಾನು ಕೇಳಿಕೊಳ್ಳುವುದೇನೆಂದರೆ ಆ ರೀತಿಯ ಪೊಲಿಟಿಕಲ್ ಮೈಂಡ್ ಇಟ್ಟುಕೊಳ್ಳಬೇಡಿ ಎಂದು. ಅಧ್ಯಾಪಕರು ಅಕಾಡೆಮಿಕ್ ಮೈಂಡ್ ಇಟ್ಟುಕೊಂಡು ಕೆಲಸ ಮಾಡಿದರೆ ಅವರು ಮಾಡುವಂತಹ ಸೇವೆ ಬಹಳಷ್ಟು ದೊಡ್ಡ ಸೇವೆ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಕೆಲವು ಖಾಸಗೀ ಸಂಸ್ಥೆಗಳಲ್ಲಿ ಸಂಬಳಗಳು ಸರಿಯಾಗಿ ಸಿಕ್ಕುವುದಿಲ್ಲ, ಕೆಲವು ಕಡೆ ಟೀಚರ್ಸ್‌ಗೆ ತೊಂದರೆಯಾಗುತ್ತದೆ ಎಂದು ತಿಳಿದು ಬಂದದ್ದರಿಂದ ಸರ್ಕಾರದವರು ಕೆಲವು ತಿಂಗಳುಗಳ ಹಿಂದೆ ದೊಡ್ಡ ದೊಡ್ಡ ಕಾಲೇಜುಗಳಿಗೆ 80 ಪರ್ಸೆಂಟ್ ಗ್ರಾಂಟನ್ನು ಕೊಡುತ್ತಿದ್ದಾರೆ. ಅವರಿಗೆ ಈ ಗ್ರಾಂಟ್ ಬ್ಯಾಂಕ್ ಮುಖಾಂತರ ಸಿಕ್ಕುವ ಹಾಗೆ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಖಾಸಗೀ ಕಾಲೇಜುಗಳು 238 ಇದೆ. ಸರ್ಕಾರಿ ಕಾಲೇಜುಗಳು 23 ಮಾತ್ರ ಇದೆ. 138 ಏಡೆಡ್ ಇನ್ಸಿಟ್ಯೂಷನ್ಸ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೆ. ಅಲ್ಲಿರುವ ಅಧ್ಯಾಪಕರುಗಳಿಗೆ ಸರಿಯಾದ ವೇತನ ಸಿಕ್ಕಬೇಕು, ಅದೇ ರೀತಿಯಲ್ಲಿ ಪ್ಲಸ್ ಟು ಸ್ಟೇಜ್‌ನಲ್ಲಿರುವ ಸಂಸ್ಥೆಗಳ ಅಧ್ಯಾಪಕರುಗಳಿಗೂ ಸರಿಯಾದ ಸಂಬಳ ಸಕಾಲಕ್ಕೆ ಸಿಕ್ಕಬೇಕು ಎಂಬುದೇ ಸರ್ಕಾರದ ಉದ್ದೇಶವಾಗಿದೆ. ಆದರೆ ಕೆಲವು ಕಡೆ ಖಾಸಗೀ ಸಂಸ್ಥೆಗಳಲ್ಲಿ ಏನೋ ತೊಂದರೆಯಾಗಿ ಕಾಂಟ್ರಿಬ್ಯೂಷನ್ ಸಿಕ್ಕುವುದಿಲ್ಲ, ಇತರ ರಿಸೋರ್ಸಸ್ ಇರುವುದಿಲ್ಲ, ಆ ಕಾರಣದಿಂದ ಸಂಬಳವನ್ನು ಸಕಾಲಕ್ಕೆ ಕೊಡುವುದಿಲ್ಲ. ಕೆಲವು ಸಲ 1-2-3 ತಿಂಗಳು ತಡವಾಗಿ ಸಿಕ್ಕುತ್ತದೆ. ಅದೇ ರೀತಿಯಲ್ಲಿ ಕೆಲವು ಖಾಸಗೀ ಸಂಸ್ಥ

ಗಳಲ್ಲಿ ಮಿಸ್ ಡೈರೆಕ್ಟ್ ಆಗಿ, ಮಿಸ್ ಅಪ್ರೋಪ್ರಿಯೇಟ್ ಆಗಿ ಅಧ್ಯಾಪಕರುಗಳಿಗೆ ಸಂಬಳ ಸಿಕ್ಕದ ಉದಾಹರಣೆಗಳೂ ಇದೆ. ಈ ರೀತಿ ನಮ್ಮ ಅಧ್ಯಾಪಕರುಗಳಿಗೆ, ಲೆಕ್ಚರರ್‌ಗಳಿಗೆ ತೊಂದರೆಯಾಗಬಾರದೆಂದು ಸರ್ಕಾರ ಬಯಸುತ್ತದೆ. ಅವರಿಗೆ ಸರಿಯಾದ ಸಂಬಳ ಸರಿಯಾದ ರೀತಿಯಲ್ಲಿ, ಸರಿಯಾದ ಸಮಯದಲ್ಲಿ ಸಿಕ್ಕಬೇಕು ಎಂಬುದೇ ಸರ್ಕಾರದ ಉದ್ದೇಶವಾಗಿದೆ. ಅದಕ್ಕಾಗಿ ಸರ್ಕಾರದವರು ಈ ವಿಚಾರದಲ್ಲಿ 80 ಪರ್ಸೆಂಟ್ ನೆಟ್ ಡೆಫ್ಯಸಿಟ್ ಕೊಡುತ್ತಿದ್ದೇವೆ. ಅದ್ದರಿಂದ ಇನ್ನು ಹೆಚ್ಚು ಖಾಸಗೀ ಸಂಸ್ಥೆಗಳನ್ನು ಹಾಕುವುದಕ್ಕೆ ಬರುವುದಿಲ್ಲ. ನಮಗೆ ಸರಿಯಾದ ಸಂಬಳ ಸಿಕ್ಕುತ್ತಿಲ್ಲ ಎಂಬ ವಾದಗಳನ್ನು ನಾವು ಹೆಚ್ಚಾಗಿ ಕೇಳುತ್ತಿರುವುದರಿಂದ ಈ ಅಧ್ಯಾಪಕರುಗಳು ಮತ್ತು ಲೆಕ್ಚರರ್‌ಗಳಿಗೆ ಸರಿಯಾದ ಸಂಬಳ ಸಿಕ್ಕಬೇಕು ಎಂದು ಹೇಳಿ ಈ ಪ್ರೈವೈಟ್ ಏಡೆಡ್ ಇನ್‌ಟ್ಯೂಷನ್‌ಗೆ ಇನ್ನೂ ಹೆಚ್ಚಿನ ಧನ ಸಹಾಯವನ್ನು ಕೊಡುವುದಕ್ಕೆ ಸರ್ಕಾರದವರು ತಯಾರು ಇದ್ದಾರೆ.

In regard to private aided institutions, in principle the Government will bear the additional burden so that the government can take the salary burden. The Government can see that the entire salary is paid; but whatever fees collection the institutions will make, they should give it to the government. As a matter of principle, government will agree to bear the burden of paying the salary to the teachers of the aided paivate institutions ; but they should also give us whatever the standard fees they collect thereby both the government and the private insbitutions can co-operate.

The demand from some of the Hon'ble Member is that the salary should be paid directly by cheque system. Government is seriously considering to bear the burden of paying the full salary to the teachers of the aided institutions and would like to see that they got their salaries properly.

SRI T.R. SHAMANNA.—Some managements would agree to your proposal but others do not.

SRI S.M. YAHYA.—Therefore the Government would like take the teachers and the managements in confidence before a formula for paying the full salaries to the teachers of the aided schools is announced. Some of the managements are not in favour of paying by cheques or even taking the amount for payment of full salaries. So I would soon convene a meeting of the managements and discuss with them. At the government level we are evolving a formula to help the teachers of the private managements and the government is willing to take additional financial burden in this matter. So a new scheme is announced by the government, then the entire grant-in-aid would be simplified. That is the purpose of this new scheme Now the Grant-in-aid Code is a very very old Code mostly ununderstandable and therefore we would like have a simple Grant-in-aid Code. For that purpose we are evolving a new scheme. The government would like to take the additional burden so the teachers of the

private institutions of higher learning would get their salaries in time. ಅದೇ ರೀತಿಯಲ್ಲಿ ಯೂನಿವರ್ಸಿಟಿಗಳ ಬಗ್ಗೆ ಮಾನ್ಯ ಕೋಣಂದೂರು ಲಿಂಗಪ್ಪನವರು ಮತ್ತು ಇನ್ನೂ ಇಬ್ಬರು ಮಾನ್ಯ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಎಲೆಕ್ಷನ್‌ನಲ್ಲಿ ಸೋತುಹೋದವರನ್ನೆಲ್ಲಾ ತೆಗೆದುಕೊಂಡು ಬಂದು ಪ್ರೊಫೆಸರನ್ನಾಗಿ ಮಾಡಿದ್ದಾರೆ. ಆ ವಿಷಯ ಹೇಳಿ.

ಶ್ರೀ ಎಸ್.ಎಂ. ಯಾಹ್ಯಾ.—ಬುದ್ಧಿವಂತರು ಸಾಮಾನ್ಯವಾಗಿ ಚುನಾವಣೆಯಲ್ಲಿ ಸೋಲುತ್ತಾರೆ. ಅವರಿಗೆ ನಿಮ್ಮಂತಹವರನ್ನು ಫೇಸ್ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಮಾನ್ಯ ಶ್ರೀ ಮಾಲಿಯವರು ಉಪಕುಲಪತಿಗಳಾಗಿ ಬಹಳಷ್ಟು ಸೇವೆ ಸಲ್ಲಿಸಿ ಉತ್ತಮ ಕೆಲಸವನ್ನು ಮಾಡಿರುವವರು; ಒಳ್ಳೆ ಎಜುಕೇಷನಲಿಸ್ಟ್. ಆ ದೃಷ್ಟಿಯಿಂದ ತಾವು ಅವರನ್ನು ನೋಡಬೇಕೇ ಹೊರತು ರಾಜಕೀಯ ದೃಷ್ಟಿಯಿಂದ ನೋಡಿದರೆ ಅದು ತಪ್ಪಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಹಾಗೇ ರಾಜಕೀಯ ದೃಷ್ಟಿಯಿಂದ ಮಾಡಿರುವವರು ನೀವು ?

ಶ್ರೀ ಎಸ್.ಎಂ. ಯಾಹ್ಯಾ.—ನನಗೆ ವಿಚಾರ ಗೊತ್ತಿದೆ. ನೀವು ರಾಜಕೀಯ ದೃಷ್ಟಿಯಿಂದ ಮಾತ್ರ ನೋಡಬೇಕು. ಚುನಾವಣೆಯಲ್ಲಿ ಸೋತರೂ ಅದು ಒಂದು ಕ್ರೆಡಿಟ್ ಎಂದು ತಿಳಿದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅದೇ ರೀತಿ ನಮ್ಮ ರಾಜ್ಯದಲ್ಲಿರುವ ಗೋಪಾಲಕೃಷ್ಣ ಅಡಿಗರು, ಕೆ.ವಿ. ಪುಟ್ಟಪ್ಪನವರು ಇಂಥವರನ್ನೂ ಉಪಯೋಗಿಸಿಕೊಳ್ಳಿ.

Sri S.M. Yahya.—We have all the respect for their learning. ಇನ್ನು ಯೂನಿವರ್ಸಿಟಿ ಸಿಂಡಿಕೇಟ್, ಅಕಡೆಮಿಕ್ ಕೌನ್ಸಿಲ್ ಇವುಗಳು ಬೇಗ ಆಗಬೇಕೆಂದು ಹೇಳಿದ್ದಾರೆ. ಸರ್ಕಾರದವರೂ ಸಹ ಆದಷ್ಟು ಬೇಗ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನೂ ಯಾತಕ್ಕೆ ಆಗಲಿಲ್ಲ ?

ಶ್ರೀ ಎಸ್.ಎಂ. ಯಾಹ್ಯಾ.—ಯಾತಕ್ಕೆ ಇನ್ನೂ ಆಗಲಿಲ್ಲ ಎನ್ನುವುದಕ್ಕೆ ಕಾರಣ ಈ ಸದನದಲ್ಲಿ ಅನೇಕ ಸಾರಿ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಜಯಪ್ರಕಾಶ್ ನಾರಾಯಣ್ ಅವರೂ ಕೂಡ ಆ ಬಗ್ಗೆ ಹೇಳಿದ್ದಾರೆ. ಕಾನೂನಿನಲ್ಲಿ ಸ್ವಲ್ಪ ಲೋಪದೋಷಗಳು ಬಂದಿರುವುದರಿಂದ ತಡವಾಗಿದೆ. ಕೆಲವು ನಾಮಿನೇಷನ್ಸ್ ಅನೌನ್ಸ್ ಮಾಡಿದ್ದಾರೆ. ಇನ್ನು ಕೆಲವು ನಾಮಿನೇಷನ್ಸ್ ಎಲ್ಲ ಸ್ಟೂಡೆಂಟ್‌ಗಳಿಗೆ ಸಂಬಂಧಪಟ್ಟದ್ದು ಒಂದು ವಾರದಲ್ಲಿ ಅನೌನ್ಸ್ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಎಲ್ಲ ಪೂರ್ತಿ ಕಾನ್‌ಸ್ಟಿಟ್ಯೂಟ್ ಆದಮೇಲೆ ಯಾವರೀತಿ ಮಾಡಬೇಕೋ ಹಾಗೆ ಮಾಡುತ್ತೇವೆ. ಪುನಃ ಕಾನೂನಿನಲ್ಲಿ ದೋಷ ಕಂಡು ಬಂದರೆ ನಿಮ್ಮ ಎದುರಿಗೆ ಪುನಃ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಯೂನಿವರ್ಸಿಟಿ ಬಾಡೀಸ್ ಮಾಡುವುದಕ್ಕೆ ತಡಮಾಡದೆ ಸರ್ಕಾರ ಎಲ್ಲ ಕ್ರಮಗಳನ್ನೂ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಪಿ.ಯು.ಸಿ. ಬೋರ್ಡ್ ವಿಚಾರದಲ್ಲಿ ಮಾನ್ಯ ರುದ್ರಪ್ಪನವರು, ಶಾಮಣ್ಣನವರು ಹೇಳಿದ್ದಾರೆ. ಈ ವಿಚಾರದಲ್ಲಿ—

We must view it very dispassionately. It is not the prestige question. We must have this +2 stages in the state in order to have better discipline and also there will be more respect for the parents and teachers. Therefore, what we have followed is the recommendation of the Education Commission. And in today's Deccan Herald, there is a very good article as to whether this +2 stages should be with the secondary Education or with the University. In fact the analysis would show that out of 501 + 2 stage institutions 253 are in High Schools only, 61 are only in independent Junior Colleges and

187 are in the First Grade Colleges. It is not that all the +2 stage Colleges are independent Colleges. It may be in Bangalore city or in some other places. This +2 stages may be independent College or First Grade College. But majority of the 257 are attached to High Schools. This is an important aspect. I don't want to give my views; there may be number of reasons. We don't want to abolish this PUC education. What we require is that there must be a system for this. There is so much anomaly in this which is not even a statutory body. Some institutions are attached to schools which will be governed by school's grant-in-aid code and some are attached to the Colleges which will be governed by the grant-in-aid code attached to the Director of Collegiate Education. For that an expert committee has been constituted. Whatever recommendation they make, the Government will consider those recommendations.

ಇನ್ನು ಮಾನ್ಯ ಸದಸ್ಯರಾದ ವೆಂಕಟರಾಯಪ್ಪನವರು ಮತ್ತಿತರು ಬಿ.ಎಡ್. ಕಾಲೇಜಿನ ವಿಚಾರವಾಗಿ ಪ್ರಸ್ತಾಪ ಮಾಡಿದರು. ಐದು ಕಾಲೇಜುಗಳನ್ನು ಮುಚ್ಚಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕಾಗಿ ಒಂದು ಕಮಿಟಿ ನೇಮಕ ಮಾಡಿದಾಗ ಆ ಕಮಿಟಿಯವರು ಎಲ್ಲ ಕಾಲೇಜುಗಳಿಗೆ ಹೋಗಿ ನೋಡಿ ಅದರಲ್ಲಿ ಕೆಲವು ಕಾಲೇಜುಗಳು ಸ್ಟ್ಯಾಂಡರ್ಡ್ ಮೈಂಟೈನ್ ಮಾಡಿಲ್ಲ, ಅದನ್ನು ಕ್ಲೋಸ್ ಮಾಡಬೇಕೆಂದು ತಿಳಿಸಿದರು ಐದು ಕಾಲೇಜುಗಳನ್ನೂ ತಕ್ಷಣ ಮುಚ್ಚಿದರೆ ಅದು ಸರಿಯಲ್ಲ ಎಂದು ತಿಳಿದುಕೊಂಡು ಈ ವರ್ಷ ಆ ಐದು ಕಾಲೇಜನ್ನು ನಡೆಸಲು ಅನುಮತಿ ಕೊಡುತ್ತಿದ್ದೇವೆ. ಆ ಐದು ಕಾಲೇಜುಗಳು ಯಾವುವೆಂದರೆ—

Municipal College of Education, Chickballapur
College of Education, K.G.F.
Hasanamba College of Education, Hassan.
T M.E.A. College of Education Harappanahalli.
Srishaila College of Education, Harihar.
The intake fixed is 50. Within one year they should show the progress and must fulfil the conditions.

ಮಾನ್ಯ ಕೋಣಂದರು ಲಿಂಗಪ್ಪನವರು ಒಂದೆರಡು ವಿಚಾರಗಳನ್ನು ಹೇಳಿದ್ದಾರೆ. 'ವಿಶ್ವ ಇತಿಹಾಸ ಸಮೀಕ್ಷೆ' ಪುಸ್ತಕವನ್ನು ಐದು ಸಾವಿರ ಪುಸ್ತಕಗಳನ್ನು ಅಂದರೆ ಬಹಳಷ್ಟು ಪ್ರಮಾಣದಲ್ಲಿ ತೆಗೆದುಕೊಂಡಿದ್ದಾರೆ. ತೆಗೆದುಕೊಂಡು ಹಣ ಯಾರಿಗೋ ಕೊಟ್ಟುಬಿಟ್ಟಿದ್ದಾರೆ ಎಂದು ಹೇಳಿದರು. ನನಗೆ ಬಂದಿರತಕ್ಕ ವರದಿ ಪ್ರಕಾರ ಆ ಪುಸ್ತಕದ ಕ್ರಮ ಒಂದಕ್ಕೆ 6 ರೂ 50 ಪೈಸೆ. ಒಟ್ಟು ಪುಸ್ತಕ ಖರೀದಿ ಮಾಡಿರುವುದು 230. ಒಟ್ಟು ಮೊತ್ತ 1,495 ರೂಪಾಯಿ. ಡಿಸ್ಕೌಂಟ್ 403-00 ರೂಪಾಯಿಗಳು ಅಂದರೆ 1092 ರೂಪಾಯಿ ಕೊಟ್ಟಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಅಂಕಿಸಂಖ್ಯೆಗಳು ಬೇಡ. ಕಾನೂನು ಪ್ರಕಾರ ಟೆಕ್ಸ್ಟ್ ಬುಕ್ ಅಂಥ ಪುಸ್ತಕವನ್ನು ಬಲ್ಕ್ ಪರ್ಚೇಸ್ ಮಾಡುವುದಕ್ಕೆ ಅವಕಾಶ ಇದೆಯೇ ?

ಶ್ರೀ ಎಸ್.ಎಂ. ಯಾಹ್ಯಾ.—ಅದು ಪಠ್ಯ ಪುಸ್ತಕ ಅಲ್ಲ. ರೆಫರೆನ್ಸ್ ಬುಕ್. It was not a text book, it was merely recommended as a reference book.

SRI KAGODU THIMMAPPA.—You better ascertain.

Sri S.M. Yahya.—It was only recommended as a reference book during the year 1971. ಇಷ್ಟು ಸಮಾಚಾರ ನನ್ನಲ್ಲಿದೆ. ಏನಾದರೂ ತಪ್ಪಾಗಿದ್ದರೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ. ನೀವು ಹೇಳುವುದೂ ತಪ್ಪು ಎಂದು ಹೇಳುವುದಿಲ್ಲ. ನಾವು ಹೇಳಿರುವುದರಲ್ಲಿ ಕೆಲವು ತಪ್ಪಿರಬಹುದು. ಯಾವುದು ಸರಿ ಎಂದು ಖಂಡಿತವಾಗಿ ನೋಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೆ ಹೇಳಿ. ಸುಮ್ಮನೆ ವಾದಕ್ಕೆ ಇಳಿಯಬೇಡಿ.

ಶ್ರೀ ಎಸ್.ಎಂ. ಯಾಹ್ಯಾ—ಬಹಳಷ್ಟು ವಿಚಾರಗಳನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ.

ಅವುಗಳ ಪೈಕಿ ಕೆಲವು ವಿಚಾರ ಮಾಡುವಂತಹ ವಿಚಾರವಗಳು ಇವೆ. ಸರ್ಕಾರ ಅವುಗಳ ಬಗ್ಗೆ ಬಹಳ ಎಚ್ಚರಿಕೆ ವಹಿಸುವುದು. ಮಾರ್ಕ್ಸ್ ಕಾರ್ಡ್ ವಿಚಾರವನ್ನು ಸಹ ಪರಿಶೀಲಿಸಲಾಗುವುದು. Government will certainly look into the entire matter. As a matter of fact, this Goverment, as far as the Universities are concerned, have not interfered and as far as the academic matters are concerned, at least I have kept myself certainly aloof but if there are glaring things, I will take up this matter with the Universities I do not want to take much of the time and I am indeed thankful to the hon. Members for the good suggestions they may made.

6-00 P. M.

ಶ್ರೀ ಕೋಣಂದೂರು ಲಿಂಗಪ್ಪ.—ನೂರಾರು ಮಾರ್ಕ್ಸ್ ಕಾರ್ಡುಗಳನ್ನು ಪೋಟೋ ಇಲ್ಲದೆ, ಸಿಗ್ನೇಚರ್ ಇಲ್ಲದೆ ಕೊಟ್ಟಿದ್ದಾರೆ.

ಶ್ರೀ ಎಸ್. ಎಂ. ಯಾಹ್ಯಾ.—ಇದನ್ನು ಈಗ ತಾವು ನನ್ನ ಗಮನಕ್ಕೆ ತಂದಿದ್ದೀರಿ. I will certainly look into the matter.

Sri H. D. Deve Gowda.—It is a very serious matter. In fact that information–somebody brought it to my notice in one case and I passed it on. There are several such instances.

Sri S. M. Yahya.—It has come to our notice just now. If you give some time, certainly we will look into the matter.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಅಧ್ಯಕ್ಷರೇ, ತಮ್ಮ ಮೂಲಕ ಕೇಳುತ್ತೇನೆ. ಗ್ರಂಥಾಲಯ ಇಲಾಖೆ ಹುಟ್ಟಿದಾಗಿನಿಂದಲು ತಾತ್ಕಾಲಿಕವಾಗಿಯೇ, ಇದೆ, ಅದನ್ನು ಯಾವಾಗ ಖಾಯಂ ಮಾಡುತ್ತೀರಿ? ಇಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಸಹ ಗಣನೆಗೆ ತೆಗೆದುಕೊಳ್ಳದೆ ಇರುವುದಕ್ಕೆ ಏನು ಕಾರಣ? ಕ್ಲಾಸ್ 3 ಮತ್ತು 4ರ ಬಗ್ಗೆ ನಿರ್ಧಿಷ್ಟವಾದ ಉತ್ತರ ಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಈಗತಾನೇ ಹೊಸದಾಗಿ ಪೋಸ್ಟ್ಸನ್ನು ಕ್ರಿಯೇಟ್ ಮಾಡಲಾಗಿದೆ ಮತ್ತು ಅವರು ಯಾರು ಡೈಲಿ ವೇಜಸ್‌ನಲ್ಲಿ ಇರಬಾರದೆಂದು ಸಹ ತೀರ್ಮಾನಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಲೈಬ್ರರಿಯಲ್ಲಿ 10-12 ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಇದುವರೆಗೂ ಡೈಲಿ ವೇಜಸ್‌ನಲ್ಲೇ ಕೆಲಸ ಮಾಡಿಸುತ್ತಿದ್ದೀರಿ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿಂತು ಕೆಲವು ನೌಕರರನ್ನು ಕೂಲಿಯಾಳುಗಳ ತರಹ ಇಟ್ಟುಕೊಂಡಿದ್ದೀರೆಂದರೆ ಅದು ವಿಚಾರ ಮಾಡತಕ್ಕ ವಿಷಯ. ಲೈಬ್ರರಿ ಇಲಾಖೆಯಲ್ಲಿ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಸರ್ಕಾರದವರು ಇವತ್ತಿನವರೆಗು ರೆಗ್ಯುಲರೈಸ್ ಮಾಡಲಿಲ್ಲ. ಈ ರೆಗ್ಯುಲರೈಸೇಷನ್

ಮಾಡುವ ವಿಷಯ ಲೈಬ್ರರಿ ಇಲಾಖೆಯ ಹಂತದಲ್ಲಿದೆಯೇ ಅಥವಾ ಸರ್ಕಾರದ ಮಟ್ಟದಲ್ಲಿಯೇ? ಒಂದು ವೇಳೆ ಸರ್ಕಾರದ ಮಟ್ಟದಲ್ಲಿದ್ದರೆ ಯಾವಾಗ ರೆಗ್ಯುಲರೈಸ್ ಮಾಡುವುದಕ್ಕೆ ತೀರ್ಮಾನ ಮಾಡುತ್ತೀರಿ?

ಶ್ರೀ ಎಸ್. ಎಂ. ಯಾಹ್ಯಾ.—ರೆಗ್ಯುಲರೈಸ್ ಮಾಡುವ ವಿಚಾರ ಒಂದು. ಮೊಟ್ಟ ಮೊದಲನೆಯದಾಗಿ ನಾವು 270 ಪೋಸ್ಟುಗಳನ್ನು ಕ್ರಿಯೇಟ್ ಮಾಡಿ ಆದಷ್ಟು ಇವರುಗಳಿಗೆಲ್ಲ ಸಹಾಯ ಮಾಡಬೇಕೆಂದು ಮಾಡಿದ್ದೇವೆ. ಏಜ್ ರಿಲ್ಯಾಕ್ಸೇಷನ್ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಪುಸ್ತಕ (ಪುಸ್ತಕವನ್ನು ತೋರಿಸಿದರು) ಎರಡು ವರ್ಷದ ಅವಧಿಯ ಪಿ.ಯು.ಸಿ. ಮೊದಲ ವರ್ಷಕ್ಕೆ ಟೆಕ್ಸ್ಟ್ ಬುಕ್ ಆಗಿ ಪ್ರಿಂಟ್ ಆಗಿದೆ. ನಾವು ಯಾರನ್ನು ಹಿಡಿದು ಕೊಡುತ್ತೇವೆಯೋ ಅವರಿಗೆ ಬಡ್ತಿ ಕೊಡುತ್ತಾ ಹೋಗುತ್ತೀರಿ.

ಅಧ್ಯಕ್ಷರು.—ನೀವು ಮಾತನಾಡಿದ್ದು ರೆಕಾರ್ಡ್ ಆಗಿದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಕೇಳಿ ಹೇಳಬೇಕು.

ಶ್ರೀ ಎಚ್ ಡಿ. ದೇವೇಗೌಡ.—ಲೈಬ್ರರಿಗೆ ಸಂಬಂಧಪಟ್ಟ ಹಾಗೆ ಯಾರೋ ಒಬ್ಬರು ನನಗೆ ಕಾಗದ ಬರೆದಿದ್ದರು, ಅದನ್ನು ಓದಲಿಕ್ಕೆ ನನಗೆ ಹೇಸಿಗೆಯಾಯಿತು. ಅವರು ಬರೆಯುವಾಗ ಒಂದು ಒಳ್ಳೆಯ ದೃಷ್ಟಿಕೋನವನ್ನು ಇಟ್ಟುಕೊಂಡೇ ಬರೆದಿರಬಹುದು. ಹೀಗೆಲ್ಲ ಚುಚ್ಚು ಮಾತಿನಿಂದ ಬರೆದರೆ ಸ್ವಲ್ಪವಾದರು ಜ್ಞಾನೋದಯವಾಗುತ್ತದೆ ಎಂದು ಬರೆದಿರಬಹುದು. ಇದರಲ್ಲಿ ನನ್ನ ಹೆಸರನ್ನು ಸೇರಿಸಿ ಬರೆದಿರುತ್ತಾರೆ. I am not bothered about it ಕಳೆದ 5 ವರ್ಷಗಳಿಂದ ಯಾವ ಅಧಿಕಾರಿಯನ್ನು ಹಿಡಿದು ಶಿಕ್ಷೆ ವಿಧಿಸಿದ್ದೀರಿ? He is not a big man. ಸರ್ಕಾರ ಇಷ್ಟು ಶಕ್ತಿಯುತವಾಗಿದ್ದು ಒಬ್ಬ ಅಧಿಕಾರಿಗೆ ತಲೆ ತಗ್ಗಿಸುವುದಕ್ಕೆ ಆಗುವುದಿಲ್ಲ. ಜೊತೆಗೆ ನಿಮ್ಮ ಪ್ರೆಡಿಸೆಸರ್ ಆದ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಈ ಸಮಸ್ಯೆಯನ್ನು ಅತಿ ಶೀಘ್ರದಲ್ಲಿ ಬಗೆಹರಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಪೋಸ್ಟ್‌ಗಳನ್ನು ಅಡ್ವರ್ಟೈಸ್ ಮಾಡಿ ರೆಗ್ಯುಲರೈಸ್ ಮಾಡುವುದು ದೊಡ್ಡ ಕೆಲಸವೆ? ಒಂದು ವೇಳೆ 42ನೇ ತಿದ್ದುಪಡಿ ಬಾರದಿದ್ದರೆ ಈ ಸರ್ಕಾರ ಹೋಗಿ ಬೇರೆ ಪಕ್ಷ ಬೇರೆ ಸರ್ಕಾರ ಬರುತ್ತಿತ್ತು, ಅದು ಬೇರೆ ವಿಷಯ. ಆಶ್ವಾಸನೆ ಕೊಟ್ಟ ಮೇಲೆ ಸದನದ ಗೌರವ ಉಳಿಸಲು 5 ವರ್ಷದೊಳಗಾದರು ಮಾಡಬೇಡವೆ? I want a categorical answer from the Hon. Minister. Let him say 'yes' or 'no'. I am not going to compel him

SRI S. M. YAHYA.—We have taken certain stops. Recently, we have created posts and we will certainly expedite the matter.

ಶ್ರೀ ಕೋಣಂದೂರು ಲಿಂಗಪ್ಪ.—ಅದೇ ಹುದ್ದೆಗೆ ಡಿಗ್ರಿ ಪಡೆದಂತಹ ಅಭ್ಯರ್ಥಿಗಳಿದ್ದರು ಕೂಡ ಯಾವ ಅರ್ಹತೆಯ ಇಲ್ಲದಿರತಕ್ಕವರನ್ನು ಏಕೆ ನೇಮಕ ಮಾಡಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ನನಗೆ ತಿಳಿದ ಪ್ರಕಾರ ವಿದ್ಯಾ ಇಲಾಖೆಯವರಿಗೆ ಜಿ.ಎ.ಡಿ. ಯವರನ್ನು ಒಲಿಸಿಕೊಳ್ಳಲಿಕ್ಕೆ ಆಗಲಿಲ್ಲ. ಅವರಿಗು ಇವರಿಗು ಇರತಕ್ಕ ಜಗಳದಲ್ಲಿ ಕೂಸು ಬಡವಾಗಿದೆ. ಮಾನ್ಯ ಮಂತ್ರಿಗಳು ಇರುವ ವಿಚಾರವನ್ನು ಹೇಳುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ.

SRI H. D. DEVE GOWDA.—We are not holding brief on behalf of the employees working on daily wages. We want to know the mind of the Government. Is the Government prepared to give relief to these poor employees? They are working for the last 8, 9, 10 years. We want to know whether the Government is prepared to give a categorical assurance. 15 ದಿನಗಳಲ್ಲಿ ಮಾಡುತ್ತೀರಾ ಅಥವಾ ಒಂದು ತಿಂಗಳಲ್ಲಿ ಮಾಡುತ್ತೀರಾ? ಏನಾದರು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಲಿ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುತ್ತಿರುವವರನ್ನು ರೆಗ್ಯುಲರೈಸ್ ಮಾಡಬೇಕು. ನೀವು ರೆಕ್ರೂಟಮೆಂಟ್ ರೂಲ್ಸ್ ಮಾಡಿ ಏನು ಮಾಡುತ್ತಿದ್ದೀರಿ? Persons who are working on daily wages should be absorbed immediately. That is all the assurance we want.

Sri S. M. Yahya.—We will certainly do whatever is possible. We have taken certain steps.

ಶ್ರೀ ಎಚ್. ಡಿ. ದೇವೇಗೌಡ.—10 ವರ್ಷಗಳಿಂದ ಏಕೆ ರೆಗ್ಯುಲರೈಸ್ ಮಾಡದೆ ಬಿಟ್ಟಿರಿ?

Sri S M Yahya.—It has gone a long way and we have come to a stage where we will be able to resolve it.

ಶ್ರೀ ಎಚ್. ಡಿ. ದೇವೇಗೌಡ.—ಇದಕ್ಕಿಂತ ಡಿಸ್‌ಕ್ರೆಡಿಟ್ ತರುವುದು ಯಾವುದೂ ನಮ್ಮ ದೇಶದಲ್ಲಿ ಇಲ್ಲ.

†ಶ್ರೀ ಮಲ್ಲಿಕಾರ್ಜುನ ಖರ್ಗೆ (ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಾಖೆಗಳ ರಾಜ್ಯ ಮಂತ್ರಿಗಳು) —ಸನ್ಮಾನ್ಯ ಅಧ್ಯಕ್ಷರೇ, ಇಂದು ಹಾಗೂ ಹಿಂದಿನ ದಿವಸ ನನ್ನ ಪ್ರೈಮರಿ ಮತ್ತು ಸೆಕೆಂಡರಿ ಶಿಕ್ಷಣದ ಬಡ್ಜೆಟ್ಟಿನ ಮೇಲೆ ಸುಮಾರು 17 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅದರಲ್ಲಿ ಸುಮಾರು 16 ಜನ ಮಾನ್ಯ ಸದಸ್ಯರುಗಳು ನನ್ನ ಬೇಡಿಕೆಯ ಮೇಲೆ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟು ಟೀಕೆಗಳನ್ನೂ ಕೂಡ ಮಾಡಿದ್ದಾರೆ. ಮುಖ್ಯವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರೈಮರಿ ಸ್ಕೂಲುಗಳು ಮತ್ತು ನರ್ಸರಿ ಸ್ಕೂಲುಗಳನ್ನು ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ನಡೆಸಬೇಕು ಮತ್ತು ಬಡಮಕ್ಕಳಿಗೆ ಸಹಾಯ ಮಾಡಬೇಕು ಎನ್ನತಕ್ಕದ್ದನ್ನು ಹೇಳಿದ್ದಾರೆ. ನಾವು ಈಗಾಗಲೇ ಸುಮಾರು 350 ನರ್ಸರಿ ಸ್ಕೂಲುಗಳನ್ನು ಹಳ್ಳಿಗಳಲ್ಲಿ ಪ್ರಾರಂಭ ಮಾಡಿದ್ದೇವೆ, ಮತ್ತು ಸುಮಾರು 200 ನರ್ಸರಿ ಸ್ಕೂಲುಗಳನ್ನು ಪ್ರಾರಂಭ ಮಾಡಬೇಕು ಎಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆಂದು ಹೇಳುವುದಕ್ಕೆ ಹೆಮ್ಮೆಯೆನಿಸುತ್ತದೆ. ಈ ಯೋಜನೆಯನ್ನು ಪ್ರಪ್ರಥಮವಾಗಿ ಇಡೀ ದೇಶದಲ್ಲಿ ಕಾರ್ಯರೂಪಕ್ಕೆ ತಂದಿರುವುದು ನಮ್ಮ ಕರ್ನಾಟಕ ರಾಜ್ಯದಲ್ಲಿಯೇ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಒಂದು ಕಾರ್ಯಕ್ರಮವನ್ನು ಯಾರೂ ಕಾರ್ಯಗತ ಮಾಡಿಲ್ಲ, ಆದರೆ ಕರ್ನಾಟಕ ರಾಜ್ಯ ಮಾತ್ರ ಮುಂದೆಬಂದು ಸುಮಾರು 350 ನರ್ಸರಿ ಸ್ಕೂಲುಗಳನ್ನು ನಡೆಸುತ್ತಿದೆ ಅದೇ ರೀತಿಯಾಗಿ ಈ ವರ್ಷವೂ ಕೂಡ ಇನ್ನೂ 200 ಶಾಲೆಗಳನ್ನು ತೆರೆಯಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಗ್ರಾಮಾಂತರ ಪ್ರದೇಶಗಳ ಬಗ್ಗೆ ಏನು ಮಾಡಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ.—95 ಪರ್ಸೆಂಟ್ ಶಾಲೆಗಳನ್ನು ನಾವು ಗ್ರಾಮಾಂತರ ಪ್ರದೇಶಗಳಲ್ಲಿಯೇ ಮಾಡಿದ್ದೇವೆ. ಬಹುತೇಕ ಶಾಲೆಗಳನ್ನು ಪಟ್ಟಣಗಳ ಸ್ಲಂ ಏರಿಯಾಗಳಲ್ಲಿ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಹಳ್ಳಿಗಳಲ್ಲಿ ಎಷ್ಟೆಷ್ಟು ಸ್ಕೂಲುಗಳನ್ನು ಮಾಡಿದ್ದೇವೆ ಎನ್ನುವ ಪಟ್ಟಿಯನ್ನು ತಾವು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರುಗಳು ನಾವು ಪ್ರೈಮರಿ ಸ್ಕೂಲುಗಳ ಬಗ್ಗೆ ಸಾಕಷ್ಟು ಗಮನಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ ಪ್ರೈಮರಿ ವಿದ್ಯಾಭ್ಯಾಸದ ಮಟ್ಟ ಇಂಪ್ರೂವ್ ಆಗಬೇಕೆಂದು ನಾವು ಒಂದು ಪ್ಲಾನ್ ಕೂಡ ಮಾಡಿದ್ದೇವೆ, ಇದರಲ್ಲಿ ಪ್ರೈಮರಿ ಸ್ಕೂಲ್‌ಗೆ ಸುಮಾರು 18 ಲಕ್ಷ ರೂಪಾಯಿಗಳನ್ನು 77-78ರಲ್ಲಿ ಖರ್ಚು ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಹೆಚ್ಚಿನ ರೀತಿಯಲ್ಲಿ ಮಕ್ಕಳು ಶಾಲೆಗೆ ಬರಬೇಕೆಂದು ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುತ್ತಿದ್ದೇವೆ. ಅದರಲ್ಲಿಯೂ ಮುಖ್ಯವಾಗಿ ಹೆಣ್ಣು ಮಕ್ಕಳು ಹೆಚ್ಚಿನ ರೀತಿಯಲ್ಲಿ ಸ್ಕೂಲುಗಳಿಗೆ ಬರಬೇಕೆಂದು ಅದಕ್ಕಾಗಿ 26·40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಹೆಣ್ಣುಮಕ್ಕಳಿಗೆ ಒಬ್ಬರಿಗೆ ಪ್ರತಿವರ್ಷ 40 ರೂಪಾಯಿಗಳನ್ನು ನಾವು ಕೊಟ್ಟ ಹಾಗೆ ಆಗುತ್ತದೆ. ಸುಮಾರು 70 ಸಾವಿರ ಹುಡುಗರಿಗೆ ಇದು ಲಾಭವಾಗುತ್ತದೆ. ಅನೇಕ

ವಿದ್ಯಾರ್ಥಿಗಳು ಈಗ ಮುಂದೆ ಬರುತ್ತಿದ್ದಾರೆ. ಆಮೇಲೆ ಎಸ್ ಸಿ ಮತ್ತು ಎಸ್ ಟಿ ವಿದ್ಯಾರ್ಥಿಗಳಿಗೆ ನಾವು ಟೆಕ್ಸ್ಟ್ ಬುಕ್ಸ್ ಕೂಡ ಸಪ್ಲೈ ಮಾಡುತ್ತಿದ್ದೇವೆ. ಇವರಿಗಲ್ಲದೆ ಹಳ್ಳಿಯಲ್ಲಿರತಕ್ಕ ಹಿಂದುಳಿದಂಥ ವಿದ್ಯಾರ್ಥಿಗಳಿಗೂ ಕೂಡ ಟೆಕ್ಸ್ಟ್‌ಬುಕ್ಸ್ ಸಪ್ಲೈ ಮಾಡುತ್ತಿದ್ದೇವೆ. ಅದೇ ರೀತಿಯಾಗಿ ಪ್ರತಿಯೊಂದು ಹೈಸ್ಕೂಲುಗಳಲ್ಲಿಯೂ ಸ್ಕೂಲ್ಸ್ ಹೈಯರ್ ಸೆಕೆಂಡರಿ ಸ್ಕೂಲುಗಳಲ್ಲಿಯೂ ಸುಮಾರು 30 ಸಾವಿರ ಬುಕ್ ಬ್ಯಾಂಕುಗಳನ್ನು ಓಪನ್ ಮಾಡಿದ್ದೇವೆ. ಈ ರೀತಿಯಾಗಿ ಮಕ್ಕಳು ಹೆಚ್ಚಿನ ರೀತಿಯಲ್ಲಿ ಶಾಲೆಗೆ ಬರಬೇಕೆಂದು ಸರ್ಕಾರದವರು ಸಹಾಯ ಮಾಡುತ್ತಿದ್ದೇವೆ ಇದಲ್ಲದೆ ಟ್ರೈಬಲ್ಸ್‌ಗೆ ಸಹಾಯ ಮಾಡುವುದಕ್ಕಾಗಿ ಸರ್ಕಾರದವರು ಸುಮಾರು 12ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗಾಗಲೇ ನಾನು ಹೇಳಿದ ಪ್ರಕಾರ ಪ್ರೈಮರಿ ಸ್ಕೂಲುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಎನ್‌ರೋಲ್ ಆಗಬೇಕು ಮತ್ತು ಮುಂದೆ ಅವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಬೇಕು ಎನ್ನುವ ಒಂದು ಉದ್ದೇಶದಿಂದ ಈ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಇದಕ್ಕೆ ಈಗ ಸಾಕಷ್ಟು ಪ್ರಮಾಣದಲ್ಲಿ ಒಳ್ಳೆಯ ರೆಸ್‌ಪಾನ್ಸ್ ಕೂಡ ಇದೆ. ಇದರಲ್ಲಿ ಅನೇಕ ಲೋಪದೋಷಗಳು ಇರಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ ಎಲ್ಲಾ ಸರಿಪಡಿಸಬೇಕಾದರೆ ಮಾನ್ಯ ಸದಸ್ಯರೂ ಕೂಡ ನಮಗೆ ಇರತಕ್ಕ ಕಷ್ಟವನ್ನು ತಿಳಿದುಕೊಳ್ಳಬೇಕಾಗಿದೆ. ಇದಕ್ಕೆ ಮಕ್ಕಳ ತಂದೆತಾಯಿಗಳೂ ಕೂಡ ನಮಗೆ ಸಹಾಯ ಮಾಡಬೇಕು. ಎಲ್ಲಿಯವರೆಗೆ ತಂದೆತಾಯಿಗಳು ಮತ್ತು ಬೆಟರ್‌ಮೆಂಟ್ ಕಮಿಟಿಯಲ್ಲಿರತಕ್ಕ ಅಧ್ಯಕ್ಷರು ಮತ್ತು ಸದಸ್ಯರುಗಳು ಇದರ ಬಗ್ಗೆ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ನಮ್ಮ ಅಪೇಕ್ಷಿತ ಗುರಿಯನ್ನು ಸಾಧಿಸುವುದರಲ್ಲಿ ಯಶಸ್ವಿಯಾಗುವುದಿಲ್ಲ ಎಂದು ನನಗನ್ನಿಸುತ್ತದೆ. ಅದಕ್ಕಾಗಿ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಅವರು ಕೂಡ ಹೆಚ್ಚಿನ ರೀತಿಯಲ್ಲಿ ಇದರ ಬಗ್ಗೆ ಆಸಕ್ತಿ ವಹಿಸಿ ತಮ್ಮ ವೇಳೆಯನ್ನು ಈ ಕಮಿಟಿಗಳಲ್ಲಿ ವ್ಯಯ ಮಾಡಿ ಅಲ್ಲಿರತಕ್ಕ ಮಕ್ಕಳಿಗೆ ಶಾಲೆಗೆ ಹೋಗುವಂತೆ ಸಹಾಯಮಾಡಬೇಕು, ಅದನ್ನು ಅವರು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಚಿಕ್ಕ ಮಕ್ಕಳಿಗೆ ಈಗಾಗಲೇ ನಾವು ಕೂಡ ಮಿಡ್ ಮೀಲ್ಸ್ ಸ್ಕೀಂನಿಂದ ಆಹಾರವನ್ನು ಕೊಡುತ್ತಿದ್ದೇವೆ. ಇದರಿಂದ 14 ಲಕ್ಷ ಮಕ್ಕಳಿಗೆ ಉಪಕಾರವಾಗಿದೆ.

ಶ್ರೀ ಎಂ. ವೆಂಕಟಲಿಂಗಯ್ಯ —ಈ ಸ್ಕೀಂನಲ್ಲಿ ದುಡ್ಡನ್ನು ವಸೂಲು ಮಾಡಬೇಕು ಎಂದು ಎಕ್ಸಿಬಿಷನ್‌ನಲ್ಲಿ ಟಿಕೆಟ್‌ಗಳನ್ನು ಮಾರಿ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ಇದನ್ನು ಮೈಸೂರು ಸಿಟಿಯಲ್ಲಿರುವ ಎ ಇ ಓ ಅವರು ಮಾಡಿದ್ದಾರೆ. ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ, ಈ ದುಡ್ಡು ಯಾರ ಹತ್ತಿರ ಇದೆ? ಲೆಕ್ಕವನ್ನು ಇಟ್ಟಿದ್ದಾರೆಯೇ? ಇದರ ಬಗ್ಗೆ ವಿಚಾರಣೆ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಅದನ್ನು ನಮಗೆ ವಿವರವಾಗಿ ಬರೆದು ಕೊಟ್ಟರೆ ಅದನ್ನು ಯಾವ ರೀತಿಯಾಗಿ ಪರಿಶೀಲನೆ ಮಾಡಬೇಕೋ ಆ ರೀತಿ ಮಾಡಿಸುತ್ತೇವೆ.

ಈಗ ನಾವು ಚಿಕ್ಕಮಕ್ಕಳಿಗೆ ಮಿಡ್‌ಮೀಲ್ಸ್ ಮೂಲಕ ಊಟ ಹಾಕುವುದರಿಂದ ಅನೇಕ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಆಮೇಲೆ ನಮ್ಮ ಹೊಸ ಸ್ಕೀಂ ಪ್ರಕಾರ ಪಾಡರ್ನ ಬೇಕರಿಯಿಂದ ಬೆಂಗಳೂರು ಸಿಟಿಯಲ್ಲಿ 25 ಸಾವಿರ ಮಕ್ಕಳಿಗೆ ಬ್ರೆಡ್ ತೆಗೆದುಕೊಂಡು ಸ್ಲಂ ಏರಿಯಾ ಮಕ್ಕಳಿಗೆ ಸಹಾಯ ಮಾಡುತ್ತಿದ್ದೇವೆ, ಇವರಿಗೆ ಯಾವರೀತಿಯ ತೊಂದರೆಯೂ ಆಗಬಾರದೆಂದು ನೇರವಾಗಿ ಬೇಕರಿ ಪ್ರಾಜೆಕ್ಟ್‌ನಿಂದ ತೆಗೆದುಕೊಂಡು ಹೋಗಿ ಕೊಡಬೇಕು ಎನ್ನುವ ವ್ಯವಸ್ಥೆಯನ್ನು ಮಾಡಿದ್ದೇವೆ. ಆಮೇಲೆ ಮಾನ್ಯ ತಿಮ್ಮಪ್ಪನವರು ಟೇಕನ್ ಓವರ್ ಖಾಸಗಿ ಸ್ಕೂಲುಗಳ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಒಂದು ತೊಂದರೆಯಿದೆಯೆಂದು ಅವರಿಗೂ ಕೂಡ ಗೊತ್ತಿದೆ. ಮಾನ್ಯ ಶಾಮಣ್ಣನವರು ಇವುಗಳನ್ನು ತೆಗೆದುಕೊಳ್ಳತಕ್ಕದ್ದು ಒಳ್ಳೆಯದಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಮಾನ್ಯ ಚೆನ್ನಪ್ಪನವರು ಕೂಡ ಹೇಳಿದ್ದಾರೆ. ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಒಳ್ಳೆಯ ರೀತಿಯಿಂದ ನಡೆಯುತ್ತಿವೆ, ನೂರಾರು ವರ್ಷಗಳಿಂದ ಪ್ರಯತ್ನಪಟ್ಟು ಪ್ರಾಮಾಣಿಕತೆಯಿಂದ ಈ ಸಂಸ್ಥೆಗಳನ್ನು ಕೆಲವರು ಕಟ್ಟಿರುತ್ತಾರೆ, ಅದನ್ನು ಕೆಡಿಸುವುದು ಬೇಡ ಎನ್ನುವ ಮಾತನ್ನೂ ಕೂಡ ಅವರು ಹೇಳಿದ್ದಾರೆ. ಯಾವ ಕೆಟ್ಟ ಇನ್‌ಸ್ಟಿಟ್ಯೂಷನ್‌ಗಳು ಡೊನೇಷನ್ ಕಲೆಕ್ಟ್ ಮಾಡುತ್ತಿವೆಯೋ ಮತ್ತು ಹೆಚ್ಚಿನ ಫೀಜನ್ನು ವಸೂಲು ಮಾಡುತ್ತಿವೆಯೋ

ಅವುಗಳು ಸರ್ಕಾರದ ಗಮನಕ್ಕೆ ಬಂದು ನಾವು ಅಧಿಕಾರ ತೆಗೆದುಕೊಂಡ 9 ತಿಂಗಳಲ್ಲಿ ಸುಮಾರು 28 ಕೇಸುಗಳನ್ನು ರಿಜಿಸ್ಟರ್ ಮಾಡಿಸಿದ್ದೇವೆ. ಹೋದ ವರ್ಷ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ, ಮಂತ್ರಿಗಳು ಮತ್ತು ಅಧಿಕಾರಗಳು ಕೂಡ ಲಂಚ ತೆಗೆದುಕೊಳ್ಳುತ್ತಾರೆ ಎನ್ನುವ ಧಾಟಿಯಲ್ಲಿ ಕೆಲವರು ಮಾತನಾಡಿದರು. ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಈ ಖಾತೆಯ ಮಂತ್ರಿಗಳಾಗಿದ್ದಾಗ ಈ ಒಂದು ಮಾತನ್ನು ಹೇಳಿದಾಗ ಹೋದ ವರ್ಷ ಅವರು 9 ಕೇಸುಗಳನ್ನು ರಿಜಿಸ್ಟರ್ ಮಾಡಿದ್ದರು. 776 ಇಂಪರ್ಸನಿಯೇಷನ್ ಕೇಸ್‌ಗಳು ಏನು ಇವೆ, ಅದರಲ್ಲಿ ಸುಮಾರು 29 ಪ್ರೈಮರಿ ಸ್ಕೂಲು ಮತ್ತು ಹೈಸ್ಕೂಲು, ನರ್ಸರಿ ಸ್ಕೂಲುಗಳು ಇನ್‌ವಾಲ್ವ್ ಆಗಿವೆ. ಅದನ್ನು ಅದನ್ನು ಕಂಡುಹಿಡಿದು ಈಗಾಗಲೇ ಪೋಲೀಸ್ ಕಮಿಷನರ್ ಅವರಿಗೆ ನಾವು ಎಲ್ಲಾ ಕಾಗದ ಪತ್ರಗಳನ್ನು ಒದಗಿಸಿಕೊಟ್ಟಿದ್ದೇವೆ. ಅವರೂ ಕೂಡ ಚಾರ್ಜ್‌ಷೀಟ್ ಹಾಕಬೇಕು ಎನ್ನುವ ದಿಶೆಯಲ್ಲಿದ್ದಾರೆ. ಇವರಿಗೆ ನಾವು ಸರಿಯಾಗಿ ಇನ್‌ಫರ್ಮೇಷನ್ ಕೊಡಲಿಲ್ಲ ಅಂದರೆ ಕೋರ್ಟ್‌ನಲ್ಲಿ ಕೇಸ್ ಸ್ಟಾಂಡ್ ಆಗುವುದಿಲ್ಲ ಎನ್ನುವುದನ್ನು ತಿಳಿದು ಸಂಬಂಧಪಟ್ಟವರ ಹಸ್ತಾಕ್ಷರಗಳನ್ನು ಕೂಡ ವೆರಿಫೈ ಮಾಡುವುದಕ್ಕೆ ತಜ್ಞರಿಗೆ ಕೊಟ್ಟಿದ್ದೇವೆ. ಈ ರೀತಿಯಾಗಿ ನಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಅನ್ನುವುದನ್ನು ತಿಳಿದುಕೊಂಡು ಈವೊತ್ತಿನ ದಿವಸ ಯಾರಾದರೂ ಅವರ ತಂದೆತಾಯಿಗಳೇ ಆಗಲಿ ಅಥವಾ ವಿದ್ಯಾರ್ಥಿಗಳೇ ಆಗಲಿ ಮುಂದೆ ಬಂದರೆ ಅವರು ರಿಜಿಸ್ಟರ್ಡ್ ಮಾಡಿ ಒಂದು ಅಸೋಸಿಯೇಷನ್ ಮಾಡಿಕೊಂಡರೆ ಅದಕ್ಕೆ ಸರ್ಕಾರ ಮಾನ್ಯತೆ ಕೊಡುತ್ತೇವೆ. ಮತ್ತು ದೇಶದಲ್ಲಿ ಅನ್ ಎಂಪ್ಲಾಯ್ ಆಗಬಾರದು ಮತ್ತು ಆ ಮಕ್ಕಳಿಗೆ ತೊಂದರೆಯಾಗಬಾರದು ಅನ್ನುವುದನ್ನು ತಿಳಿದು ಯಾರಾದರೂ ಅಂತಹ ಪ್ರಾಮಾಣಿಕರು ಮುಂದೆ ಅಂಥಾವರಿಗೆ ನಾವು ಸಹಾಯ ಮಾಡುತ್ತೇವೇ ಹೊರತು ಬೇರೆಯವರಿಗೆ ಅಂದರೆ ಯಾರಾದರೂ ಅದರಲ್ಲಿ ಕ್ರಿಮಿನಲ್ ಕೇಸ್‌ಗೆ ಇನ್‌ವಾಲ್ವ್ ಆಗಿದ್ದಂಥಾವರು ಇದ್ದರೆ ಅಂಥಾವರಿಗೆ ನಾವು ಸಹಾಯ ಮಾಡುತ್ತಾ ಇಲ್ಲ ಅನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಡೊನೇಷನ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಯಾವ ರೀತಿ ಕಂಟ್ರೋಲ್ ಮಾಡಬೇಕು. ನಾನು ಈಗಾಗಲೇ ಲಾ ಡಿಪಾರ್ಟ್‌ಮೆಂಟ್‌ನವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಲಾ ಡಿಪಾರ್ಟ್‌ಮೆಂಟಿನವರು ಈ ಬಗ್ಗೆ ಎಷ್ಟು ಸಹಾಯ ಮಾಡಬೇಕೋ. ಯಾವ ರೀತಿ ನಾವು ಅವರನ್ನು ಕಂಟ್ರೋಲ್ ಮಾಡಬೇಕೋ ಆ ಬಗ್ಗೆ ಅವರು ನಮಗೆ ಇನ್ನೂ ತಿಳಿಸಿಕೊಟ್ಟಿಲ್ಲ ಅವರು ಏನು ಹೇಳುತ್ತಾರೆ ಎಂದರೆ ಆರ್ಟಿಕಲ್ 30ರ ಇಂಡಿಯನ್ ಕಾನ್ಸ್ಟಿಟ್ಯೂಷನ್ ಪ್ರಕಾರ ರಿಲಿಜಿಯಸ್ ಮೈನಾರಿಟೀಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರು ಎಜುಕೇಷನ್ ಇನ್ಸ್ಟಿಟ್ಯೂಷನ್ಸ್ ಅನ್ನು ಎಸ್ಟ್ಯಾಬ್ಲಿಷ್ ಮಾಡತಕ್ಕಂಥಾ ಅಧಿಕಾರ ಇದೆ ಅವರನ್ನು ನೇರವಾಗಿ ಈ ಕಂಟ್ರೋಲ್‌ನಲ್ಲಿ ತರುವುದದ್ದಾಗುವುದಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಾವು ಯಾವ ಯಾವ ಸಂಸ್ಥೆಗಳಿಗೆ ಧನ ಸಹಾಯ ಮಾಡುತ್ತಿದ್ದೇವೋ ಅದನ್ನು ಯಾವರೀತಿ ಕಂಟ್ರೋಲ್ ಮಾಡಬೇಕು ಅನ್ನುವುದನ್ನು ವಿಚಾರ ಮಾಡಿ ಆ ಬಗ್ಗೆ ಸರ್ಕಾರ ಒಂದು ಕಾಂಪ್ರಹೆನ್ಸೀವ್ ಬಿಲ್ ಅನ್ನು ತರಬೇಕು ಎಂದು ಯೋಚನೆ ಮಾಡಿದೆ. ಒಂದುವೇಳೆ ಈ ಪ್ರಶ್ನೆ ಆ ಬಿಲ್ಲಿನಲ್ಲಿ ಬಾರದೇ ಇದ್ದರೆ ಎಜುಕೇಷನ್ ಬಿಲ್‌ನಲ್ಲಾಗಲಿ ಇದನ್ನು ತಂದು ಯಾರ್ಯಾರು ಇಲ್ಲೀಗಲ್ ಆಗಿ ಫೀಸ್ ವಸೂಲ್ಮಾಡುತ್ತಾರೋ ಅದನ್ನು ಸರ್ಕಾರ ಯಾವರೀತಿಯಲ್ಲಿ ಹಿಡಿತದಲ್ಲಿಟ್ಟುಕೊಳ್ಳಬೇಕು ಅನ್ನುವ ಒಂದು ಯೋಚನೆ ಇದೆ. ಮತ್ತು ಈ ಬಗ್ಗೆ ಒಂದು ಬಿಲ್ ಕೂಡ ಪ್ರಿಪೇರ್ ಮಾಡಿದ್ದೇವೆ. ಅದು ಇನ್ನು ಕೆಲವೇ ದಿವಸಗಳಲ್ಲಿ ಈ ಸದನಕ್ಕೆ ತಂದು ಪಾಸು ಮಾಡಿಸಿಕೊಂಡು ಅದನ್ನು ಇಂಪ್ಲಿಮೆಂಟ್ ಮಾಡಬೇಕು ಅನ್ನುವ ಯೋಚನೆಯೂ ಇದೆ ಅನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಶ್ರೀಮಾನ್ ರುದ್ರಪ್ಪನವರು ಮಲೆನಾಡಿನಲ್ಲಿ ಶಾಲಾ ಕಟ್ಟಡ ಏನು ಕಟ್ಟುತ್ತಾರೋ ಅವರಿಗೆ ಇನ್ನೂ ಹೆಚ್ಚಿನ ಧನಸಹಾಯ ನೀಡಬೇಕು ಅನ್ನುವ ಮಾತನ್ನು ಹೇಳಿದ್ದಾರೆ.

ಎನ್ನು ಶ್ರೀಮಾನ್ ಘಾಡಿ ಮತ್ತು ಶ್ರೀಮಾನ್ ಬಿ. ವಿ. ನಾಯಕ್‌ರವರು ಸ್ಕೂಲ್ ರಜಾ ಬಗ್ಗೆ ಈಗ ಇರತಕ್ಕಂಥಾ ಒಂದು ಸಿಸ್ಟಂ ಅನ್ನು ಬದಲಾಯಿಸಬೇಕು ಅನ್ನುವ ಮಾತನ್ನು ಹೇಳಿ

ದ್ದಾರೆ ಈ ಬಗ್ಗೆ ನಾನು ನಮ್ಮ ಅಧಿಕಾರಿಯ ಜೊತೆಯಲ್ಲಿ ಚರ್ಚೆ ಮಾಡಿ ಸಾಧ್ಯವಾದಷ್ಟು ಬೇಗ ಆ ಬಗ್ಗೆ ಯಾವರೀತಿ ಪರಿಹಾರ ಕೊಡಬೇಕೋ ಅದನ್ನು ನೋಡಿ ಕೊಡಿಸುತ್ತೇನೆ ಅನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದ್ದು ಶ್ರೀಮಾನ್ ನಯನಕ್‌ರವರು ಕೆಲವು ಮಾತುಗಳನ್ನು ಅಂದರೆ ಮರಾಠಿ ಉಪಾಧ್ಯಾಯರು ಇಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ಹೋದವರ್ಷ ಅಲ್ಲಿಗೆ ಸುಮಾರು 32 ಶಿಕ್ಷಕರನ್ನು ಕೊಟ್ಟಿದ್ದೇವೆ. ಈ ವರ್ಷ ಅಲ್ಲಿ 15 ಶಿಕ್ಷಕರು ಮಾತ್ರ ಕೊರತೆ ಇದೆ. ನಮ್ಮ ಅಲ್ಲಿ ಡೆಪ್ಯುಟಿ ಡೈರೆಕ್ಟರ್ ಆಫೀಸಿನಲ್ಲಿ ವೈಟಿಂಗ್ ಲಿಸ್ಟ್‌ನಲ್ಲಿ 150 ಜನ ಇದ್ದಾರೆ. ಆ ವೈಟಿಂಗ್ ಲಿಸ್ಟ್‌ನಲ್ಲಿರುವ ಪೈಕಿ 15 ಜನ ಶಿಕ್ಷಕರ ಕೊರತೆ ಏನು ಇದೆ ಅದನ್ನು ಭರ್ತಿ ಮಾಡಿರಿ ಎಂದು ಆರ್ಡರ್ ಮಾಡಿದ್ದೇನೆ. ಅವರು ಆ ಕೆಲಸವನ್ನು ಮಾಡುತ್ತಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕೇವಲ ಮರಾಠಿ ಶಿಕ್ಷಕರೇ ಅಲ್ಲ ಎಲ್ಲಾ ಕ್ಷೇತ್ರದಲ್ಲೂ, ಎಲ್ಲಾ ಜಿಲ್ಲೆಗಳಲ್ಲೂ ಈ ಶಿಕ್ಷಕರ ಕೊರತೆ ಏನು ಇದೆ ಆ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಈಗಾಗಲೇ ನಮ್ಮಲ್ಲಿರತಕ್ಕಂಥಾ ಶಿಕ್ಷಕರ ಸಂಖ್ಯೆ 1.42 ಇದೆ. ಅನೇಕ ಸದಸ್ಯರು ಶಿಕ್ಷಕರ ಕೊರತೆ ಇದೆ ಎಂದು ಹೇಳಿದ್ದಾರೆ. ಆದುದರಿಂದ ನಾವು ಈಗಾಗಲೇ ಒಂದು ಸಾವಿರ ಶಿಕ್ಷಕರನ್ನು ನೇಮಕ ಮಾಡಕೊಳ್ಳಬೇಕು ಎಂದು ಆರ್ಡರ್ ಜಾರಿ ಮಾಡಿದ್ದೇವೆ. ಮತ್ತು ಅನೇಕ ಕಡೆ ರೆಕ್ರೂಟ್‌ಮೆಂಟ್ ಕೂಡ ಆಗಿದೆ. ಎಲ್ಲೆಲ್ಲಿ ಡಿ.ಡಿ.ಪಿ.ಐ. ಇಲ್ಲ ಅಂಥಾ ಕಡೆ ಡಿ ಎಲ್ ಆರ್.ಸಿ. ಅಂತ ಒಂದು ಕಮಿಟಿ ಫಾರಂ ಮಾಡಿ ಅಂಥಾ ಕಡೆ ಇಂಟರ್‌ವ್ಯೂ ಕಂಡಕ್ಟ್ ಮಾಡಿ ಸಾಧ್ಯವಾದಷ್ಟು ಶಿಕ್ಷಕರನ್ನು ಎಲ್ಲಿ ಆವಶ್ಯಕತೆ ಇದೆಯೋ ಅಂಥಾ ಕಡೆ ಒದಗಿಸಬೇಕು ಅನ್ನುವ ಯೋಚನೆ ಇದೆ. ಇದನ್ನು ಆದಷ್ಟು ಬೇಗ ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತು ಇಷ್ಟೇ ಅಲ್ಲದೆ ಈ ವರ್ಷ ಇನ್ನೂ ಒಂದು ಸಾವಿರ ಶಿಕ್ಷಕರನ್ನು ಕೇಳಿದ್ದಾರೆ. ಅದೂ ಕೂಡ ನಮ್ಮ ಪ್ಲಾನ್‌ನಲ್ಲಿ ಇದೆ, ಅದನ್ನೂ ಸಹ ಕೊಡುತ್ತೇವೆ ಅನ್ನುವ ಭರವಸೆಯನ್ನು ನಮ್ಮ ಹಣಕಾಸಿನ ಇಲಾಖೆಯವರು ಕೊಟ್ಟಿದ್ದಾರೆ. ಅವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿ ಅವರ ಒಪ್ಪಿಗೆ ಸಿಕ್ಕಿದ ನಂತರ ಇನ್ನೂ ಒಂದು ಸಾವಿರ ಶಿಕ್ಷಕರನ್ನು ಈ ವರ್ಷವೇ ತೆಗೆದುಕೊಂಡರೆ ಈ ವಿದ್ಯಾಕ್ಷೇತ್ರದಲ್ಲಿ ಶಿಕ್ಷಕರ ಕೊರತೆ ಸ್ವಲ್ಪಮಟ್ಟಿಗೆ ಬಗೆಹರಿಯಬಹುದು ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಅನೇಕ ಸದಸ್ಯರು ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ವಿಷಯದ ಬಗ್ಗೆ ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಇದರ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ಈ ಪ್ರೈಮರಿ ಶಾಲೆಗೆ ಎರಡು ವರ್ಷದ ಏನು ಹಣ ಖರ್ಚು ಮಾಡಿದ್ದರೋ ಅದಕಿಂತಲೂ ಜಾಸ್ತಿ ಹಣ ಈ ವರ್ಷ ಖರ್ಚು ಮಾಡಿದ್ದೇವೆ. ಮತ್ತು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಹಿಂದೆಂದೂ ಕೂಡ ಇಷ್ಟೊಂದು ಹಣ ಖರ್ಚು ಮಾಡಿರಲಿಲ್ಲ ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ಹೋದವರ್ಷ ಒಂದು ಕೋಟಿ 25 ಲಕ್ಷ ರೂಪಾಯಿ ಈ ಪ್ರೈಮರಿ ಶಾಲೆಯ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ಗೆ ಖರ್ಚು ಮಾಡಿದ್ದೇವೆ. ಅದರಲ್ಲಿ ಈಗ 1730 ರೂಮುಗಳು ಸಿದ್ಧವಾಗಿವೆ. ಈ ವರ್ಷ 72 ಸಾವಿರ ರೂಮುಗಳನ್ನು ಕಟ್ಟಿಸಬೇಕು ಎಂದು ಯೋಚನೆ ಇಟ್ಟುಕೊಂಡಿದ್ದೇವೆ. ಆದರೆ ಕೆಲವು ಜನ ಹಳ್ಳಿಗಳಲ್ಲಿ ಇರತಕ್ಕಂಥಾವರು ಏನು ಹೇಳುತ್ತಾರೆ ಎಂದರೆ ಈಗ ನಾವು 4500 ರೂಪಾಯಿ ಏನು ಒಂದು ಕಾಂಟ್ರಿಬ್ಯೂಷನ್ ಅನ್ನು ಈ ಬಿಲ್ಡಿಂಗ್ ಕಟ್ಟಿಸಲು ಕೊಡುತ್ತಿದ್ದೇವೋ ಅದನ್ನೂ ಇನ್ನೂ ಹೆಚ್ಚಿಸಬೇಕು, ನಾವು ಹಳ್ಳಿಯಲ್ಲಿರತಕ್ಕಂಥಾವರು ಇದಕ್ಕೆ ಹೆಚ್ಚು ಕಾಂಟ್ರಿಬ್ಯೂಷನ್ ಕೊಡುವುದಕ್ಕಾಗುವುದಿಲ್ಲ, ಎಂದು ಹೇಳುತ್ತಾರೆ. ಮತ್ತು ಇನ್ನೇನು ಹೇಳುತ್ತಾರೆ ಎಂದರೆ ಸರ್ಕಾರದವರೇ ಪೂರ್ತಾ 10 ಸಾವಿರ ರೂಪಾಯಿ ಹಾಕಿಬಿಟ್ಟು ಕಟ್ಟಿಸಿಕೊಡಬೇಕು ಅನ್ನುವ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಎರಡು ವರ್ಷದ ಹಿಂದೆ ಈ ಬಗ್ಗೆ ಏನಿತ್ತು ಎಂದರೆ ಪ್ರತಿಯೊಂದು ತಾಲ್ಲೂಕು ಬೋರ್ಡಿನಲ್ಲಿ ಏನು ಒಂದು ವರಮಾನ ಇತ್ತೋ ಅದಕ್ಕೆ ತಕ್ಕಂತೆ 2 ಸಾವಿರ ರೂಪಾಯಿ ಮಾತ್ರ ಕೊಡುತ್ತಾ ಇದ್ದೆವು. ಈಗ ಅದನ್ನು ನಾವು 4500 ರೂಪಾಯಿಗೆ ಹೆಚ್ಚಿಸಿದ್ದೇವೆ. ಹಳ್ಳಿಗಳಲ್ಲಿರತಕ್ಕಂಥಾ ಜನರು ಆ ಮಕ್ಕಳ ತಂದೆತಾಯಿಗಳು, ಮತ್ತು ಅಲ್ಲಿರತಕ್ಕಂಥಾ ರೈತರು ಮುಂದೆ ಬಂದು ಸಹಾಯ ಮಾಡಿ ಈ ಶಾಲಾ ಕಟ್ಟಡಗಳನ್ನು ಹೆಚ್ಚಿಗೆ ಕಟ್ಟಿಸಲಿ ಅನ್ನುವ ಒಂದು ಉದ್ದೇಶದಿಂದ ಮೊದಲು 2 ಸಾವಿರ ರೂಪಾಯಿ ಇದ್ದುದನ್ನು ಈಗ 4500

ರೂಪಾಯಿ ಮಾಡಿದ್ದೇವೆ. ಮತ್ತು ಇದಕ್ಕೆ ಒಳ್ಳೆಯ ಪ್ರೋತ್ಸಾಹ ರೀತಿಯಲ್ಲಿ ಬಂದಿದೆ ಅಂತ ಹೇಳುತ್ತೇನೆ. ಆದುದರಿಂದ ಈವೊತ್ತು ನಾವು 1730 ರೂಮುಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಯಿತು. ಈ ವರ್ಷ ಇನ್ನೂ 2 ಸಾವಿರ ರೂಮುಗಳನ್ನು ಕಟ್ಟಿಸಬೇಕು ಅನ್ನುವ ಒಂದು ಯೋಚನೆ ಇಟ್ಟುಕೊಂಡಿದ್ದೇವೆ. ಅದು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲ ಕಟ್ಟುತ್ತೇವೆ ಎನ್ನುತ ಕಂಥಾ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ನಾನೂ ಸಹ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಾನು ಯೀಲ್ಡ್ ಆಗಿಲ್ಲ.

ಶ್ರೀ ಸಿ ಬೈರೇಗೌಡ.—ತಾವು ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ ನಾನು ಈ ಮಾತನ್ನು ಹೇಳಿದರೆ ಮುಂದೆ ನೀವು ಇದರ ಬಗ್ಗೆ ಹೇಳುದದಕ್ಕೆ ನಿಮ್ಮ ಕೆಲಸ ಸ್ವಲ್ಪ ಸುಲಭ ಮಾಡಿಕೊಡುತ್ತೇನೆ. ಅದೇನೆಂದರೆ ತಾಲ್ಲೂಕು ಬೋರ್ಡ್‌ನವರು ಮತ್ತು ಪಂಚಾಯತಿಯವರು ತಮ್ಮ ವಂತಿಗೆ ಇಷ್ಟು ಕೊಡಬೇಕು ಅಂತ ಸರ್ಕಾರ ಅಜ್ಞೆ ಮಾಡಿದರೆ ಆದಷ್ಟು ಜಾಗ್ರತೆ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದನ್ನು ಮಾನ್ಯ ಮಂತ್ರಿಗಳಿಗೂ ಹೇಳಬೇಕಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಾನು ಯೀಲ್ಡ್ ಆಗಿಲ್ಲಾ.

ಆವಾಗ ಒಂದು ಕೋಣೆಗೆ 2 ಸಾವಿರ ರೂಪಾಯಿ ಅವರು ಕೊಟ್ಟಿದ್ದರೆ ಆಗುತ್ತಿತ್ತು. ಒಟ್ಟಿನಲ್ಲಿ ಕಾಲು ಭಾಗ ಪಬ್ಲಿಕ್ ಕಾಂಟ್ರಿಬ್ಯೂಷನ್, ಇನ್ನು ಕಾಲು ಭಾಗ ತಾಲ್ಲೂಕು ಬೋರ್ಡ್ ಕಾಂಟ್ರಿಬ್ಯೂಷನ್ ಕೊಟ್ಟಿದ್ದರೆ ಇನ್ನು ಉಳಿದ್ದು ಸರ್ಕಾರದ್ದು ಸೇರಿದ್ದರೆ ಒಂದು ಕೋಣೆಗೆ 4 ಸಾವಿರ ರೂಪಾಯಿನಲ್ಲೇ ಆಗುತ್ತಿತ್ತು.

ಶ್ರೀ ಸಿ. ಬೈರೇಗೌಡ.—ನಮ್ಮ ತಾಲ್ಲೂಕು ಬೋರ್ಡ್‌ನವರು ತಮ್ಮ ವಂತಿಗೆಯನ್ನು ಕೊಡಲು ಸಿದ್ಧರಾಗಿದ್ದಾರೆ 4 ಸಾವಿರ ರೂಪಾಯಿ ಆಗಲಿ ಅಥವಾ 5 ಸಾವಿರ ರೂಪಾಯಿ ಆಗಲಿ ತಮ್ಮ ವಂತಿಗೆಯನ್ನು ಕೊಡಲು ನಿರ್ಧರಿಸಿದರೆ ಇದಕ್ಕೆ ತಾವು ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಾಲ್ಲೂಕು ಮಂಡಲಿಯವರಾಗಲಿ ಅಥವಾ ಮುನಿಸಿಪಾಲಿಟಿಯವರಾಗಲಿ ಹಾಗೇನಾದರೂ ಮಾಡಿದರೆ ಒಳ್ಳೆಯದು. ನಾವೂ ಕೂಡ ಸಹಾಯ ಮಾಡುತ್ತೇವೆ. ಆದರೆ ಅವರು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಾರೋ ನೋಡೋಣ. ಈ ವಿಷಯದ ಬಗ್ಗೆ ತಮಗೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಒಬ್ಬ ಶಿಕ್ಷಕರಿಗೆ ಒಂದು ಕೋಣೆ ಅಂತ ಇಟ್ಟುಕೊಂಡರೂ ಕೂಡ ಒಂದು ಲಕ್ಷ ಒಂದು ಸಾವಿರ ಕೋಣೆಗಳು ಬೇಕಾಗುತ್ತವೆ ಎಂದು ನನಗೆ ಕಾಣಿಸುತ್ತದೆ. ಅದರಲ್ಲಿ 40 ಸಾವಿರ ಕೋಣೆಗಳು ಈವಾಗ ಇವೆ. ಇನ್ನು 61 ಸಾವಿರ ಕೋಣೆಗಳನ್ನು ಕಟ್ಟಿಸಬೇಕಾಗುತ್ತದೆ. ಒಂದು ಕೋಣೆಗೆ 10 ಸಾವಿರ ರೂಪಾಯಿ ಅಂತ ಲೆಕ್ಕಾಚಾರ ಹಾಕಿ ಕೊಂಡರೂ ಕೂಡ ಉಳಿದ ಕೋಣೆಗಳನ್ನು ಕಟ್ಟಿಸುವುದಕ್ಕೆ 6 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅದನ್ನು ಅವರು ಒದಗಿಸಿಕೊಟ್ಟರೆ ನಾಳೆ ದಿವಸವೇ ಎಲ್ಲಾ ಕಡೆಯೂ ಜಾರಿಗೆ ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ನೌಕರರಿಗೇನೇ 40 ಕೋಟಿ ರೂಪಾಯಿ ಖರ್ಚು ಮಾಡುವಾಗ ಇದಕ್ಕೆ ತಾವು ಮತ್ತಷ್ಟು ಹೆಚ್ಚು ಹಣ ಹಾಕಿ ಏತಕ್ಕೆ ಸಹಾಯ ಮಾಡಬಾರದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಾನು ಅದರಲ್ಲಿ ಭಾಗಿಯಾಗುವುದಿಲ್ಲ. ಅಧ್ಯಕ್ಷರೇ, ಅದಕ್ಕಾಗಿ ನಾನು ಈ ಶಾಲಾ ಕಟ್ಟಡಗಳ ಬಗ್ಗೆ ವಿವರವಾಗಿ ಸರ್ವೆ ಮಾಡಿಸಿದ್ದೇನೆ. ಪ್ರತಿಯೊಂದು ಹಳ್ಳಿಯಲ್ಲೂ ಸರ್ವೆ ಮಾಡಿಸಿದ್ದೇನೆ. ನಮ್ಮಲ್ಲಿ ಈಗ ಎಷ್ಟು ರೂಮುಗಳು ಇವೆ, ಇನ್ನು ಎಷ್ಟು ರೂಮುಗಳು ಬೇಕಾಗುತ್ತವೆ ಎನ್ನುವುದನ್ನು ಕಂಡುಹಿಡಿದಿದ್ದೇನೆ. ಆ ಪ್ರಕಾರವಾಗಿ ನಮಗೆ ಇನ್ನೂ 61 ಸಾವಿರ ಕೋಣೆಗಳು ಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಇದನ್ನು ಪೂರೈಸಬೇಕಾದರೆ ಇನ್ನೂ 10 ವರ್ಷಗಳ ಕಾಲ ಬೇಕಾಗುತ್ತದೆ. ಆದುದರಿಂದ ನಾವು ಈಗ ಏನು ಮಾಡಿದ್ದೇವೆ ಎಂದು ಒಂದು ಕೋಣೆಕಟ್ಟಿಸಲು 4,500 ರೂಪಾಯಿ ಬೇಕಾಗುತ್ತದೆ ಅಂತ ಒಂದು ಅಂದಾಜು ಮಾಡಿಕೊಂಡಿದ್ದೇವೆ ಎಲ್ಲಿ ಈ ಬಗ್ಗೆ ತಮ್ಮ ಕಾಂಟ್ರಿಬ್ಯೂಷನ್

ಕೊಟ್ಟು ಕಟ್ಟಡವನ್ನು ಕಟ್ಟಿಸಲು ಜನರು ಮುಂದೆ ಬರುತ್ತಾರೋ ಅವರಿಗೆ ಸಹಾಯ ಮಾಡುತ್ತೇನೆ. ಈ ವಿಷಯದಲ್ಲಿ ನಾನು ಈ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳಬೇಕಾಗುತ್ತದೆ. ನಾವು ಏನು 4,500 ರೂಪಾಯಿ ಕೊಡುತ್ತೇವೊ ಅವರೇ ಆ ಲೋಕಲ್ ಮಟ್ಟದಲ್ಲೇ ಅಷ್ಟರಲ್ಲೇ ಅವರು ಒಂದು ಕೋಣೆಯನ್ನು ಕಟ್ಟಿಸಿಕೊಂಡರೆ ನಮ್ಮದೇನೂ ಅಭ್ಯಂತರ ಇಲ್ಲ. ನಾವು ಇನ್ನೇನು ಮಾಡಿದ್ದೇವೆ ಎಂದರೆ ಇಂಥಾದ್ದೇ ಸ್ಪೆಷಲ್ ಡಿಸೈನ್ ಇರಬೇಕು ಅಂತ ಆಗಲಿ ಹೀಗೆ ಇರಬೇಕು ಅಂತ ಆಗಲಿ ಮಾಡಿಲ್ಲ. ಅವರಿಗೆ ಯಾವ ಡಿಸೈನ್ ಬೇಕೋ ಆರೀತಿ ಕಟ್ಟಿಸಿಕೊಳ್ಳಲಿ. ಆ ಲೋಕಲ್ ಮಟ್ಟದಲ್ಲಿ ತಮಗೆ ಹೇಗೆ ಇರಬೇಕೋ ಹಾಗೆ ಕಟ್ಟಿಸಿಕೊಳ್ಳಲಿ. ನಾವು ಕೊಡುವ 4,500 ರೂಪಾಯಿನಲ್ಲೇ ಕಟ್ಟಿಸಿಕೊಂಡರೆ ಕಟ್ಟಿಸಿಕೊಳ್ಳಲಿ. ಅವಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಈಗ ಏನು ಸರ್ಕಾರದವರು ಕೊಡುತ್ತಿದ್ದಾರೆ, ಅದರ ಜೊತೆಗೆ ಪಂಚಾಯಿತಿಯವರು, ತಾಲ್ಲೂಕ್ ಬೋರ್ಡ್‌ನವರು ಮತ್ತು ಮುನಿಸಿಪಾಲಿಟಿಯವರು ಸಹ ಯಾರಿಗೆ ಕೊಡುವ ಶಕ್ತಿ ಇದೆಯೋ ಅಂತಹವರು ಕೊಡುವುದಕ್ಕೆ ತಾವು ಅನುಮತಿ ಕೊಟ್ಟದ್ದೇ ಆದರೆ ಇನ್ನು ಎರಡು ವರ್ಷಗಳಲ್ಲಿಯೋ ನಿಮ್ಮ ಬೇಡಿಕೆಯ ಪೈಕಿ ಮುಕ್ಕಾಲು ಭಾಗದಷ್ಟನ್ನು ಕಟ್ಟಿಸಲು ಸಾಧ್ಯವಾಗುತ್ತದೆ.

ಶ್ರೀ ಎಚ್. ಟಿ ಕೃಷ್ಣಪ್ಪ.—ಈಗ ಸರ್ಕಾರದವರು ಈ ಬಗ್ಗೆ ಒಂದು ಸುತ್ತೋಲೆಯನ್ನು ಏನು ಕಳುಹಿಸಿದ್ದಾರೆ, ಅದರ ಪ್ರಕಾರ ಆರ್ಥಿಕವಾಗಿ ಶಕ್ತಿ ಇರತಕ್ಕಂಥ ಪಂಚಾಯಿತಿಗಳಾಗಲೀ ತಾಲ್ಲೂಕು ಬೋರ್ಡಿನವರಾಗಲೀ, ಸ್ಥಳೀಯ ಸಂಸ್ಥೆಗಳೇ ಆಗಲೀ ಹಣ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದನ್ನು ಪುನರ್‌ಪರಿಶೀಲನೆ ಮಾಡುವುದರ ಮೂಲಕ ಹಣ ಕೊಡುವುದಕ್ಕೆ ಶಕ್ತಿ ಇರುವವರು ಕೊಡಬಹುದೆಂದು ಮಾಡಿದರೆ ಒಳ್ಳೆಯದು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಈಗ ಪಂಚಾಯಿತಿಯವರು ಕೊಡುವುದಕ್ಕೆ ಅವಕಾಶವಿದೆ.

6-30 P. M.

ಶ್ರೀ ಸಿ. ಬೈರೇಗೌಡ.—ಅವಕಾಶವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದು ತಿಳಿಸುತ್ತೇನೆ.

ಇನ್ನು ಶಾಲಾ ಕಟ್ಟಡಗಳ ರಿಪೇರಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದಕ್ಕಾಗಿ ನಾವು ಸುಮಾರು 35 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ. ಎಲ್ಲೆಲ್ಲಿ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕೋ ಅಲ್ಲೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ಇದರ ಜೊತೆಗೆ ಹತ್ತು ಲಕ್ಷ ರೂಪಾಯಿಗಳನ್ನು ಸ್ಪೆಷಲ್ ರಿಪೇರ್ಸ್‌ಗಾಗಿ ಇಟ್ಟಿದ್ದೇವೆ. ಹೆಚ್ಚಿನ ರಿಪೇರಿ ಮಾಡಬೇಕಾದ ಸಂದರ್ಭ ಬಂದಾಗ ಈ ಹತ್ತು ಲಕ್ಷ ರೂಪಾಯಿಗಳ ಪೈಕಿ ಹಣವನ್ನು ಒದಗಿಸಲಾಗುತ್ತದೆ. ಈ ರೀತಿಯಿಂದ ಸರ್ಕಾರದವರು ಶಾಲಾ ಕಟ್ಟಡಗಳ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ.

ಇನ್ನು ಅಪ್-ಗ್ರೇಡಿಂಗ್ ಕ್ವಾಲಿಟಿ ಆಫ್ ಎಜ್ಯುಕೇಷನ್ ಬಗ್ಗೆ ನಮ್ಮ ಮಾನ್ಯ ಯಾಹ್ಯಾ ಸಾಹೇಬರು ಈಗಾಗಲೇ ಹೇಳಿದ್ದಾರೆ. ಎರಡು ವರ್ಷಗಳ ಹಿಂದೆ ಈ ಒಂದು ಕ್ವಾಲಿಟಿಯನ್ನು ಇಂಪ್ರೂವ್ ಮಾಡುವುದಕ್ಕಾಗಿ ಹೊಸದಾಗಿ ಒಬ್ಬರು ಡೈರೆಕ್ಟರನ್ನು ನೇಮಕ ಮಾಡಿದ್ದೇವೆ. ಅವರು ಪ್ರತಿಯೊಂದು ಜಿಲ್ಲೆಗೂ ಭೇಟಿ ಕೊಟ್ಟು ಸಿಲಬಸ್ ಆಗಲೀ, ಎಕ್ವಿಪ್‌ಮೆಂಟ್ಸ್ ಆಗಲೀ, ಯಾವ ಯಾವ ರೀತಿಯಿಂದ ಇಂಪ್ರೂವ್ ಮಾಡಬೇಕೆಂಬುದನ್ನು ಅವರು ಗಮನದಲ್ಲಿಟ್ಟುಕೊಂಡು ಬಂದು ಅದನ್ನೆಲ್ಲಾ ಅವರು ಸಿಲಬಸ್ ಕಮಿಟಿ ಮುಂದೆ ಇಟ್ಟು ಅನೇಕ ಸಲಹೆಗಳನ್ನು ಸಹ ಕೊಡುತ್ತಿದ್ದಾರೆ. ಸರ್ಕಾರ ಸಹ ಈ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದೆ.

ಇನ್ನು ಟೇಕನ್ ಓವರ್ ಸ್ಕೂಲ್‌ಗಳ ಬಗ್ಗೆ ಇಬ್ಬರು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಶೀನ್ನಾಳಿ ಚಂದ್ರಶೇಖರ್ ಅವರು ಸಹ ಹೇಳಿದ್ದಾರೆ.

ಅಧ್ಯಕ್ಷರು.—ಅವರು ಈಗ ಸಭೆಯಲ್ಲಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮೊನ್ನೆ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಮತ್ತು 3 ವಾರಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದೇನೆ. ಈ ಟೇಕನ್ ಓವರ್ ಸ್ಕೂಲುಗಳ ಬಗ್ಗೆ ಪ್ರೊಸಸ್ ಎಲ್ಲಾ ಕಂಪ್ಲೀಟ್ ಆದಮೇಲೆ, ಅಲ್ಲಿ ಕೆಲಸ ಮಾಡುತ್ತಿರುವ

ಏರಿಗೆ ಯಾವ ಯಾವ ಬೆನಿಫಿಟ್‌ಗಳನ್ನು ಕೊಡಬೇಕೋ ಅದನ್ನು ಕೊಡುತ್ತೇವೆ. ಅನಂತರ ಅವರ ಪ್ರಮೋಷನ್ ಆಗಲೀ ಅವರ ಸೀನಿಯಾರಿಟಿಯಾಗಲೀ ಮೇನ್‌ಟೇನ್ ಮಾಡಬಹುದು. ಅನೇಕ ಮಾನ್ಯ ಸದಸ್ಯರು ಈ ಇಲಾಖೆಯ ಬಗ್ಗೆ ಕೆಲವು ಒಳ್ಳೆಯ ಮೆಚ್ಚುಗೆಯ ಮಾತುಗಳನ್ನು ಹೇಳಿದ್ದಾರೆ ಅನೇಕ ಜನರು ಟೀಕೆಗಳನ್ನು ಸಹ ಮಾಡಿದ್ದಾರೆ. ಈ ಇಲಾಖೆಯಲ್ಲಿ ಅನೇಕ ದೋಷಗಳಿವೆ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಎಲ್ಲ ದೋಷಗಳನ್ನು ಕೆಲವೇ ಕಾಲದಲ್ಲಿ ನಾವು ಸರಿಪಡಿಸುವುದಕ್ಕಾಗುವುದಿಲ್ಲ ಆದರೆ ಈ ದಿಶೆಯಲ್ಲಿ ಇರತಕ್ಕಂಥ ದೋಷಗಳನ್ನು ಸರಿಪಡಿಸುವುದಕ್ಕೆ ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆಂಬುದನ್ನು ಮಾನ್ಯ ಸದಸ್ಯರೂ ಕೂಡ ಅರಿತುಕೊಳ್ಳಬೇಕು. ಮತ್ತು ಮಾನ್ಯ ಸದಸ್ಯರೂ ಸಹ ಇದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು, ಈ ನನ್ನ ಬೇಡಿಕೆಯನ್ನು ಮಾನ್ಯ ಸದಸ್ಯರೆಲ್ಲಾ ಸರ್ವಾನುಮತದಿಂದ ಒಪ್ಪುತ್ತಾರೆಂದು ನಂಬಿಕೊಂಡು ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

Madam Speaker.—I shall now put the demands to the vote of the House. The question is :

"That respective sums not exceeding those mentioned in the Demands be granted to the Government to defray the charges which will come in course of payment during the financial year ending with 31st March 1978 in respect of demand Nos. 20 and 22".

The motion was adopted and the sums were granted

As ordered by the Chair the motion of Demands for grants adopted by the House are reproduced below.

Demand No. 20 Higher Education and Wakfs

"That a sum not exceeding Rs. 21,20,14,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Higher Education and Wakfs".

Demand No. 22.—Primary and Secondary Education

"That a sum not exceeding Rs 108,36,48,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of 'Primary and Secondary Education".

Madam Speaker.—The House will now adjourn and meet tomorrow at 9 A. M.

The House adjourned at Thirty-five Minutes Past Six of the Clock to meet again at Nine of the Clock on Saturday, the 2nd July 1977.

Vol. LVI—L.A.—30

WD 7126—GPB